for repairs and maintenance (taluk-war details may be given);

(*b*) the action taken by them in this behalf?

A.—Sri H. M. CHANNABASAPPA (Minister for Public Works and Electricity).—

(*a*) & (*b*) Consequent on the abolition of the District Boards and District Local Boards the question of taking over to the control of P.W.D. for maintenance some of the important roads in each District, which cannot be maintained by the Taluk Boards is under consideration of Government. Details are being worked out.

ADDITIONAL AND SUPPLEMENTARY DEMANDS FOR GRANTS FOR THE YEAR 1959-60 (I INSTALMENT).

Demand No. 2—Land Revenue.

7. *Land Revenue.*

Mr. SPEAKER.—Motion moved:

"That a further sum not exceeding Rs. 3,50,000 be granted to the Government to defray the charges which will come in course of payment during the year ending 31st day of March 196 , in respect of 'Land Revenue'."

According to the procedure that is followed, all the Demands are before the House and the Hon'ble Members may make remarks in respect of all the Demands.

†ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಸ್ವಾಮಿ, ಈಗ ಸರ್ಕಾರದವರು ನಮ್ಮ ಮುಂದಿಟ್ಟಿರತಕ್ಕ 1 ಕೋಟಿ, 32 ಲಕ್ಷ, 33 ಸಾವಿರದ, 237 ರೂಪಾಯಿಗಳ ಅಡಿಷನಲ್ ಮತ್ತು ಸಪ್ಲಿಮೆಂಟರಿ ಗ್ರಾಂಟ್‌ಗಳನ್ನು ಮಂಜೂರು ಮಾಡಿಕೊಡಬೇಕೆಂದು ನಮ್ಮನ್ನು ಕೇಳಿದ್ದಾರೆ. ಆದರೆ ಇಲ್ಲಿ ಈ ಹಿಂದೆ ಕೇಳುವಾಗಲೇ ಕಡಮೆ ಕೇಳಿರತಕ್ಕ ಈ 22,000 ರೂಪಾಯಿಗಳ ವಿಚಾರದಲ್ಲಿ ನಾನೇನೂ ಸರ್ಕಾರದವರನ್ನು ಅಷ್ಟಾಗಿ ಪ್ರಶ್ನೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ.

ಸ್ವಾಮಿ, ಸರ್ಕಾರದವರಿಗೆ ಈ ಬಡ್ಜೆಟ್ ಮಾಡುವುದು ಎಂದರೆ ಎಷ್ಟೋ ಸಾರಿ ನಮ್ಮ ಮುಂದೆ ಹಣ ಕೇಳುವುದನ್ನು ಕಲಿತುಕೊಂಡಿದ್ದಾರೆ. ಅದೇಕೆ ಆ ರೀತಿ ಮಾಡುತ್ತಾರೋ ನನಗೆ ಗೊತ್ತಿಲ್ಲ. ಅವರಿಗೆ ಒಂದೇ ಸಾರಿ ಪೂರ್ಣವಾಗಿ ಬಡ್ಜೆಟ್ಟನ್ನು ತಯಾರು ಮಾಡಬೇಕೆಂಬುದೇ ಇಲ್ಲ. ಏನೋ ಅಲ್ಪ ಸ್ವಲ್ಪ ಮೊಬಲಗು ಯಾವುದೋ ಒಂದು ಐಟಂನಲ್ಲಿ ವ್ಯತ್ಯಾಸ ಬಂದರೆ, ಆಗ ಸಪ್ಲಿಮೆಂಟರಿ ಅಥವಾ ಡಿಫಿಸಿಟ್ ಎಂದು ಹೇಳಿ ಹೆಚ್ಚುವರಿ ಬೇಡಿಕೆ ಕೇಳುವುದೇನೋ ನ್ಯಾಯ. ಈ ರೀತಿ ಸಪ್ಲಿಮೆಂಟರಿ ಡಿಮ್ಯಾಂಡ್‌ಗಳನ್ನು ಆಗಾಗ್ಗೆ ಕೇಳುವುದರಿಂದ ಮುಂದೆ ಏನಾಗುತ್ತದೆಂಬುದನ್ನು ಚೆನ್ನಾಗಿ ಯೋಚನೆ ಮಾಡಬೇಕು. ಇದರಲ್ಲಿ ವರ್ಷಕ್ಕೆ ದೇಶದಲ್ಲಿ ಇಷ್ಟು ಕೆಲಸಗಳಾಗಬೇಕು. ಆ ಕೆಲಸ ಕಾರ್ಯಗಳಿಗೆ ಇಷ್ಟು ಮೊಬಲಗು ಬೇಕಾಗುತ್ತದೆ ಎಂದು ಒಂದು ಕ್ರಮವಾಗಿ ಪ್ರೋಗ್ರಾಂ ಹಾಕಿಕೊಳ್ಳುವ ಮತ್ತು ಒಂದು ನಿಗದಿಯಾದ ನೀತಿಯೇ ಇಲ್ಲವೆಂದು ನನಗೆ ತೋರುತ್ತದೆ. 1947ರಿಂದೀಚೆಗೆ ಅನುಸರಿಸುತ್ತಿರುವ ವಿಧಾನವನ್ನು ನೋಡಿದರೆ ನನಗೆ ಬಹಳ ಆಶ್ಚರ್ಯವಾಗುತ್ತದೆ. ಅದಕ್ಕೆ ಮುಂಚೆ ಬೇಜವಾಬ್ದಾರಿ ಸರ್ಕಾರ ಎಂದು ಏನು ಹೇಳುತ್ತಿದ್ದೆವೋ ಅವರು ಬಡ್ಜೆಟ್ ತಯಾರು ಮಾಡುವಾಗ ಏನೋ ಸ್ವಲ್ಪ ಹೆಚ್ಚು ಕಡಮೆ ಹಣವನ್ನು ಯಾವಾಗಲೋ ಒಂದು ಸಾರಿ ಕೇಳುತ್ತಿದ್ದರೆ ಹೊರತು ಇವರ ಹಾಗೆ ಬೇಕುಬೇಕಾದ ಹಾಗೆ ಒಂದು ವರ್ಷಕ್ಕೆ ಸರಿಯಾದ ಕಾರ್ಯಕ್ರಮವನ್ನು ಇಟ್ಟುಕೊಳ್ಳದೆಯೇ ವಿವೇಚನೆಯಿಲ್ಲದೆ ಮನಸಾ ಇಚ್ಛೆಯಿಂದ ಬಡ್ಜೆಟ್ಟನ್ನು ತಯಾರು ಮಾಡುತ್ತಿರಲಿಲ್ಲ. ಈ ತರಹ ಸಪ್ಲಿಮೆಂಟರಿ ಗ್ರಾಂಟುಗಳನ್ನು ಕೇಳುವ ಉದ್ದೇಶ ಎಲ್ಲೋ ಇವರಿಗೆ ಯಾರಾದರೂ ಹಾರ ಹಾಕಿದಂತಹವರಿಗೆ, ಅಥವಾ ಎಲ್ಲಾದರೂ ಮೆರವಣಿಗೆ ಮಾಡಿಸಿ ಖುಷಿಯನ್ನುಂಟು ಮಾಡಿದವರಿಗೆ ಹಣವನ್ನು ಕೊಡುವುದಕ್ಕೋಸ್ಕರವೆಂದು ನನಗೆ ಕಾಣುತ್ತದೆ. ಈಚೆಗೆ ಈ ರೀತಿ ಒಂದು ವರ್ಷಕ್ಕೆ ಎಷ್ಟೋ ಸಾರಿ ಗ್ರಾಂಟುಗಳನ್ನು ಕೇಳುವ ಪದ್ಧತಿಯನ್ನು ಹೆಚ್ಚಿಸಿಕೊಂಡು ಬಂದಿದ್ದಾರೆ. ಇದು ಒಳ್ಳೆಯದಲ್ಲ. ಇದಕ್ಕೆ 2 ಕಾರಣಗಳಿವೆ. ವೃಥಾ ಈ ವಿಷಯದ ಮೇಲೆ ಈ ಸಭೆಯಲ್ಲಿ ಚರ್ಚೆಮಾಡಿ ಸಭೆಯ ಕಾಲವನ್ನು ಖರ್ಚುಮಾಡುತ್ತಿದ್ದೀರಿ, ಮತ್ತೊಂದು ಸಭಾ ಕಾರ್ಯಕಲಾಪಗಳಲ್ಲಿ ಒಂದು ನಿಯಮ, ಒಂದು ಗೊತ್ತಾದ ನೀತಿಯನ್ನು ಅನುಸರಿಸುತ್ತಿಲ್ಲ. ಬಡ್ಜೆಟ್ ಅಧಿವೇಶನ ಹತ್ತಿರ ಬಂದಾಗ ಸೆಷನ್ ಮಾಡಬೇಕೋ, ಬೇಡವೋ ಎಂಬ ಯೋಚನೆ ನಿಮಗಿರುತ್ತದೆ. 1947ರಿಂದ ಬಂದಿರತಕ್ಕ ಕಾಂಗ್ರೆಸ್ ಸರ್ಕಾರದ ಚರಿತ್ರೆಯಲ್ಲಿ ಇದು ಒಂದಾಗಿದೆ. ಈ ಮಧ್ಯೆ ಬಡ್ಜೆಟ್ ಅಧಿವೇಶನ ಷುರು ಮಾಡುವುದಕ್ಕೆ ಮುಂಚೆ ಮುಂದಿನ ವರ್ಷ ಎಲ್ಲಿ ಅವಿಶ್ವಾಸ ನಿರ್ಣಯವನ್ನು ತಂದು ಏನು ಮಾಡಿಬಿಡುತ್ತಾರೋ, ಬಡ್ಜೆಟ್ ಅಧಿವೇಶನ ಮಾಡಬೇಕೋ, ಬೇಡವೋ ಎಂಬ ಭಯ ಬಂದಿರುತ್ತದೆ. ಈ ತರಹದಿಂದ ದೇಶವನ್ನು ಮುಂದೆ ತರಬೇಕಾದಂಥ ಒಂದು ವ್ಯವಸ್ಥೆಯನ್ನು ನಿಮ್ಮ ಗುಂಪು ಇನ್ನು ಹಾಕಿಲ್ಲ. ಅದು ಒಂದು ಅಧಿಕಾರದ ದಾಹ. ನೀವೇನು ಮಾಡುತ್ತೀರಿ? ಒಂದು ನಿಗದಿಯಾದ ಬಡ್ಜೆಟ್ಟನ್ನು ತಯಾರು ಮಾಡುವುದಕ್ಕೆ ನಿಮಗೆ ಕಾಲಾವಕಾಶವಾಗಲೀ, ಅಥವಾ ಆತ್ಮದಲ್ಲಿ ಒಂದು ನೆಮ್ಮದಿಯಾಗಲೀ ಇಲ್ಲದೆ ಈಗ ಈ ಸಪ್ಲಿಮೆಂಟರಿ ಡಿಮ್ಯಾಂಡನ್ನು, ಅಡಿಷನಲ್ ಗ್ರಾಂಟನ್ನು ಮಂಜೂರು ಮಾಡಬೇಕೆಂದು ನಮ್ಮನ್ನು ಕೇಳುತ್ತಿದ್ದೀರಿ. ನಿಮಗೆ ಯಾರುಯಾರು ಎಷ್ಟೆಷ್ಟು ಹಣ ಖರ್ಚುಮಾಡಿ, ಹಾರ ತುರಾಯಿಗಳನ್ನು ಹಾಕಿ ಮೆರವಣಿಗೆ ಮಾಡುತ್ತಾರೋ ಅಂತಹವರಿಗೆ ಹಣವನ್ನು ಹೆಚ್ಚು ಖರ್ಚು ಮಾಡುತ್ತಿದ್ದೀರಿ. ಅದು ವೇಸ್ಟ್ ಹೌದೋ ಅಲ್ಲವೋ ನಾನು ಹೇಳಬೇಕಾಗಿಲ್ಲ. ಆದರೆ ಖಚಿತವಾಗಿ ಇಂತಿಂತಹ ಪ್ರದೇಶಗಳಿಗೆ ಇಷ್ಟಿಷ್ಟು ಹಣ ಒದಗಿಸಬೇಕು, ಇಂತಿಂತಹ ಕೆಲಸಕಾರ್ಯಗಳಿಗೆ ಇಷ್ಟಿಷ್ಟು ಖರ್ಚಾಗುತ್ತದೆ ಎಂಬ ಒಂದು ನಿಗದಿಯಾದ ಕಾರ್ಯಕ್ರಮವೇ ನಿಮ್ಮಲ್ಲಿ ಇಲ್ಲ. ದೇಶಕ್ಕೆಲ್ಲಾ ಸಮನ್ವಯವಾಗಿ ಹಣದ

(ಶ್ರೀ ಬಿ. ಕೆ. ಪುಟ್ಟರಾಮಯ್ಯ)

ಖರ್ಚನ್ನು ವ್ಯವಸ್ಥೆ ಮಾಡುತ್ತಿಲ್ಲವೆಂದು ನಾನು ಕಟುವಾಗಿ ಟೀಕೆ ಮಾಡುತ್ತಾ ಇದ್ದೇನೆ. ವಿವೇಕದಿಂದ ರಾಜ್ಯಾಡಳಿತ ಮಾಡಿ. ನೀವು ಇಲ್ಲದಿದ್ದರೆ, ಬೇರೆ ಸರ್ಕಾರ ಬಂದು ಮಾಡುತ್ತದೆ. ಪೂರ್ಣವಾಗಿ ಬಡ್ಜೆಟ್ ತಯಾರು ಮಾಡಿ. ಇಲ್ಲದಿದ್ದರೆ ಹೆಚ್ಚು ಕಡಮೆ 2-3 ಲಕ್ಷ ರೂಪಾಯಿಗಳು ಲ್ಯಾಪ್ಸ್ ಆಗಬಹುದು.

ಅಧ್ಯಕ್ಷರು.—ಈ ಡಿಮ್ಯಾಂಡ್ ಯಾವ ಸ್ಕೋಪಿನಲ್ಲಿರುತ್ತದೋ ಅದಕ್ಕೆ ತಕ್ಕ ಹಾಗೆ ಮಾತನಾಡಿ. ಪ್ರತಿಯೊಂದು ಐಟಂಗೂ ಚರ್ಚೆ ಮಾಡುತ್ತಾ ಅದರಲ್ಲಿ ಹಾಗೆ ಮಾಡಿದ್ದಾರೆ, ಇದರಲ್ಲಿ ಹೀಗೆ ಮಾಡಿದ್ದಾರೆ ಎಂದು ಹೇಳುವುದು ಒಳ್ಳೆಯದಲ್ಲ. ಮಾರ್ಚ್‌ನಲ್ಲಿ ಬಡ್ಜೆಟ್ ಚರ್ಚೆ ಮಾಡಬೇಕಾಗಿ ಬರುತ್ತದೆ. ಆ ಕಾಲದಲ್ಲಿ ಎಲ್ಲವನ್ನೂ ವಿಶದವಾಗಿ ಹೇಳಿ. ಆಗ ಒಂದೊಂದು ಡಿಮ್ಯಾಂಡ್ ಮೇಲೆ ಹೆಚ್ಚಿನ ಕಾಲಾವಕಾಶವನ್ನು ತೆಗೆದುಕೊಂಡು ಮಾತನಾಡಬಹುದು.

Sri B. R. SUNTHANKAR.—According to parliamentary practice, new service can be treated as original estimates and can be discussed in detail. Most of the items found here are new services and according to the Procedure in the Lok Sabha new services are treated as original estimates and can be debated upon.

Mr. SPEAKER.—That is what I am saying. A member cannot make general remarks but can only speak on the specific estimate before him.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಇನ್ನು ಡಿಮ್ಯಾಂಡ್ ನಂಬರ್ 13. ಇದರಲ್ಲಿ ಐಟಂ 2ರಲ್ಲಿ

> "Staff has been created from the current year and as this actually enlarges the scope of the work undertaken by the Department and the expenditure on this establishment is likely to exceed Rs. 30,000 per annum......"

ಎಂದು ಹೇಳಿದೆ. ಇದನ್ನು ಆಗ ಮಾಡುವುದಕ್ಕೆ ಯೋಚನೆ ಇರಲಿಲ್ಲವೇ ? ಒಂದು ವೇಳೆ ಇದನ್ನು ಏಕೆ ಮಾಡಬೇಕು ? ಇಲಾಖೆಗಳಿಂದ ಏನಾದರೂ ಒಂದು ಮಹತ್ಕಾರ್ಯ ನಡೆದಿದೆಯೇ ? ಅದರಲ್ಲಿ ಏನಾದರೂ ಹಣ ಖರ್ಚು ಮಾಡಿರುವುದು ಕ್ರಮವಾಗಿದೆಯೇ, ಇಲಾಖೆ ಸರಿಯಾಗಿ ಕೆಲಸ ಮಾಡಿದೆಯೇ ಎಂಬುದನ್ನು ನೋಡುವುದೇ ಇಲ್ಲ. ಸಾಮಾನ್ಯವಾಗಿ ಒಬ್ಬ ಕಾನ್‌ಸ್ಟೇಬಲ್ ಬಸ್ಸಿನಲ್ಲಿ ಏನಾದರೂ ಕಳ್ಳತನವಾದರೆ ಹಿಡಿಯುತ್ತಾನೆಯೇ ಹೊರತು ದೊಡ್ಡದೊಡ್ಡ ಹುದ್ದೆಗಳಲ್ಲಿರುವವರು ಏನಾದರೂ ತಪ್ಪುಗಳನ್ನು ಮಾಡಿದರೆ ಅವರನ್ನು ಕಂಡುಹಿಡಿಯುವ ಕಾರ್ಯವನ್ನು ಇಲಾಖೆ ಮಾಡಲಿಲ್ಲ. ಇಂತಹ ಇಲಾಖೆಗಳಿಗೆ ವೃಥಾ ಹೆಚ್ಚು ಸ್ಟ್ಯಾಫ್ ಕೊಟ್ಟು ಅದಕ್ಕಾಗಿ ಹೆಚ್ಚು ಹಣ ಖರ್ಚು ಮಾಡುವುದು ಸುಮ್ಮನೆ ದಂಡ. ಹೆಚ್ಚು ಸ್ಟ್ಯಾಫನ್ನು ಈ ಇಲಾಖೆಗೆ ಕೊಡುವುದು ಅನಗತ್ಯ. ಬಡ್ಜೆಟ್ ಟೈಂನಲ್ಲಿ ಪ್ರೊವೈಡ್ ಮಾಡಲಿಲ್ಲವೆಂದು ಈಗ ಏನೂ ಕೊಡಬೇಕಾಗಿಲ್ಲ. ಈಗ ಈ ಇಲಾಖೆಯಿಂದ ದೇಶಕ್ಕೆ ಏನೂ ಪ್ರಯೋಜನವಾಗಲಿಲ್ಲ. ಈಗಿನ ನೀತಿಯನ್ನು ಬದಲಾವಣೆ ಮಾಡಬೇಕು. ಈ ಇಲಾಖೆಯು ಡೈರೆಕ್ಟರೇಟ್ ಬಗ್ಗೆ ಖಾಸಗೀ ಸಂಸ್ಥೆಗಳಲ್ಲಿ ಸರ್ಕಾರದ ಕೈವಾಡ ಇದೆಯೆಂದು ಹೇಳಬಹುದು. ಆದುದರಿಂದ ನೇರವಾಗಿ ಗೌರ್ನರ್ ಅವರ ಆಡಳಿತಕ್ಕೆ ಒಳಪಟ್ಟಂತೆ ಈ ಇಲಾಖೆಯನ್ನು ಡೈರೆಕ್ಟರೇಟ್ ಮಾಡಬೇಕೆ ವಿನಾ ಈ ರೀತಿ ನಡೆಸುವುದಾದರೆ ಅದರಲ್ಲಿ ಸರ್ಕಾರದ ಕೈವಾಡ ಇರುತ್ತದೆ. ಸರಿಯಾದ ರೀತಿಯಲ್ಲಿ ಡಿಸಿಷನ್ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಆದುದರಿಂದ ಇದನ್ನು ಚೈಫರ್‌ಕೇಟ್ ಮಾಡಿ ಗೌರ್ನರ್ ಅವರ ಆಡಳಿತಕ್ಕೆ ಒಳಪಡಿಸಬೇಕು. ನಮ್ಮ ನಿಮ್ಮ ಕೈಯಲ್ಲಿ ಇಟ್ಟುಕೊಂಡು ಖರ್ಚುಮಾಡುವಂಥಾದ್ದು ಸಾಧುವಲ್ಲವೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಡಿಮ್ಯಾಂಡ್ ನಂಬರ್ 22ರಲ್ಲಿ,

> "A separate sub-division for survey of drainage works in Gulberga and Raichur Districts was created in August 1958 and no specific provision has been made for the new sub-division in the Budget estimates"

ಎಂದು ಹೇಳಿದ್ದಾರೆ. ಇದು 1958 ನೆಯ ಆಗಸ್ಟ್ ತಿಂಗಳಲ್ಲಿ ಮಂಜೂರು ಆಗಿದ್ದುದರಿಂದ ನೀವು 58-59 ನೆಯ ಸಾಲಿನ ಬಡ್ಜೆಟ್ಟಿನಲ್ಲಿ ಪ್ರೊವೈಡ್ ಮಾಡಬಹುದಾಗಿತ್ತು. ಏಕೆ ಆ ರೀತಿ ಪ್ರೊವೈಡ್ ಮಾಡಲಿಲ್ಲ ! ನಿಮ್ಮ ವಿವೇಕ ಅಷ್ಟು ಸರಿಯಾಗಿರಲಿಲ್ಲವೆಂದು ನಾನು ಹೇಳುತ್ತೇನೆ.

ಇನ್ನು ಡಿಮ್ಯಾಂಡ್ 23ರಲ್ಲಿ ಏನು ಹೇಳಿದೆ ಎಂದರೆ,

> "Due to the participating of the various departments of the State Government in the World Agricultural Fair to be held in Delhi from December 1959 to February 1960, the estimated expenditure of Rs. 4 lakhs as detailed below was advanced......"

ಇದನ್ನು ನಾವು ಬೇಡ ಎಂದು ಹೇಳುವುದಿಲ್ಲ. ಇದು ಬೇಕು. ಈ ಹಣವನ್ನು ಖರ್ಚು ಮಾಡಬೇಕಾದರೆ ಖರ್ಚಿಗೆ ತಕ್ಕಂತೆ ಕೆಲಸ ಮಾಡಲಾಗುತ್ತಿದೆಯೇ ಎಂದು ನೋಡಬೇಕು. ಅದು ಆಗುತ್ತಿಲ್ಲ. ಇದಕ್ಕೆ ಕಾರಣವೇನೆಂದರೆ ನೀವು ಮಾಡುತ್ತಿರುವ ಪ್ರಾಪೊಗಾಂಡ ಸರಿಯಾಗಿಲ್ಲದೆ ಇರುವುದು. ಹೋದ ಸಾರಿ ದೆಹಲಿಯಲ್ಲಿ ಮೈಸೂರಿನವರು ಏರ್ಪಡಿಸಿದ್ದ ಪ್ರದರ್ಶನದ ಬಗ್ಗೆ ಜನ ಅದನ್ನು ಬಹಳ 'ಪೂರ್ ಷೋ' ಆಗಿತ್ತು ಎಂದು ಹೇಳಿದರು. ಅದೇ ರೀತಿಯಾಗಿ ಈ ಸಾರಿ ದಸರಾ ಎಕ್ಸಿಬಿಷನ್ನನ್ನು ಯಾರಾದರೂ ಹೋಗಿ ನೋಡಿದ್ದರೆ ತಮಗೇ ಗೊತ್ತಾಗುತ್ತಿತ್ತು. ಪ್ರೈವೇಟು ಫರ್ಮುಗಳು ಎಷ್ಟು ಚೆನ್ನಾಗಿ ಪ್ರದರ್ಶನವನ್ನು ಮಾಡಿದ್ದುವು ಎನ್ನುವುದನ್ನು ಅಲ್ಲಿ ನೋಡಬಹುದಾಗಿತ್ತು. ಅಷ್ಟುಮಟ್ಟಿಗೂ ಕೂಡ ಇಲಾಖೆಗೆ ಸೇರಿದಂತಹ ಸ್ಟಾಲುಗಳನ್ನು ಚೆನ್ನಾಗಿ ಪ್ರದರ್ಶನಕ್ಕೆ ಇಟ್ಟಿರಲಿಲ್ಲ. ಅದರಿಂದ ಈ ಪ್ರದರ್ಶನವೂ 'ಪೂರ್ ಷೋ' ಆಗಿತ್ತು. ಈ ರೀತಿಯಾಗದ ಹಾಗೆ ಸರಿಯಾಗಿ ಪ್ರದರ್ಶಿಸಲು ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಈ ರೀತಿಯಾಗಿ ಮಾಡದೇ ಇರುವುದರಿಂದ ಈ ಪದಾರ್ಥಗಳನ್ನು ಮಾರಾಟ ಮಾಡಲು

ಸರಿಯಾದ ಮಾರ್ಕೆಟ್ಟು ದೊರೆಯುತ್ತಿಲ್ಲ. ಇದಕ್ಕಾಗಿ ಹೆಚ್ಚಿನ ಸಿಬ್ಬಂದಿ ಬೇಕಾದರೂ ಇಟ್ಟುಕೊಂಡು ಇದನ್ನು ಸರಿಯಾಗಿ ಆರ್ಗನೈಜು ಮಾಡಬೇಕು. ಈಗೇನೋ ಕಾಫೀ ಬೀಜಕ್ಕೆ ಎಂದು ಜಾಹೀರಾತು ಕೊಡುತ್ತಿದ್ದೀರಿ. ಇದಕ್ಕೇನೂ ಅಷ್ಟು ಬೇಕಾಗಿಲ್ಲ. ಸ್ಯಾಂಡಲ್ ಆಯಿಲ್‌ಗಾಗಿ ಜಾಹಿರಾತುಗಳನ್ನು ಕೊಡುತ್ತಿದ್ದೀರಿ. ಇದಕ್ಕೆ ತಕ್ಕ ಮಾರುಕಟ್ಟೆಗಳಿದ್ದರೂ ಅದರ ಡಿಮ್ಯಾಂಡುಗಳಿಗನುಸಾರವಾಗಿ ಸಪ್ಲೈ ಮಾಡುವಷ್ಟು ಸ್ಟಾಕೇ ನಮ್ಮಲ್ಲಿಲ್ಲ. ಈಗ ಇಂಗ್ಲೆಂಡಿನಲ್ಲಿರುವ ನಮ್ಮ ಅಧಿಕಾರಿಗಳನ್ನು ಇಲ್ಲಿಗೇ ವಾಪಸು ಕರಸಿಕೊಂಡರೇ ಸಾಕಾಗಿದೆ. ಏಕೆಂದರೆ ಅವರ ಡಿಮ್ಯಾಂಡಿನಷ್ಟು ಸಪ್ಲೈ ಸಿಕ್ಕುತ್ತಿಲ್ಲ. ಆದುದರಿಂದ ನಮಗೆ ಸರಿಯಾದ ಮಾರುಕಟ್ಟೆಗಳು ದೊರೆಯುವುದಕ್ಕೆ, ಯಾವ ಇಂಡಸ್ಟ್ರಿಗಾಗಲೀ ಅದಷ್ಟು ಇದರ ಸ್ಕೋಪ್‌ನ್ನು ಹೆಚ್ಚು ಮಾಡಿಕೊಂಡು ಖರ್ಚು ಮಾಡಬಹುದು ಎಂದು ನಾನು ಹೇಳುತ್ತೇನೆ.

ಇನ್ನು ಡಿಮ್ಯಾಂಡು 24ರಲ್ಲಿ,

> "In view of the large demand under the Housing Scheme for Scheduled Castes, the Government of India have been approached for additional assistance of Rs. 6 lakhs, Government contributing an equal amount."

ಎಂದಿದೆ.

Are you sincere in this effort ? I want to question your bonafides in this.

ಈ ಸ್ಕೀಮು ಒಂದು ರೀತಿಯಾದ Vote catching business ಎಂದು ಹೇಳಬಹುದು. ಈ ಡಿಪ್ರೆಸ್ಡ್ ಕ್ಲಾಸಿನವರನ್ನು ಮುಂದಕ್ಕೆ ತರುತ್ತೇವೆಂದು ಹೇಳುತ್ತ ಬೀದಿಯ ಹುಡುಗರನ್ನು ಕರೆತಂದು ಪೆಪ್ಪರುಮೆಂಟನ್ನು ಹಂಚುವಂತೆ ಮಾಡಿದ ಹಾಗಿದೆ. ನೀವು 2 ಲಕ್ಷ 3 ಲಕ್ಷ, 5 ಮತ್ತು 6 ಲಕ್ಷ ಹಂಚುತ್ತೇವೆಂದು ಹೇಳಬಹುದು. ಆದರೆ ಈ ಸಂಸ್ಥಾನದಲ್ಲಿರುವ ಒಟ್ಟು ಎರಡು ಕೋಟಿ ಪ್ರಜಾಸಂಖ್ಯೆಯುಳ್ಳ ಈ ವರ್ಗದವರಿಗೆ ಹಂಚುತ್ತೇವೆಂದು ಹೇಳಿ ಅವರಿಗೆ ಟೋಪಿ ಹಾಕಿ, ಮಂಕು ಕವಿಯುವಂತೆ ಮಾಡಿ ಮನೆಗಳನ್ನು ಕಟ್ಟಿಸಿ ಕೊಡುತ್ತೇವೆಂದು ಹೇಳಬಹುದು. ಆದರೆ ಬರಿಯ ಪ್ರಚಾರಕ್ಕೋಸ್ಕರ ಇದನ್ನು ಉಪಯೋಗಿಸಿಕೊಳ್ಳುತ್ತಿದ್ದೀರಿ. You are not sincere in this effort. ನೀವು ಸರಿಯಾದ ಕಾರ್ಯಕ್ರಮವನ್ನು ತಗೆದುಕೊಳ್ಳಬೇಕಾಗಿದ್ದರೆ, ತಾಲ್ಲೂಕುವಾರಾಗಿ, ವಿಲೇಜುವಾರಾಗಿ, ಜಿಲ್ಲಾವಾರಾಗಿ ಇಷ್ಟು ಹಣ ಎಂದು ಕೊಟ್ಟುಬಿಡಿ. ಒಂದು ಹಳ್ಳಿಯಲ್ಲಿ ಡಿಪ್ರೆಸ್ಡ್ ವಿಲೇಜು ಅಡ್ವೈಸರಿ ಕಮಿಟಿ ಎಂದು ಮಾಡಿ. ಈ ರೀತಿ ಮಾಡುವುದರಲ್ಲಿ ಒಂದು ರೀತಿಯಾದ ಕ್ಲಿಕ್ಕು ಇದೆ.

I call it a clique. Even where an Opposition member is elected from the constituency, you have nominated almost all the Congress members there. ಈ ರೀತಿ ಏಕೆ ಮಾಡುತ್ತೀರಿ ! ಡಿಪ್ರೆಸ್ಡ್ ಕ್ಲಾಸಿನವರು ನಾವು ಹೇಳಿದ ಹಾಗೆ ಕೇಳುತ್ತಾರೆಂದು ಈ ರೀತಿ ಮಾಡಲಾಗುತ್ತಿದೆಯೇ! ನಾನು ಒಂದೇ ಒಂದು ನಿದರ್ಶನವನ್ನು ಹೇಳುತ್ತೇನೆ.

Sri T. N. MUDALAGIRI GOWDA.—You quote one single instance.

Sri B. K. PUTTARAMIYA.—I am also a responsible member of this House and I am making a responsible statement. I do not yield. I can answer to any extent, but I do not want to yield on this occasion.

Sri J. H. SHAMSUDDIN.—If the Hon'ble member yields, I want to say that this amount is not provided for that Committee.

Sri B. K. PUTTARAMIYA.—You have to distribute it through tha Committee.

ನಾನು ಸುಳ್ಳು ಮಾತಾಡುವುದಿಲ್ಲ ಮತ್ತು ಎಕ್ಸಾಜರೇಟ್ ಕೂಡ ಮಾಡುತ್ತಿಲ್ಲ. ಈಗ ನಾವೇನು ಮಾಡುತ್ತಿದ್ದೇವೆಂದರೆ ಈ ಹಣವನ್ನು ಹಂಚುವುದಕ್ಕೋಸ್ಕರ ಕಮಿಟಿ ಮಾಡುತ್ತೇವೆ ಎಂದು ಹೇಳುತ್ತಾರೆ. ಅದಕ್ಕೋಸ್ಕರವಾಗಿ ಇಲ್ಲಿ ತಮಗೆ ಒಂದೇ ಒಂದು ನಿದರ್ಶನವನ್ನು ಹೇಳುತ್ತೇನೆ. ಚನ್ನಪಟ್ಟಣ ತಾಲ್ಲೂಕು ನನ್ನದೇ ಆದ ಕಾನಸ್ಟಿಟುಯನ್ಸಿ ಮತ್ತು ಅಲ್ಲಿಂದ ಎಲೆಕ್ಟಾಗಿ ಬಂದಿರುವ ಮೆಂಬರು. ಅಲ್ಲಿ ಕಾಂಗ್ರೆಸ್ಸಿನ ಮೆಂಬರು ಯಾರೂ ಬರಲಿಲ್ಲ ಎಂದು ಅಲ್ಲಿನ ಕಮಿಟಿಗೆ ಎಲೆಕ್ಟೆಡ್ಡು ಮೆಂಬರಾಗಿರುವವರು ಚೇರ್ಮನ್ನರಾಗಿರಬೇಕೆಂದು ಇದ್ದುದನ್ನು ನಾಮನೇಟೆಡ್ಡು ಮೆಂಬರಾಗಿರಬಹುದು ಎಂದು ಒಂದು ರೀತಿಮಾಡಿ ಕ್ಲಿಕ್ ಮಾಡಿದರು. ಎಲೆಕ್ಟೆಡ್ ಮೆಂಬರಾಗಿರಬೇಕೆಂದು ಮಾಡಿದರೆ ಚೇರಮನ್ನರಾಗಿರುವವರ ಅಪೋಸಿಷನ್ನು ಪಕ್ಷಕ್ಕೆ ಸೇರಿದವರು ಬರುತ್ತಾರೆಂದು ಹೀಗೆ ಇಲ್ಲ ಮಾಡಿದ್ದಾರೆ. ಇಲ್ಲಿಗೆ Defeated ಕ್ಯಾಂಡಿಡೇಟು ಆಗಿದ್ದವರು ಚೇರ್ಮನ್ನಾಗಿ ಬಂದಿದ್ದಾರೆ. ಹೀಗೆ ಎಲೆಕ್ಟು ಮಾಡಿದ ಮೆಂಬರುಗಳಿಗೆ ಬದಲಾಗಿ ನಾಮಿನೇಟೆಡ್ ಮೆಂಬರು ಎಂದು ಮಾಡುವುದರಿಂದ ಅಸೆಂಬ್ಲಿಯ ಯಾವ ಸದಸ್ಯರು ಇಲ್ಲಿ ಕುಳಿತುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಅವರಿಗೆ ಒಂದು ಜಾಗ ಕೊಡಬೇಕೆಂದು ಡಿಫೀಟೆಡ್ ಕಾಂಡಿಡೇಟು ಆಗಿರುವವರನ್ನು ಚೇರ್ಮನ್ನರಾಗಿ ಮಾಡಿ ಅವರ ಮೂಲಕ ಹಣವನ್ನು ಹಂಚುವ ಏರ್ಪಾಡು ಮಾಡಿದೆ ಎಂದು ಜನರಲ್ಲಿ ಹೇಳುವುದಕ್ಕೋಸ್ಕರ ಹೀಗೇ ಮಾಡಿದ್ದೀರಿ. ಚನ್ನಪಟ್ಟಣ ತಾಲ್ಲೂಕಿನಲ್ಲಿ ಅವರ ಹೆಸರೇ ಇರಲಿಲ್ಲ. ಮೊದಲು ಅವರು ಒಬ್ಬರು ಸೋಷಿಯಲ್ ವರ್ಕರು ಆಗಿದ್ದರು. ಅಂತಹವರು ತಮ್ಮ ಆಪ್ತವರ್ಗಕ್ಕೆ ಸೇರಿದವರು ಎಂದು ಈ ರೀತಿ ತಂದು ಚೇರ್ಮನ್ನರಾಗಿ ಮಾಡುವುದು ಸರಿಯಲ್ಲ. ಅವರ ಹೆಸರೇ ಇರಲಿಲ್ಲ. ಅವರ ಅಪ್ಪನ ಹೆಸರು ಯಾವ ರೀತಿಯಾಗಿದ್ದರೇನು ಎಂದರೆ, ಕೊಂಡಪ್ಪನ ಮಗ ವೆಂಕಟಯ್ಯ ಎಂದಿದ್ದರೇನು, ಇಲ್ಲವೇ ಕೊಂಡತಿಮ್ಮಪ್ಪನ ಮಗ ವೆಂಕಟಯ್ಯ ಎಂದಿದ್ದರೇನು ? ಈ ರೀತಿಯಾಗಿ ವಜಾ ಮಾಡಿದ್ದ ಒಬ್ಬ ಸೋಷಿಯಲ್ ವರ್ಕರನ್ನು ಕಮಿಟಿಗೆ ತಂದರೆ ಅದು ಸರಿಯಾಗಿರುತ್ತದೆಯೇ ? ಅವರನ್ನು ತಮ್ಮ ಕೈಗೊಂಬೆಗಳಾಗಿ ಮಾಡಿಕೊಳ್ಳುವುದಕ್ಕಾಗಿ ಈ ರೀತಿಯಾಗಿ ಮಾಡುವುದು ಸರಿಯಲ್ಲ. ನಿಜವಾಗಿಯೂ ಡಿಪ್ರೆಸ್ಡ್ ಕ್ಲಾಸಿಗಾಗಿ ಉಪಕಾರ ಮಾಡಬೇಕೆಂದು ಈ ರೀತಿಯಾಗಿ ಹಣ ಹಂಚುವುದಕ್ಕೆ ಹೋದರೆ ಅರ್ಧದಷ್ಟು ಜನಕ್ಕೂ ಕೂಡ ಹಂಚಲು ಸಾಧ್ಯವಾಗುವುದಿಲ್ಲ. ಸುಮ್ಮನೆ ಬಾಯಲ್ಲಿ ಉದ್ಧಾರ ಮಾಡುತ್ತೇವೆಂದು ಈ ರೀತಿಯಾಗಿ ಹಂಚುವುದು ಸರಿಯಾಗಿರುವುದಿಲ್ಲ. ಎಷ್ಟೋ ಹಣ ಖರ್ಚಾಗುತ್ತಿದೆ.

(SRI B. K. PUTTARAMIYA)

ಅಂತಹುದರಲ್ಲಿ ಈ ಡಿಪ್ರೆಸ್ಡ್ ಕ್ಲಾಸಿನವರಿಗಾಗಿ 60 ಲಕ್ಷ ಬೇಕಾದರೂ ಕೊಡಿ, ಆರು ಕೋಟಿ ರೂಪಾಯಿಗಳಷ್ಟಾದರೂ ಕೊಡಿ. ನಾನು ಬೇಡವೆಂದು ಹೇಳುವುದಿಲ್ಲ. ಆದರೆ ಹಣವನ್ನು ಹಂಚಲು ಕೊಡುವಾಗ ಸ್ವಲ್ಪ ವಿತರಣೆಯಿಂದ ಹಂಚಲು ಏರ್ಪಾಡುಗಳನ್ನು ಮಾಡಬೇಕು. ನಾನು ಆಗಲೇ ಹೇಳಿದ ಹಾಗೆ ಈ ಸಾರಿ ಬೇಕಾದರೆ ಬಿಜಾಪುರ ಒಂದು ಜಿಲ್ಲೆಗೇ ಪೂರ್ತಿಯಾಗಿ ಕೊಟ್ಟುಬಿಡಿ. ಅದಕ್ಕೂ ಒಪ್ಪಿಕೊಂಡುಬಿಡುತ್ತೇವೆ. ಅಥವಾ ಬೆಂಗಳೂರು ಜಿಲ್ಲೆಗೇ ಪೂರ್ತಿಯಾಗಿ ಕೊಡುತ್ತೇನೆಂದು ಹೇಳಿದರೂ ಒಪ್ಪಿಕೊಳ್ಳುತ್ತೇವೆ. ಇಲ್ಲವೇ ಕೆಲವು ಹತ್ತು ತಾಲ್ಲೂಕುಗಳಿಗೆ ಪೂರ್ತಿಯಾಗಿ ಕೊಡುತ್ತೇವೆಂದು ಹೇಳಿದರೂ ಒಪ್ಪಿಕೊಳ್ಳಬಹುದು. ಹಾಗಿಲ್ಲದೆ ಒಂದೊಂದು ತಾಲ್ಲೂಕಿಗೆ ಇಷ್ಟಿಷ್ಟು ಎಂದು ಹೇಳಿದರೆ 20 ಮನೆಗಳಿಗಿಂತ ಹೆಚ್ಚು ಕಟ್ಟಲು ಅವಕಾಶವಾಗುವುದಿಲ್ಲ. ಅವರ ಸಂಸಾರಗಳೇ ಸುಮಾರು 30,000 ಇವೆ. ಇದಕ್ಕಾಗಿ ರೆವೆನ್ಯೂ ಇನ್ಸ್‌ಪೆಕ್ಟರವರ, ಅಮಲ್ದಾರರ ಮತ್ತು ಅಸೆಂಬ್ಲಿ ಮೆಂಬರುಗಳ ಮನೆಯ ಬಾಗಿಲಿಗೆ ಅವರುಗಳು ತಿರುಗಲು ಅವಕಾಶವಾಗುತ್ತದೆ. ಈಗ ಜಮೀನನ್ನು ಕೊಡುತ್ತೇವೆಂದು ಹೇಳುತ್ತಿದ್ದೀರಿ. ಎಷ್ಟು ಜನರಿಗೆ ಹೊಲವನ್ನು ಉಳುವುದಕ್ಕೆ ಎಂದು ಕೊಟ್ಟಿದ್ದೀರಿ ?

2-30 P.M.

ಹೊಲ ಉಳುವವರಿಗೆ ಕೊಟ್ಟಿಲ್ಲ. ಹೊಲ ಕೊಡದೆ ಇರುವವರಿಗೆ ಹೋರಿಕೊಟ್ಟಿದ್ದಾರೆ, ಹೊಲವಿಲ್ಲದವನಿಗೆ ಹೋರಿಕೊಟ್ಟಿದ್ದಾರೆ. ಹೊಲ ಕೊಟ್ಟು ಹೋರಿ ಕೊಟ್ಟರೆ ನಾನು ಬೇಡವೆನ್ನುವುದಿಲ್ಲ. ಈ ತರಹ ಅನ್ಯಾಯ ಮಾಡಬಾರದು. ಕೇಂದ್ರ ಸರ್ಕಾರದ ವರು ಈಗ ಹಣ ಕೊಟ್ಟಿದ್ದಾರೆ, ಅದಕ್ಕೂ ನಾವು matchling grants ಕೊಡಬೇಕೆನ್ನುವುದು ಸರಿ. ಆದರೆ ಹಣ ಹಂಚುವವ್ಯವಸ್ಥೆ ಸರಿಯಾದುದಲ್ಲ. ಮಾಡುವ ಕೆಲಸವನ್ನು sin cere ಆಗಿಮಾಡಿ ಇಲ್ಲದೆ ಇದ್ದರೆ ಹುಡುಗರಿಗೆ ತಿನ್ನಲು ಪೆಪ್ಪರ್‌ಮೆಂಟ್ ಕೊಟ್ಟಹಾಗೆ ಆಗುತ್ತದೆ. ಅವರು ತಿರುಗಿ ಬಿದ್ದು ನಿಮಗೇ ಬುದ್ಧಿಯನ್ನು ಕಲಿಸುತ್ತಾರೆ ಎಂದು ಹೇಳುತ್ತೇನೆ.

ಮತ್ತು item 2ರಲ್ಲಿ fishermenಗೆ ಇಷ್ಟು ಹಣ ಕೊಡಬೇಕೆಂದು ಕೇಂದ್ರಸರ್ಕಾರದವರು ಮಂಜೂರು ಮಾಡಿದ್ದಾರೆ, ಅದಕ್ಕ ನಾವು ಮೊದಲು ಕೊಡಬೇಕು ಎಂದು ಹೇಳಿದ್ದಾರೆ, ಇವರು ಷೆಡ್ಯೂಲ್ಡ್ ಜಾತಿಗಳಿಗೆ ಸಂಬಂಧಪಟ್ಟವರು, ಅವರಷ್ಟೇ ಕೆಳದರ್ಜೆಯಲ್ಲಿರುವವರು, ಅವರಷ್ಟೇ ವಿದ್ಯಾವಂತರಲ್ಲ, ಅವರಷ್ಟೇ untouchables, ಇವರನ್ನು ಅವರ ಜೊತೆಯಲ್ಲೇ ಸೇರಿಸಬೇಕು. ಮಂಗಳೂರಿನವರನ್ನು ಮಾತ್ರ ಈ ಯೋಜನೆಯಲ್ಲಿ ಸೇರಿಸಿಕೊಳ್ಳದೆ ನಮ್ಮ ಸಂಸ್ಥಾನದ ಎಲ್ಲ ಭಾಗಗಳಲ್ಲಿರುವವರನ್ನೂ ಸೇರಿಸಿ ಸಹಾಯ ಮಾಡಿ ಎಂದು ಮಾತ್ರ ಹೇಳುತ್ತೇನೆ.

ಡಿಮ್ಯಾಂಡ್ 28 ತೆಗೆದುಕೊಂಡರೆ ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ, ನಾವು ಎಲ್ಲದರಲ್ಲಿಯೂ criticise ಮಾಡುವುದಿಲ್ಲ. ಇದರಲ್ಲಿ ಕೇಳಿರುವ ಹಣವನ್ನು ಒಳ್ಳೆಯ ಕೆಲಸಕ್ಕೆ ಖರ್ಚು ಮಾಡಿದ್ದಾರೆಂದು ಹೇಳುತ್ತೇನೆ. ಮಿನಿಮಂ ವೇಜಸ್ ಕಮಿಟಿಯನ್ನು ಮಾಡಿ, ಜನತೆಗೆ ಸಹಾಯ ಮಾಡಬೇಕೆಂಬ ಅಲ್ಪ ಸ್ವಲ್ಪ ಪ್ರಯತ್ನವಾದರೂ ಆ ಕಡೆ ಇದೆ ಎಂದು ನಮಗೆ ಸ್ವಲ್ಪ ಸಮಾಧಾನ.

ಡಿಮ್ಯಾಂಡ್ 38.—ಕೆನರಾ ಬ್ಯಾಂಕಿನವರು ಒಂದು ಲಕ್ಷ ರೂಪಾಯಿ ಹಣ ಕೊಟ್ಟರು. ಅದನ್ನು fire accident, flood relief, ಇವುಗಳಿಗೆಲ್ಲ ಕೊಟ್ಟಿದ್ದೇವೆಂದು ಹೇಳುತ್ತಾರೆ. ಸರ್ಕಾರ ಈ ಸಂಬಂಧದಲ್ಲಿ ಏನು ಕೊಟ್ಟ ಹಾಗಾಯಿತು ? ಎಲ್ಲ ಜಿಲ್ಲೆಗಳಿಗಿಂತಲೂ ಮೈಸೂರು ಜಿಲ್ಲೆಗೆ ಬಹಳ ಅನ್ಯಾಯವಾಗಿದೆ ಎಂದು ನಾನು ಹೇಳಬಲ್ಲೆ. ಮೈಸೂರು ಜಿಲ್ಲೆಯಲ್ಲಿ ಹೆಚ್ಚು ಜನ ತೊಂದರೆಗೀಡಾಗಿದ್ದಾರೆ ಮತ್ತು ವರ್ಷೇ ವರ್ಷೇ ತೊಂದರೆಗೀಡಾಗುತ್ತಿದ್ದಾರೆ. ಅನೇಕ ಕಡೆ ಪ್ರವಾಹಗಳಿಂದ ಬೆಳೆಗಳು ಮತ್ತು ಮನೆಮಠಗಳು ಪ್ರತಿವರ್ಷ ನಾಶವಾಗುತ್ತಿರುವುದು ಎಲ್ಲರಿಗೂ ಗೊತ್ತಿದೆ. ಇಂಥದ್ದರಲ್ಲಿ ಮೈಸೂರು ಜಿಲ್ಲೆಗೆ ಎರಡು ಸಾವಿರ ರೂಪಾಯಿಗಳು ಸಾಕೇ ? ಈ ಎರಡು ಸಾವಿರ ರೂಪಾಯಿಗಳನ್ನು ಯಾರಿಗೆ ಕೊಟ್ಟಿದ್ದೀರಿ, ಏಕೆಕೊಟ್ಟಿದ್ದೀರಿ ? ಕೆನರಾ ಬ್ಯಾಂಕಿನವರು ಕೊಡಲಿ ಬಿಡಲಿ ಇದಕ್ಕಾಗಿ ಒಂದು ಪ್ರತ್ಯೇಕಬಾಬನ್ನು ಕಲ್ಪನೆಮಾಡಿ ಪ್ರತಿ ವರ್ಷ ಸ್ವಲ್ಪ ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಿ ಎಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ.

ಡಿಮಾಂಡ್ 40ರಲ್ಲಿ "During the current year, Government have, however, extended the period of operation of eight Community development Blocks..." ಎಂದು ಹೇಳಿದ್ದೀರಿ. ಈ ಬ್ಲಾಕ್‌ಗಳನ್ನು ಎಲ್ಲೆಲ್ಲಿ ಕೊಟ್ಟಿದ್ದೀರಿ ; ಯಾರ ಯಾರ ಕ್ಷೇತ್ರಗಳಿಗೆ ಕೊಟ್ಟಿದ್ದೀರಿ ? ಬ್ಲಾಕ್‌ಗಳನ್ನು ಕೊಡುವಾಗ ನೀವು partial ಅಥವಾ impartial ಆಗಿದ್ದೀರಿ ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗಿದೆ" ಎಲ್ಲೆಲ್ಲಿಗೆ ಬ್ಲಾಕ್‌ಗಳನ್ನು ಕೊಟ್ಟಿದೆ ಎಂಬುದನ್ನು ತಿಳಿಸದೆ ಮೊಗುಂ ಆಗಿ ಹೇಳಿದ್ದಾರೆ. ಎಲ್ಲವನ್ನು ಕೂಡ ಕಾಂಗ್ರೆಸ್ ಸದಸ್ಯರ ಕ್ಷೇತ್ರಗಳಲ್ಲಿ ಕೊಟ್ಟಿದ್ದಿರಾ ಅಥವಾ ವಿರೋಧ ಪಕ್ಷದ ಸದಸ್ಯರ ಕ್ಷೇತ್ರಗಳಲ್ಲಿ ಕೊಟ್ಟಿದೀರಾ ಎಂಬುದು ನಮಗೆ ಸರಿಯಾಗಿ ಗೊತ್ತಿಲ್ಲ. ಇದರ ಮೇಲೆ ನಮ್ಮ ಮತವನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ಸ್ವಲ್ಪ ಹೇಳಬೇಕು.

Sri H. C. LINGA REDDY.—I shall clarify the position. ಶಿಡ್ಲಘಟ್ಟ, ಮಾಯಸಂದ್ರ ಸಿರುಗುಪ್ಪ, ಮಳವಳ್ಳಿ, ಕಾರವಾರ, ಯಾದಗಿರಿ ಮತ್ತು ಇನ್ನೂ ಎರಡು ಸ್ಥಳಗಳಲ್ಲಿರುವ ಬ್ಲಾಕ್‌ಗಳಲ್ಲಿ ಹಣ ಜಾಗ್ರತೆಯಾಗಿ ಖರ್ಚುಮಾಡಲಿಲ್ಲ. ಆದುದರಿಂದ ಇರುವ ಹಣವನ್ನು ಖರ್ಚುಮಾಡಲು ಅವರಿಗೆ ಒಂದು ವರ್ಷ ಜಾಸ್ತಿ ಮಾಡಲಾಯಿತು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಹಣ ಹೆಚ್ಚಿಗೆ ಏಕೆ ಕೇಳಿದ್ದೀರಿ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಮೊದಲು ಖರ್ಚಾಗಲಿಲ್ಲ. ಈ ವರ್ಷ ಖರ್ಚುಮಾಡುತ್ತಿದ್ದೇವೆ. ಅದಕ್ಕೋಸ್ಕರ ಕೇಳಿದ್ದೇವೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಡಿಮಾಂಡ್ 46, ಇದು new service. ಇದರಲ್ಲಿ

> "Government have approved the project estimate amounting to Rs. 9,84, 680 for the contruction of an irrigation tank near Siddasamudra in Bailhongal taluk, Belgaum district...."

ಎಂದು ಹೇಳಿದ್ದಾರೆ. ಇದಕ್ಕಾಗಿ 2,50,000 ರೂಪಾಯಿಗಳನ್ನು ಒದಗಿಸಲಾಗಿದೆ ಎಂದು ಹೇಳಿದ್ದಾರೆ.

ಈ ಹಣವನ್ನು ಕೊಟ್ಟಿರುವುದು ಸರಿಯಲ್ಲ ಅಥವಾ ಹೊಸಕೆರೆಗಳನ್ನು ಕಟ್ಟಬಾರದೆಂದು ಹೇಳುವುದಿಲ್ಲ. ಲೋಕೋಪಯೋಗಿ ಶಾಖೆಯಲ್ಲಿ ಏನಾಗುತ್ತಿದೆ ಎನ್ನುವ ವಿಷಯದಲ್ಲಿ ಹೇಳಬೇಕಾಗಿದೆ. ಈ ಮಂತ್ರಿ ಮಂಡಲ ಬಂದಲಾಗಾಯ್ತು ವಿರೋಧಪಕ್ಷದ ಸದಸ್ಯರ ಕ್ಷೇತ್ರಗಳಿಗೆ ನೀರಾವರಿ ಕೆಲಸಗಳಿಗಾಗಿ ಎಷ್ಟು ಹಣ ಖರ್ಚು ಮಾಡಿದ್ದಾರೆ, ಆಡಳಿತ ಪಕ್ಷದ ಸದಸ್ಯರ ಕ್ಷೇತ್ರಗಳಿಗೆ ಎಷ್ಟು ಹಣ ಖರ್ಚುಮಾಡಿದ್ದಾರೆ ಎಂಬುದನ್ನು ನೋಡಿದರೆ ಕೆಲಸ ಯಾವ ರೀತಿ ನಡೆಯುತ್ತಿದೆಯೆಂದು ಗೊತ್ತಾಗುತ್ತದೆ. ಶ್ರೀ ಮಾನ್ ನಿಜಲಿಂಗಪ್ಪನವರ ಮಂತ್ರಿಮಂಡಳವಿದ್ದಾಗ ನನ್ನ ಕ್ಷೇತ್ರವಾದ ಚನ್ನಪಟ್ಟಣ ತಾಲ್ಲೂಕಿನಲ್ಲಿರುವ ಕಣ್ವ ಪ್ರಾಜೆಕ್ಟಿನಲ್ಲಿ ನೀರು ಸಾಲದೆ ಇರುವುದರಿಂದ ಅದಕ್ಕೆ ಹೆಚ್ಚು ನೀರು ಬರುವಂತೆಮಾಡಲು 8,70,000 ರೂಪಾಯಿಗಳಿಗೆ ಒಂದು ಅಂದಾಜನ್ನು ತಯಾರುಮಾಡಲಾಗಿದೆ ಎಂದು ನನ್ನ ಪ್ರಶ್ನೆಗೆ ಉತ್ತರ ಕೊಟ್ಟರು ಮತ್ತು ನಮ್ಮ ಮನವಿಗೆ ಉತ್ತರವಾಗಿ ಈ ಬಗ್ಗೆ ಒಂದು ಪತ್ರವನ್ನು ಮುಖ್ಯ ಮಂತ್ರಿಗಳು ಬರೆದಿದ್ದಾರೆ. ಆ ಪತ್ರ ನನ್ನ ಹತ್ತಿರ ಇದೆ. ಇವೊತ್ತು ಕೇಳಿದರೆ ಎಸ್ಟಿಮೇಟೂ ಇಲ್ಲ, ಅದನ್ನು ಮಾಡಿದ್ದೂ ಇಲ್ಲವೆಂದು ಹೇಳುತ್ತಾರೆ. ಇದು ನನ್ನ ಮೇಲಿನ ಅಥವಾ ಹಿಂದಿನ ಮಂತ್ರಿಮಂಡಲದ ಮೇಲಿನ ಅಸಮಾಧಾನವೇ ಎಂಬುದು ನನಗೆ ಗೊತ್ತಾಗುವುದಿಲ್ಲ. ಹಿಂದಿನ ಮಂತ್ರಿ ಮಂಡಲವಿದ್ದಾಗ ಕುಣಿಗಲ್ ಕಡೆಯಿಂದ ನಮ್ಮ ತಾಲ್ಲೂಕಿನಲ್ಲಿ ನೀರಾವರಿಯಾಗುವುದಕ್ಕೆ ಸರ್ವೆ ಕಾರ್ಯ ನಡೆಸಲು ಆರ್ಡರ್ ಮಾಡಿದ್ದರು. ಇವರು ಅದನ್ನು ನಿಲ್ಲಿಸಿದ್ದಾರೆ. ಇದನ್ನು clarify ಮಾಡಬೇಕೆಂದು ಹೇಳುತ್ತೇನೆ. ಹಿಂದಿನ ಮಂತ್ರಿಮಂಡಳ ಮಾಡಿದುದನ್ನು ಜಾರಿಗೆ ಕೊಟ್ಟರೆ ಅವರಿಗೆ ಏಕೆ ಒಳ್ಳೆಯ ಹೆಸರು ಬರಬೇಕು ಎಂಬ ಭಾವನೆಯಿಂದ ಹಾಗೆ ಮಾಡಬೇಡಿ. ಈ ಸಲಹೆ ಪತಿಪಕ್ಷದ ಸದಸ್ಯನಿಂದ ಬಂದಿದೆ ಎಂದು ಈ ರೀತಿಮಾಡಿರುವುದಾದರೆ, ನನ್ನ ಒಬ್ಬನಿಗೋಸ್ಕರ ನನ್ನ ಕ್ಷೇತ್ರದ ಜನಗಳಿಗೆಲ್ಲ ತೊಂದರೆಯಾಗುವ ಹಾಗಿದ್ದರೆ, ತಾವು ಇಚ್ಛಿಸುವುದಾದರೆ ನಾನು ರಾಜೀನಾಮೆ ಕೊಡಲೂ ಸಿದ್ಧನಾಗಿದ್ದೇನೆ. ಚಿಕ್ಕ ಮನಸ್ಸಿಟ್ಟುಕೊಂಡು ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಕೊಡದೆ ಜನರಿಗೆ ಅನ್ಯಾಯ ಮಾಡಬೇಡಿ. ಹೀಗೆ ಮಾಡುವುದು ನಿಮಗೆ ಕ್ಷೇಮವಲ್ಲ ಮಂತ್ರಿ ಮಂಡಲ ಶಾಶ್ವತವಲ್ಲ, ಮಂತ್ರಿ ಸ್ಥಾನವೂ ಬರುತ್ತದೆ, ಹೋಗುತ್ತದೆ. ನೀವೇ ಬೇಡವೆಂದರೂ ಆಯಿತು, ನಾವು ಬೇಡವೆಂದರೂ ಆಯಿತು. ಇದು ಸಾರ್ವಭೌಮ ಅಧಿಕಾರವಲ್ಲ. ಆದುದರಿಂದ ಅನ್ಯಾಯಗಳನ್ನು ಮಾಡಬಾರದೆಂದು ಲೋಕೋಪಯೋಗಿ ಶಾಖೆಯ ಮಂತ್ರಿಗಳಿಗೆ ಹೇಳುತ್ತೇನೆ.

ಹಿಂದಿನ ಮಂತ್ರಿ ಮಂಡಲವಿದ್ದಾಗ ಎಸ್ಟಿಮೇಟ್ ಆಗಿದೆ ಎಂದು ಹೇಳಿದ್ದರು. ಇವರು ಇಲ್ಲವೆಂದು ಹೇಳುತ್ತಿದ್ದಾರೆ. ಹಾಗಾದರೆ ಶ್ರೀ ಮಾನ್ ನಿಜಲಿಂಗಪ್ಪನವರ ಮಾತು ಸುಳ್ಳೋ ಅಥವಾ ಶ್ರೀ ಮಾನ್ ಚೆನ್ನಬಸಪ್ಪನವರ ಮಾತು ಸುಳ್ಳೋ ಎನ್ನುವುದನ್ನು ತಾವುಗಳೆಲ್ಲ ಯೋಚನೆಮಾಡಬೇಕು. ಹಿಂದಿನ ಮಂತ್ರಿಗಳು ನನಗೆ ಬರೆದಿದ್ದ ಕಾಗದ ನನ್ನಲ್ಲಿದೆ.

ಹಾರ ಹಾಕಿದುದು ಬೈಲಹಂಗಲದಲ್ಲಿ ಮೆರವಣಿಗೆ ಮಾಡಿದ್ದು, ಇವರು ಕೊಡುತ್ತೇವೆಂದು ಹೇಳಿದ್ದು ಈ ರೀತಿ ಮಾಡುವುದು ಧರ್ಮವಲ್ಲವೆಂದು ಹೇಳುತ್ತೇನೆ.

ಶ್ರೀ ಜೆ. ಎಚ್. ಷಂಸುದ್ದೀನ್.—ಅಷ್ಟು ಸುಲಭ ಇದ್ದರೆ ಮಾಡಿರಿ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನನ್ನ ಕೈಯ್ಯಲ್ಲಿ ಆಗುವುದಿಲ್ಲ. ಸ್ವಾಮಿ, ಡಿಮ್ಯಾಂಡ್ ನಬಂರ್ 49ರಲ್ಲಿ ಫೈನಾನ್ಸ್ ಕಾರ್ಪೊರೇಷನ್ ಗೋಸ್ಕರ ಷೇರ್ ತೆಗೆದುಕೊಂಡಿದ್ದೇವೆಂದು ಹೇಳಿದ್ದೀರಿ, ಎಷ್ಟು ಲಕ್ಷರೂಪಾಯಿ ತೆಗೆದು ಕೊಂಡಿದ್ದೀರಿ? ಫೈನಾನ್ಸ್ ಕಾರ್ಪೊರೇಷನ್ ಆಗಿದ್ದು ಯಾವಾಗ? ಹಣ ಕೇಳಿದ್ದು ಯಾವಾಗ? ನಿಮಗೆ ಮುಂದಾಲೋಚನೆ ಇಲ್ಲವೇ? ಬಡ್ಜೆಟ್ ಏತಕ್ಕೆ ಹೀಗಾಗುತ್ತದೆ? ಐಟಂ ನಂಬರು 2ರಲ್ಲಿ ಮಿಲ್ಸ್—ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್ ಲಿಮಿಟೆಡ್ ನಲ್ಲಿ 10 ಲಕ್ಷ ರೂಪಾಯಿ ಷೇರ್ ತೆಗೆದು ಕೊಂಡಿದ್ದೀರಿ. ಇದರ ಮ್ಯಾನೇಜಿಂಗ್ ಏಜೆಂಟ್ಸ್‌ಯಾರು? ಇದನ್ನು ನಡೆಸತಕ್ಕವರು ಯಾರು? ನ್ಯಾಷನಲ್ ಪೇಪರ್ ಮಿಲ್ಸ್ ಯಾವುದು ಎಂದು ಅರ್ಥವಾಗಬೇಡವೆ? ಇದನ್ನೆಲ್ಲಾ ನಾವು ಕೇಳಿದರೆ ನೀವು ಏನು ಹೇಳುತ್ತೀರಿ? ಓಟು ಮಾಡಿಸುತ್ತೇವೆ ಎಂದು ಹೇಳುತ್ತೀರಿ. ಇದೇ ರೀತಿ ಎಷ್ಟು ದಿವಸ ದವರೆಗೂ ಮಾಡುತ್ತೀರಿ?

ಶ್ರೀ ಬಿ. ಡಿ. ಜತ್ತಿ.—ಎಲ್ಲಿಯವರೆಗೂ ಮೆಜಾರಿಟಿ ಇರುತ್ತದೆಯೋ ಅಲ್ಲಿಯವರೆಗೂ ಮಾಡುತ್ತೇವೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಈ ತರಹ ಮಾಡಿದರೆ ಬಹಳ ದಿವಸ ಮೆಜಾರಿಟಿ ಉಳಿಯುವುದಿಲ್ಲ. ಹಣ ಕೇಳುವಾಗ ಡೀಟೆಲ್ಸ್ ಹೇಳಬೇಕು. ಡೆಮಾಕ್ರಸಿಗೆ ಬೆಲೆಕೊಡುವುದಾದರೆ ಮೈನಾರಿಟಿಗೆ ಬೆಲೆಕೊಡಬೇಕು ಒಂದು ವೇಳೆ ನಾವು ಅನ್ಯಾಯ ಹೇಳಿದರೆ ಬೇಲೆ ಕೊಡಬೇಡಿ. ನಾವು ಹಾಗೆ ಹೇಳುವುದೂ ಇಲ್ಲ. ನಾಷನಲ್ ಪೇಪರ್ ಮಿಲ್ಸ್‌ಯಾವುದು? ಅದರಲ್ಲಿ ಷೇರು ತೆಗೆದು ಕೊಳ್ಳುವುವಕ್ಕೆ ಸರ್ಕಾರದವರೇ ಏಕೆ ಅದನ್ನು ನಡೆಸಲಿಲ್ಲ? ಇನ್ನೊಬ್ಬರ ಹತ್ತಿರ ಹೋಗಿ ಷೇರು ತೆಗೆದು ಕೊಳ್ಳುವ ಬದಲು ನೀವೇ ಏತಕ್ಕೆ ಸ್ವಂತವಾಗಿ ನಡೆಸಬಾರದಾಗಿತ್ತು? ಒಂದು ಕಡೆ ಸೋಸಿಯಲಿಸ್ಟ್ ಪ್ಯಾಟರನ್ ಎಂದು ಹೇಳಿ ಇನ್ನೊಂದು ಕಡೆ ಕ್ಯಾಪಿಟಲಿಸ್ಟ್‌ಗೆ ಎನ್‌ಕರೇಜ್ ಮಾಡುತ್ತೀರಿ. ಇದು ನನಗೆ ಅರ್ಥವಾಗುವುದಿಲ್ಲ. ಇದರ ಸಿದ್ಧಾಂತ ಏನು ಎಂದು ತಿಳಿದುಕೊಳ್ಳಬೇಕಾಗುತ್ತದೆ. ನಮ್ಮಲ್ಲಿ ಎಲ್ಲಾ ಫೆಸಿಲಿಟೀಸ್ ಇದ್ದುಕೊಂಡು, ಯಾವ ಕಾಲಕ್ಕೂ ನಷ್ಟವಾಗುವುದಿಲ್ಲ ಎನ್ನುವ ವ್ಯವಹಾರ ಇದ್ದು ಕೊಂಡು ಹಾಗೇಕೆ ಮಾಡುತ್ತೀರಿ? ಪೇಪರ್ ನಿಂದ ಬೇಕಾದಷ್ಟು ಹಣವನ್ನು ಸಂಪಾದಿಸಬಹುದು; ಆ ಹಣದಿಂದ ದೇಶಕ್ಕೆ ಒಳ್ಳೆಯದನ್ನು ಮಾಡಬಹುದು. ಹೆಚ್ಚು ಆದಾಯ ಬಂದರೆ ಅಲ್ಲಿ ಕೆಲಸ ಮಾಡುವ ಕೂಲಿಗಾರರಿಗೆ ಹೆಚ್ಚು ಸಂಬಳಸಾರಿಗೆಯನ್ನ ಕೊಡಬಹುದಾಗಿತ್ತು. ಬರಿಯ ಆದಾಯದ ದೃಷ್ಟಿಯಿಂದಲೇ ನೋಡುತ್ತೀರಿ. ನೀವೇ ನಡೆಸಿ ಹೆಚ್ಚು ಆದಾಯ ಬಂದಾಗ ಕೂಲಿಗಾರರಿಗೂ ಕೊಟ್ಟು ಉಳಿದುದನ್ನು ರಿಜರ್ವ್ ಫಂಡ್ ಮಾಡಬಹುದಾಗಿತ್ತು. ಸರ್ಕಾರದವರು ಈ ರೀತಿ ಮಾಡಿದುದ್ದು ನ್ಯಾಯವಲ್ಲ ಎಂದು ಹೇಳುತೇನೆ. ನೀವು ಷೇರು ಕೊಂಡು ಕೊಳ್ಳುವುದಕ್ಕೆ ಬದಲು ಅವರು ಬಂಡವಾಳಹಾಕಿದ್ದಾರೆ. ಅದನ್ನು ವಾಪಸ್ಸು ಕೊಟ್ಟು ಅದನ್ನು ಸರ್ಕಾರದವರೇ ವಹಿಸಿಕೊಂಡು ನಡೆಸಿ ಎಂದು ಹೇಳುತ್ತೇನೆ.

ಇನ್ನು ಡಿಮ್ಯಾಂಡ್ ನಂಬರ್ 51ರಲ್ಲಿ.—

"Administrative approval was accorded to an estimate amounting to Rs 2.34 lakhs for providing metalling and cross drainage works on Indi—Gerkhed road with approach Road to Bhugar in Bijapur District"

ಎಂದು ಹೇಳಿದೆ. ಯಾವಾಗಲೋ ಟೂರ್ ಹೋಗುತ್ತಾರೆ.

(ಶ್ರೀ ಬಿ. ಕೆ. ಪುಟ್ಟರಾಮಯ್ಯ)

ಆಗ ಇವರಿಗೆ ಯಾರು ಯಾರು ಗೌರವ ಕೊಟ್ಟರೋ ಅವರು ಕೇಳಿದ ರಸ್ತೆಗಳನ್ನು ಸ್ಯಾಂಕ್ಷನ್ ಮಾಡುವುದು. ಇವೆಲ್ಲಾ ಏಕೆ? ನಿಮ್ಮ ಡಿಪಾರ್ಟ್‌ಮೆಂಟಿಗೆ ಹಣ ಕೊಡಿ, ದೇಶಕ್ಕೆ ಬೇಕಾದ ಎಲ್ಲಾ ರಸ್ತೆಗಳನ್ನೂ ಸರ್ವೇ ಮಾಡಿ ಅವುಗಳಿಗೆ ಎಷ್ಟು ಹಣ ಬೇಕಾಗುತ್ತದೆ, ಒಂದು ವರ್ಷಕ್ಕೆ ಎಷ್ಟು ಹಣ ಬೇಕಾಗುತ್ತದೆ ಎಂಬುದನ್ನು ನಿಗದಿ ಮಾಡಿ. ನೀವು ಅಲ್ಲದಿದ್ದರೆ ಇನ್ನೊಬ್ಬರು ಮಾಡುತ್ತಾರೆ. ರಸ್ತೆ ಆಗಲೇಬೇಕಾಗುತ್ತದೆ. ಪ್ಲಾನ್ ಇಟ್ಟುಕೊಂಡು ಮಾಡಿದರೆ ಸ್ವಂತ ಅನುಕೂಲಕ್ಕೆ ಉಪಯೋಗಿಸಿಕೊಳ್ಳಲು ಅವಕಾಶವಿರುವುದಿಲ್ಲ. ಮೇಲಿನಿಂದ ಆರ್ಡರ್ ಮಾಡುವುದನ್ನು ಇಟ್ಟುಕೊಳ್ಳಬೇಡಿ, ಡಿಪಾರ್ಟ್‌ಮೆಂಟಿಗೆ ಬಿಡಿ. ಸ್ಕೀಮು ಸರಿಯಾಗಿ ಮಾಡಿ ಎಂದು ಹೇಳುತ್ತೇನೆ. ಐಟಂ ನಂಬರ್ 5. "The property known as "Avalon" has been acquired for locating the National Tuberculosis Institute at Bangalore" ಯಾವಾಗ ಅದನ್ನು ಅಕ್ವೈರ್ ಮಾಡಿಕೊಂಡಿರಿ? ಯಾರು ಅಕ್ವೈರ್ ಮಾಡಿದವರು? ಅಕ್ವೈರ್ ಮಾಡಿದ್ದರಲ್ಲಿ ನೀತಿ ಏನು ಅನುಸರಿಸಿದ್ದಾರೆ ಎಂದು ಪಬ್ಲಿಕ್ ಸ್ಟೇಟ್‌ಮೆಂಟ್ ಮಾಡಬೇಕಾಗಿತ್ತು. ನೀವು ಇದನ್ನು ತೆಗೆದುಕೊಳ್ಳಬೇಕಾದರೆ ಯಾವ ಆಧಾರದ ಮೇಲೆ ತೆಗೆದುಕೊಂಡಿದ್ದೀರಿ? 8 ಲಕ್ಷ, 5 ಲಕ್ಷ ಇರಬಹುದು. 8 ಲಕ್ಷ ಹೇಗೆ ಒಪ್ಪಿಕೊಳ್ಳುವುದು? ಆಧಾರ ಇರಬೇಕು. ಇಂಥಾ ಆಧಾರದ ಮೇಲೆ ಬೆಲೆ ಕೊಟ್ಟು ತೆಗೆದುಕೊಂಡಿದ್ದೇವೆ ಎಂದು ನೀವು ಹೇಳಬೇಕು. 10 ಲಕ್ಷ 8 ಲಕ್ಷಕ್ಕೆ ಪ್ರೈವೇಟ್ ಪ್ರಾಪರ್ಟಿ ತೆಗೆದುಕೊಳ್ಳುವ ವಿಚಾರವಲ್ಲ. 8 ಲಕ್ಷ ಚಿಲ್ಲರೆ ರೂಪಾಯಿ ಕೊಟ್ಟಿದ್ದರೆ ಬೆಂಗಳೂರಿನಲ್ಲಿ ಬೇರೆ ಜಾಗ ಇರಲಿಲ್ಲವೇ?

Sri B. D. JATTI.—If the Hon'ble Member yields, I wish to say one thing. The T. B. Training centre was to be started here. If we had not given that place, that would have gone to some other State. It is just to get that centre for the benefit of the State, we have done so.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಒಂದು ವಿಷಯವನ್ನು ಹೇಳುತ್ತೇನೆ. ಈಗ ಸರ್ಕಾರದವರು ಕುಮಾರಕೃಪ ತೆಗೆದುಕೊಂಡಿದ್ದಾರೆ. ಅದೇ ರೀತಿ ಪ್ರೈವೇಟ್ ಪಾಪರ್ಟಿ ತಗೆದುಕೊಳ್ಳುವುದರಿಂದ ಏನು ತೊಂದರೆ ಇದೆಯೆಂದು ಹೇಳುತ್ತೇನೆ. ಶ್ರೀ ಶೇಷಾದ್ರಿಐಯ್ಯರ್ ಆಸ್ತಿ ತೆಗೆದುಕೊಂಡ ಸಂದರ್ಭದಲ್ಲಿ ಕೋರ್ಟಿನ ಮುಂದೆ ಹೋಗಿ ವ್ಯಾಜ್ಯ ಆಡುವ ಸಂದರ್ಭ ಬಂತು. ಒಂದು ದೃಷ್ಟಿಯಿಂದ ಸರ್ಕಾರ ಮುಂದೆ ಹಣ ಖರ್ಚು ಮಾಡಿ ತಾಪತ್ರಯಕ್ಕೆ ಸಿಕಿಕೊಳ್ಳಬಹುದು ಎನ್ನುವುದನ್ನು ಕೂಡ ಯೋಚನೆ ಮಾಡಬೇಕು.

ಇನ್ನು ಡಿಮ್ಯಾಂಡ್ ನಂಬರ್ 58ರಲ್ಲಿ "With the passing of Local Boards and Village Panchayets Act 1959, elections have to be conducted shortly so that the new Local Boards and Village Panchayats may came into being from 1st April 1960" ಎಂದು ಹೇಳಿದ್ದಾರೆ. ಕೊನೆಯಲ್ಲಿ ಆ ಹಣವನ್ನು ವಸೂಲು ಮಾಡಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಚಿಕ್ಕ ಪಂಚಾಯತಿಗಳಿಗೆ ಎಲೆಕ್ಷನ್‌ಗಾಗಿ ಹಣ ಖರ್ಚು ಮಾಡಿ, ಬೇಡ ಎಂದು ಹೇಳುವುದಿಲ್ಲ. ಪುನಃ ಅವರಿಂದ ವಸೂಲು ಮಾಡುವುದು ಸಾಧುವಲ್ಲ. 10 ಲಕ್ಷ ಅಷ್ಟು ದೊಡ್ಡ ಹಣ ಅಲ್ಲ. ಪುನಃ ರೈತರಿಗೆ ಕಿರುಕುಳ ಕೊಡಬೇಡಿ. ಪಂಚಾಯತಿಗಳಿಂದ ವಸೂಲು ಮಾಡುವುದು ಬೇಡಿ ಎಂದು ನಾನು ಸಲಹೆ ಮಾಡುತ್ತೇನೆ. ಇದನ್ನು ರೈತರಿಂದ ತೆಗೆದುಕೊಳ್ಳುವುದು ಬೇಡ ಎಂದು ಹೇಳುತ್ತಿದ್ದೇನೆ. ಆದರೆ ಶ್ರೀ ಮೂಡಲಗಿರಿಗೌಡರು ರೈತರಿಂದ ಈ ಹಣವನ್ನು ಸರಕಾರದವರು ಸುಲಿಗೆ ಮಾಡಿಕೊಳ್ಳಬಹುದೆಂದು ಹೇಳುತ್ತಿದ್ದಾರೆ. ಈ ವಿಚಾರದಲ್ಲಿ ಮುಂದೆ ಆ ರೈತರಿಗೆ ಸಮಾಧಾನ ಹೇಳತಕ್ಕ ಜವಾಬ್ದಾರಿ ಆ ಮೂಡಲಗಿರಿಗೌಡರ ಮೇಲೆ ಬಿದ್ದಿದೆ.

ಸ್ವಾಮಿ, ಇಲ್ಲಿ ಮತ್ತೊಂದು ಐಟಂನಲ್ಲಿ ಹೀಗೆ ತಿಳಿಸಿದೆ:—

Demand No. 51 : Item No. 3 :

"A portion of the road which lies in the State of Andhra Pradesh has been transferred to the Government of Mysore by Andhra Pradesh Government. It is a part of the High Way from Bangalore to Bellary and this portion of the road had to be brought to the standards of a High Way immediately......"

ಈ ವಿಚಾರದಲ್ಲಿ ಸಭೆಗೆ ಇನ್ನೂ ಸ್ವಲ್ಪ ವಿವರಗಳು ಬೇಕಾಗಿದ್ದುವು. ಆ ರಸ್ತೆ ಯಾವುದು? ಅದೆಲ್ಲಿದೆ! ಅದನ್ನು ನಮ್ಮ ಸರ್ಕಾರದವರು ಯಾವಾಗ ತಮ್ಮ ಕೈಗೆ ತೆಗೆದುಕೊಂಡರು? ಎಂದು ಆ ರಸ್ತೆ ನಮ್ಮ ಸರ್ಕಾರಕ್ಕೆ ಟ್ರಾನ್ಸ್‌ಫರ್ ಆಯಿತು ಎನ್ನತಕ್ಕ ವಿವರಗಳನ್ನೆಲ್ಲ ತಿಳಿಸಬೇಕಾಗಿತ್ತು. ನೋಟ್ ಬರೆಯತಕ್ಕ ಸಿಬ್ಬಂದಿ ಇದೆ. ಅವರು ಬರೆದುದನ್ನು ಮಂತ್ರಿಗಳು ಇಲ್ಲಿ ಓದಿಬಿಡುತ್ತಾರೆ. ಹೇಗೂ ಇವರು ಈ ನೋಟನ್ನು ಬರೆಯುವುದಿಲ್ಲ. ಬರೆಯತಕ್ಕವರಿಗಾದರೂ ಸ್ವಲ್ಪ ತಿಳಿವಳಿಕೆ ಕೊಟ್ಟು ಈ ನೋಟಿನಲ್ಲಿ ಸ್ವಲ್ಪ ಹೆಚ್ಚಿನ ವಿವರಣೆಗಳು ಇರುವಂತೆ ಮಾಡತಕ್ಕದ್ದು ಅತ್ಯಗತ್ಯವೆಂದು ಹೇಳುತ್ತೇನೆ.

ಇನ್ನು ಇಲ್ಲಿ ಒಂದು ಕ್ರೋಂ ಟ್ಯಾನಿಂಗ್ ಕಂಪೆನಿಯ ಬಗ್ಗೆ ಹೀಗೆ ಹೇಳಿದ್ದಾರೆ. ಆದರೆ ಆ ಕಂಪೆನಿಗೆ ಸರ್ಕಾರದವರು ಯಾವ ಕಾರಣದ ಮೇಲೆ ಸಾಲ ಮಂಜೂರು ಮಾಡಿದರೋ ಅದು ಗೊತ್ತಾಗುತ್ತಿಲ್ಲ.

"Government considering the question of rehabilitatingthe Mysore Chrome Tanning Co., Ltd., have sanctioned a loan of Rs. 4.20 lakhs. As no provision was made in the original Budget Estimates for this expenditure sanction was accorded for an advance of Rs. 4.20 lakhs out of the Contingency Fund..."

ಶ್ರೀ ಬಿ. ಡಿ. ಜತ್ತಿ.—ಅದಕ್ಕೆ ಕಾರಣವನ್ನು ತಿಳಿಸಲೇ?

This Company was doing very well during the war time. After that, due to lack of working capital, it could not continue the work. So in order to help

the Company to come up and in order to give more capital for working, we have given that.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನಾನು ಈ ಟ್ರ್ಯಾನಿಂಗ್ ಕಂಪೆನಿಗೆ ಸಾಲ ಕೊಡಬೇಡಿ ಎಂದು ಹೇಳುವುದಿಲ್ಲ. ಆ ಚೆನ್ನಪಟ್ಟಣದಲ್ಲಿರತಕ್ಕ ಸ್ಪನ್‌ಸಿಲ್ಕ್ ಮಿಲ್‌ನಲ್ಲಿ ಕೆಲಸ ಮಾಡುತ್ತಿರುವ ಎರಡು ಸಾವಿರ ಜನರು ಈ ದಿವಸ ಕೆಲಸವಿಲ್ಲದೆ ಜೀವನಕ್ಕೆ ಬೇರೆ ಮಾರ್ಗವಿಲ್ಲದೆ ಬೀದಿ ಬೀದಿಗಳಲ್ಲಿ ಅಲೆಯುತ್ತಿದ್ದಾರೆ. ಆ ಸಂಬಂಧದಲ್ಲಿ ಆ ಕಂಪೆನಿ ಕೆಲಸ ನಡೆಸಲು ಸರ್ಕಾರದವರೇನೂ ಹಣವನ್ನು ಸಾಲವಾಗಿ ಕೊಡಬೇಕಾಗಿಲ್ಲ, ಸುಮ್ಮನೆ ಜಾಮೀನಾಗಿದ್ದರೆ ಸಾಕೆಂದು ಕೇಳಿದ್ದಕ್ಕೆ ಸರ್ಕಾರದವರಿಂದ ಉತ್ತರವಿಲ್ಲ. ಇಡಿಯ ಏಷ್ಯಾದಲ್ಲೇ ಅಂಥ ಸ್ಪನ್‌ಸಿಲ್ಕ್ ಕಂಪೆನಿ ಮತ್ತೊಂದಿಲ್ಲ. ಅಂಥ ಉನ್ನತ ದರ್ಜೆಯ ರೇಷ್ಮೆ ಉದ್ಯಮ ಈ ದಿವಸ ಅಲ್ಲಿ ಕೊಲೆಯಾಗಿ ಹೋಗಿದೆ. ಹಾಗೆ ಆ ಕಂಪೆನಿಗೆ ಸರ್ಕಾರದವರು ಜಾಮೀನಾಗಿದ್ದಿದ್ದರೆ ಇವರಿಗೆಷ್ಟು ಹಣ ನಷ್ಟವಾಗುತ್ತಿತ್ತು ? ಅದರಿಂದ ಎಷ್ಟು ಜನರು ಜೀವನ ಮಾಡುತ್ತಿದ್ದರು. ಅಂಥ ಹೆಸರುವಾಸಿಯಾದ ರೇಷ್ಮೆ ಕೈಗಾರಿಕೆಗೆ ಉತ್ತೇಜನ ಕೊಡದೆ ಎಲ್ಲಿಯೋ ಮೂಲೆಯಲ್ಲಿದ್ದ ಕಾರ್ಖಾನೆಯ ಮೇಲೆ ಸರ್ಕಾರದ ಕಣ್ಣಿಗೆ ಬಿದ್ದುದು ಎಷ್ಟು ನ್ಯಾಯವಾದುದು ಎಂದು ಕೇಳಬೇಕಾಗಿದೆ. ಈ ರೇಷ್ಮೆ ಕಾರ್ಖಾನೆಯ ಮೇಲೇಕೆ ಸರ್ಕಾರದವರ ಕಣ್ಣು ಬೀಳಲಿಲ್ಲ ?

Sri B. D. JATTI.—Necessary action has been taken through the Advocate General and the Government Pleader. The matter is pending before the High Court. The Hon'ble Member knows it. Why should he discuss it ? Unless the High Court gives a decision, we cannot go and take it.

Mr. SPEAKER.—The House now rises and will meet after half an hour.

———

The House adjourned for recess at Fifty-five Minutes past Two of the Clock and re-assembled at Thirty Minutes past Three of the Clock.

———

[MR. DEPUTY SPEAKER in the Chair].

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸ್ವಾಮಿ, ಅಕಸ್ಮಾತ್ ತಮಗೆ ಮತ್ತು ನಮ್ಮ ವಿರೋಧ ಪಕ್ಷದ ನಾಯಕರ ಗಮನಕ್ಕೆ ಸುದ್ದಿ ಬರುವುದಕ್ಕೆ ಮುಂಚೆ ದೇಶದಲ್ಲಿ ವಿಷಾದಕರವಾದ ಸಂಗತಿಯಾಗಿರುವುದು ನನಗೆ ಅತಿ ಶೀಘ್ರವಾಗಿ ಗೊತ್ತಾಯಿತು. ಹಿಂದೆ ಕಾಂಗ್ರೆಸ್ ಪ್ರೆಸಿಡೆಂಟರಾಗಿದ್ದ ಡಾ|| ಪಟ್ಟಾಭಿ ಸೀತಾರಾಮಯ್ಯನವರು ಈಗ ಮಧ್ಯಪ್ರದೇಶದ ಗಾರ್ವರ್ ಆಗಿದ್ದರು. ಅವರಿಗೆ 80 ವರ್ಷ ವಯಸ್ಸು. ಅವರು ಬಹಳ ದಿವಸಗಳಿಂದ ಕಾಯಿಲೆ ಇದ್ದುದರಿಂದ ಈ ದಿವಸ ಬೆಳಗ್ಗೆ ಗತಿಸಿದ್ದಾರೆ. ಆದುದರಿಂದ ಲೋಕ ಸಭೆಯಲ್ಲೂ ಮಧ್ಯಪ್ರದೇಶದ ಅಸೆಂಬ್ಲಿಯಲ್ಲೂ ಸಂತಾಪ ಸೂಚನೆಯನ್ನು ಮಾಡಿದ್ದಾರೆ. ಅಂತಹ ಮಹನೀಯರ ವಿಷಯದಲ್ಲಿ ಈ ಸಭೆಯಲ್ಲೂ ಸಂತಾಪ ಸೂಚನೆಯನ್ನು ಮಾಡದಿದ್ದರೆ ನಮ್ಮ ಗೌರವಕ್ಕೆ ಲೋಪ ತಂದಂತಾಗುತ್ತದೆ. ನನಗೆ ಈಗ ತಾನೇ ಈ ವರ್ತಮಾನ ಗೊತ್ತಾಗಿರುವುದರಿಂದ ಈ ಸೂಚನೆಯನ್ನು ಈ ಸಭೆಯ ಮುಂದೆ ಇಡುತ್ತಿದ್ದೇನೆ.

Sri B. D. JATTI.—So far I have no information.

Sri B. K. PUTTARAMIYA.—It is authoratitive information. ಫೋನ್ಸ್ ಫೋನ್ ಮಾಡುವುದಕ್ಕೆ ಇದು ಸಾಧಾರಣ ವಿಷಯವಲ್ಲ.

Sri B. D. JATTI.—I do not know about it. I will try to obtain confirmation early.

Sri B. K. PUTTARAMIYA.—My information is reliable.

Sri B. D. JATTI.—It is not a controversial subject. I will get information in about ten minutes. The House can go on till then.

Sri B L. NARAYANASWAMY.—It is not fair that we should transact business in the face of the motion moved by my friend. We can adjourn the House for a further five or ten minutes till the Chief Minister gets information.

Sri B. D. JATTI.—The House cannot be suspended.

Mr. DEPUTY SPEAKER.—We will proceed with the business for some time.

†Sri G. VENKATAI GOWDA (Palyam).—Sir, It appears as if the Government has made it a regular feature to present supplementary estimates year after year in spite of the strong criticisms made by many of us time and again. It is a fact that Article 205 of the Constitution provides for the Government asking for additional grants, but I feel the Government has not understood the real purpose behind the Article. If the amounts authorised by the Appropriation Act is found insufficient to carry on a particular work or if it is found that a particular work should be undertaken which could not have been foreseen at the time of the preparation of the budget estimates or which could not have been contemplated at that time and if that work is unavoidable and is in the interests of the State, Government could treat it as a new service and seek the approval of the House. But the habit of treating everything as a new service is improper and is not

(SRI G. VENKATAI GOWDA)

contem. ated by Article 205. If the members have only the patience to go through the several items for which moneys have been asked for now, it would be clear that most of the items could have been foreseen even at the time when the financial statement for 1959-60 was presented to this House. Some of them could have been included in the budget estimates presented for the year 1960-61. What is the reasonable inference that we should draw from the attitude of Government in presenting these supplementary demands every year? I will presently show how the Government could have known some of these things even before they presented the budget estimates for 1959-60. If they had some knowledge about these things, what prevented them from including the expenditure for those things in the budget for 1959-60? Because of their failure to do that, the only inference that we can draw is that they did not include the expenditure on those items in the budget for 1959-60 in order to avoid presenting a deficit budget. Is this fair ? Are Government giving a correct picture of the financial position of the State by resorting to this method ?

I shall take Demand No. 2 and show how the expenditure on this item could have been foreseen and included in the budget estimates for 1959-60. It was made very clear long before that Government were going to take over the inam villages from 1st April 1959. So Government had known this before and they could have included this expenditure in the budget estimates for 1959-60 but they deferred it just to avoid presenting a deficit budget. I fail to understand how the Government could now come before this House and ask for the approval of this House for that expenditure as a supplementary grant. I also fail to understand how this could be treated as expenditure on a new service because the Government had declared that they were going to take over the inam villages from 1st April 1959 and in the budget estimates for 1959-60 which were presented on 31st March 1959 that item could have easily been included. That is not the intention of the framers of Article 205 of the Constitution of India when they provided for expenditure on new service and so I submit that this House cannot give its approval for this expenditure as a supplementary grant.

On a perusal of some of the items of expenditure for which supplementary grants have been asked now, I feel that some of them could have been easily included in the budget estimates for 1959-60. If they had done that, then there would have been a deficit of about Rs. 20 lakhs in the budget for 1959-60 and that seems to be the reason why they were not included in the 1959-60 budget. I also feel that at least some of these items could have been deferred to be included in the budget estimates for 1960-61. That also they have not done. This has upset the budget estimates for 1959-60. I have already said that the expenditure on some of these items cannot be said to be expenditure on new service because they had knowledge of this expenditure before framing the budget estimates for 1959-60.

Coming to Demand No. 13 which refers to expenditure on the creation of a Technical Audit Cell in the Directorate of Efficiency Audit, they could have foreseen this expenditure and included it in the budget estimates for 1959-60.

Likewise Demand No. 22 refers to expenditure on account of a separate sub-division for survey of drainage works in Gulbarga and Raichur Districts created in August 1958. If the Sub-Division had been created in August 1958 Government could have foreseen this expenditure and provided for it in the budget estimates for 1959-60. I fail to understand why instead of doing that, they deferred this expenditure to be included in the supplementary budget. The expenditure on account of this item is Rs. 41,000.

Then Demand No. 40 refers to community development blocks. Whatever blocks were allotted during the particular year, expenditure on them was met. What was the necessity for extending the operation of eight of these blocks is the thing which I cannot understand. They have

treated this also as new service even though it is stated that it is only extension of the operation of the existing blocks. The Government knew that the entire State was to be covered with community development blocks. They should have proceeded according to the order of allotment of these blocks from year to year. Instead of doing that, because of some pressure from some quarters they allotted 8 additional community development blocks and had to incur this extra expenditure.

Sri B. D. JATTI.—That is not correct.

Sri H. C. LINGA REDDY.—These were not additional number blocks that were allotted. Only the period of the existing blocks was extended. The matter was under correspondence with the Government of India. At the time when the budget estimates were being prepared the sanction for extending the operation had not come. We received the sanction only after the budget estimates were presented.

Sri. G. VENKATAI GOWDA.—You had sought the permission of the Government of India and you know that you were getting the sanction. You knew also that you had to incur some expenditure for that.

Sri H. C. LINGA REDDY.—How could we anticipate the sanction?

Sri G. VENKATAI GOWDA.—Then you could have deferred this expenditure to be included in the budget estimates for 1960-61.

Sri H. C. LINGA REDDY.—But work had to go on.

Sri G. VENKATAI GOWDA.—What I want to say is that if you had had a prior knowledge of this expenditure you should have included it in the budget estimates for 1959-60.

Sri B. D. JATTI.—How could we be sure that the Government of India would sanction the extension?

Sri G. VENKATAI GOWDA.—Then let me ask the Chief Minister how he justifies the non-inclusion of the expenditure under Demand No. 22 which relates to a separate Sub-Division for survey of drainage works in Gulbarga and Raichur Districts created in August 1958. You knew that this expenditure had to be incurred. So why was it not included in the budget estimates for 1959-60?

So, likewise, there are several items and we have got reason to infer that you have included these things here just to present a surplus budget.

Regarding the purchase of 4465 shares of the Mysore State Financial Corporation, etc. this is also new service. If you had no knowledge before you presented the budget, you would have been justified. In such cases which are unavoidable and which should be spent in the interest of the State, you are justified and not otherwise. So far as loans for irrigation, housing charges, etc., are concerned, this also is connected with the C.D. Blocks.

Sri T. MARIAPPA (Minister for Finance).—You must appreciate our position. Only when we know the real situation, we will bring forward.

Sri G. VENKATAI GOWDA.—But, there are certain items which could have been foreseen befor you presented the budget.

Sri T. MARIAPPA.—Take the instance of the Mandya Paper Mills.

Sri G. VENKATAI GOWDA.—I only make reference to things which you could have foreseen or deferred to be included in the next financial budget. This shows that you do not want to give a correct financial picture of the State. If you had done it, you should have presented a deficit budget. We have been requesting that it should be brought as far as possible, within the Plan. There are certain items where you are spending outside the Plan. When pressure is brought, you take up certain things to help somebody. No distinction should be made. No expenditure should be incurred outside the Plan. We are seeing so many lapses and money allotted has not been spent. Such being the case, why should works outside the Plan be taken? In order to show a surplus budget, these things are brought in here. This is not the way the Government should come forward with these things under Article 203. Now Service means, things which could not be foreseen by Government. Only such

(SRI G. VENKATAI GOWDA)

things could be treated as New Service and not anything and everything. With these words, I say that there are many things here for which our conscience does not permit us to give our approval to them.

†ಶ್ರೀ ಡಿ.ಟಿ.ಸೀತಾರಾಮ ರಾವ್ (ಭದ್ರಾವತಿ).—ಸ್ವಾಮಿ, ಈ ದಿವಸ ನಮ್ಮ ಮುಂದೆ ಸಪ್ಲಿಮೆಂಟರಿ ಎಸ್ಟಿಮೇಟ್‌ಗಳನ್ನು ಸರ್ಕಾರದವರು ಇಟ್ಟಿದ್ದಾರೆ. ಅದಕ್ಕೆ ನಾನು ಹೃತ್ಪೂರ್ವಕವಾಗಿ ಅನುಮೋದನೆಯನ್ನು ಕೊಡುತ್ತ ಕೆಲವು ವಿಷಯಗಳನ್ನು ಹೇಳಲು ಇಷ್ಟಪಡುತ್ತೇನೆ. ದೇಶದಲ್ಲಿ ಹೊಸ ಹೊಸ ಕೆಲಸಗಳಿಗೆ ಹಣದ ಕೊರತೆ ಬಿದ್ದಾಗ ಆ ಕೊರತೆಯನ್ನು ನೀಗಿಸಿ ಆ ಕೆಲಸಗಳನ್ನು ಮಾಡುವುದಕ್ಕಾಗಿ ರಾಜ್ಯಾಂಗದ 205ನೆಯ ಆರ್ಟಿಕಲ್ ಅವಕಾಶ ಮಾಡಿಕೊಡುತ್ತದೆಂದು ತಿಳಿಸಿದ್ದಾರೆ. ಆ ಪ್ರಕಾರ ಸರ್ಕಾರದವರು ಕೆಲವು ಡಿಮ್ಯಾಂಡ್‌ಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ.

ಮೊದಲನೆಯದಾಗಿ ನಾನು ತಿಳಿಸುವುದೇನೆಂದರೆ, ಡಿಮ್ಯಾಂಡ್ ಎರಡರಲ್ಲಿ ಇನಾಂ ಅಬಾಲಿಷನ್ ಸಂಬಂಧದಲ್ಲಿ ಕಾಂಪೆನ್‌ಸೇಷನ್ ಕೊಡಲು 3,50,000 ರೂಪಾಯಿಗಳನ್ನು ಒದಗಿಸಿದ್ದಾರೆ. ಇನಾಂ ರದ್ದಿಯಾತಿ ಕಾನೂನು 1955ರಲ್ಲಿ ಆಗಿ, ಸರ್ವೆ ಸೆಟಲ್‌ಮೆಂಟ್ ಆಗುವುದಕ್ಕೋಸ್ಕರ ಇಲ್ಲಿಯ ವರೆಗೆ ಐದು ವರ್ಷಗಳ ಕಾಲ ವಿಳಂಬವಾಗಿದೆ. ಇದರ ಕೆಳಗೆ explanatory note ನಲ್ಲಿ ಕೊಟ್ಟಿರುವ ಪ್ರಕಾರ 243ಕ್ಕೆ ಸರ್ವೆ ಆದ ಗ್ರಾಮಗಳನ್ನು ಏಪ್ರಿಲ್ ತಿಂಗಳಿನಿಂದ ಸರ್ಕಾರದ ಸ್ವಾಧೀನಕ್ಕೆ ತೆಗೆದುಕೊಳ್ಳಲಾಗಿದೆ. ಅವುಗಳಿಗೆ ಪರಿಹಾರವನ್ನು ಕೊಡಲು ಹಣಕಾಸನ್ನು ಒದಗಿಸಬೇಕು ಎಂಬುದಾಗಿ ತಿಳಿಸಿದ್ದಾರೆ. ಈ ಪ್ರಕಾರ ಬೆಂಗಳೂರು ಡಿವಿಜನ್ನಿಗೆ ಒಂದು ಲಕ್ಷ ರೂಪಾಯಿ, ಹಾಗೂ ಮೈಸೂರು ಡಿವಿಜನ್ನಿಗೆ ಎರಡು ಲಕ್ಷ ಐವತ್ತು ಸಾವಿರ ರೂಪಾಯಿ, ಹೀಗೆ ಒಟ್ಟು ಮೂರು ಲಕ್ಷ ಐವತ್ತು ಸಾವಿರ ರೂಪಾಯಿಗಳ ಬೇಡಿಕೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಇಲ್ಲಿಯವರೆಗೂ ತಡಮಾಡಿದ ಕಾರಣದಿಂದ ಇನಾಂದಾರರು ತಮ್ಮ ಜಮೀನನ್ನು ಬೇರೆಯವರಿಗೆ ಬಿಕರಿ ಮಾಡಿರುವ ಕಾರಣ ಸ್ಥಳದಲ್ಲಿರತಕ್ಕ ರೈತಾಪಿವರ್ಗದವರಿಗೆ ಭೂಮಿ ಇಲ್ಲದ ಹಾಗೆ ಆಗಿದೆ ಮತ್ತು ಲಿಟಿಗೇಷನ್ನಿಗೆ ಕಾರಣವಾಗಿದೆ. ಎಂದೋ ಆಗಬೇಕಾಗಿದ್ದುದನ್ನು ಇಷ್ಟು ತಡವಾಗಿ ನಮ್ಮ ಮುಂದೆ ತಂದಿದ್ದಾರೆ. ನಮ್ಮ ರೆವಿನ್ಯೂ ಮಂತ್ರಿಗಳು ಒಳ್ಳೆಯ ಸುಧಾರಣೆ ಮಸೂದೆಗಳನ್ನು ತರುತ್ತಾರೆ. ಆದರೆ ನಿಧಾನ ಮಾಡುತ್ತಾರೆ. ಅವರೇನಾದರೂ ಇನಾಂದಾರರ ಪರವಾಗಿದ್ದಾರೆಯೋ, ಜಹಗೀರ್‌ದಾರರ ಪರವಾಗಿದ್ದಾರೆಯೋ ಅಥವಾ ಏನು ತೊಂದರೆ ಇದೆಯೋ ಗೊತ್ತಾಗುವುದಿಲ್ಲ. ಜಿಲ್ಲಾಧಿಕಾರಿಗಳು ಇನಾಂ ಜಮೀನುಗಳನ್ನು ಬಿಕರಿ ಮಾಡಿಕೊಳ್ಳುವುದಕ್ಕೆ ಅನುಮತಿಯನ್ನು ಕೊಟ್ಟರು. ಅದರಿಂದ ಬಹಳ ಜನ ಜಮೀನುಗಳನ್ನು ಮಾರಿಕೊಂಡಿದ್ದಾರೆ. ಆದರೆ ಇನಾಂ ಗ್ರಾಮಗಳಲ್ಲಿರತಕ್ಕ, ಅಲ್ಲಿ ಜಮೀನನ್ನು ಗೇಣಿಗೆ ಮಾಡಿ ಅನುಭವಿಸಿಕೊಂಡು ಬಂದಿರತಕ್ಕ ಗೇಣಿದಾರರು ಮತ್ತು ಕೂಲಿಯವರು ನಿರ್ಗತಿಕರಾಗಿ ಶೋಚನೀಯ ಪರಿಸ್ಥಿತಿಯುಂಟಾಗಿದೆ. ಇದಕ್ಕೆ ತಡಮಾಡಿರುವುದೇ ಕಾರಣ. ಇಷ್ಟು ತಡವಾಗಿದ್ದರೂ ಕೂಡ, ಇನಾಂದಾರರಿಗೆ ಬೇಗ ಪರಿಹಾರ ಧನವನ್ನು ಕೊಡಬೇಕು ಎಂದು ಈಗ ಕೇಳಿರುವ ಹಣವನ್ನು ಕೂಡಲೇ ತೆಗೆದುಕೊಂಡು, ಇನಾಂದಾರರಿಗೆ ಕೊಡಬೇಕಾದ ಪರಿಹಾರ ಧನವನ್ನು ಕೊಟ್ಟು settle ಮಾಡಬೇಕೆಂದು ತಿಳಿಸಿ ಈ ಬೇಡಿಕೆಗೆ ನನ್ನ ಅನುಮೋದನೆಯನ್ನು ಕೊಡುತ್ತೇನೆ.

ಡಿಮ್ಯಾಂಡ್ 13–Efficiency Audit and Anti-corruption ವಿಷಯ. Explanatory Note ನಲ್ಲಿ

> "A Technical Audit cell in the Directorate of Efficiency Audit and Anti-corruption with the following staff has been created from the current year"

ಎಂದು ಹೇಳಿದ್ದಾರೆ...

4 P.M.

ಸ್ವಾಮಿ, ಎಫಿಷಿಯೆನ್ಸಿ ಆಡಿಟ್ ಕಮಿಟಿ ಮತ್ತು ಆಂಟಿಕರಪ್ಷನ್ ಏನು ಇದೆ, ಅದರಲ್ಲಿ ಈಹು ಮಟ್ಟಿಗೆ ಎಫಿಷಿಯೆನ್ಸಿ ಇರಬೇಕು. ಅಲ್ಲಿ ನಡೆಯತಕ್ಕ ಕೆಲಸವನ್ನು ನೋಡಿದರೆ ತುಂಬಾ ಡಿಲೇ ಆಗುತ್ತದೆ. ಅವರಿಗೆ ಎಫಿಷಿಯೆನ್ಸಿ ಇಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಡಿವಿಜನಲ್ ಕಮೀಷನರ್‌ಗೆ ಪವರ್ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಅವರಿಗೆ ಎನ್‌ಕ್ವೈರಿ ಮಾಡುವುದಕ್ಕೆ ಪವರ್ ಇನ್ನೂ ಕೊಟ್ಟಿಲ್ಲ. ಹಾಗೆ ನಿರ್ದಿಷ್ಟವಾಗಿ ಅವರಿಗೆ ಪವರ್ ಕೊಡದೆ ಇರುವುದರಿಂದ ಕೇಸುಗಳು ತುಂಬಾ ಡಿಲೇ ಆಗಿವೆ. ಕೇಸುಗಳು ಡಿವಿಜನಲ್ ಕಮೀಷನರ ಆಫೀಸುಗಳಲ್ಲಿ ಬಿದ್ದುಹೋಗಿರುತ್ತವೆ. ಇದಕ್ಕಾಗಿ ಹೆಚ್ಚಿಗೆ ದುಡ್ಡು ಏಕೆ ತೆಗೆದುಕೊಳ್ಳುತ್ತಾರೋ ನನಗೆ ಗೊತ್ತಾಗುವುದಿಲ್ಲ. ಆಂಟಿಕರಪ್ಷನ್‌ನಲ್ಲಿ ಇನ್‌ವ್ಯಾಲ್‌ವ್ ಆಗಿರುವವರ ವಿಷಯ ಬೇಗ ತೀರ್ಮಾನ ಆಗಬೇಕು. ಇಲ್ಲದಿದ್ದರೆ ಅವರ ಹೆಂಡತಿ ಮಕ್ಕಳಿಗೆ ತೊಂದರೆಯಾಗುತ್ತದೆ. ಅವರನ್ನು ಸಸ್‌ಪೆನ್‌ಷನ್‌ನಲ್ಲಿ ಇಡುತ್ತಾರೆ; ಹಾಗೆಯೇ 4–5 ವರ್ಷ ತಳ್ಳಿ ಹೋಗುತ್ತದೆ. ಇದರಿಂದ ಅವರ ಭವಿಷ್ಯ ಏನಾಗಬೇಕು ? ಎಫಿಷಿಯೆನ್ಸಿ ಆಡಿಟ್ ಎಲ್ಲರ ಮೇಲೂ ಎಫಿಷಿಯೆನ್ಸಿ ಇಟ್ಟುಕೊಂಡು ಸರಿಯಾಗಿ ಕೆಲಸ ಮಾಡುವ ಕಮಿಟಿ ಆಗಿರಬೇಕು. ಹಾಗೆ ಇಲ್ಲದೆ ಹೆಚ್ಚುವರಿ ಸ್ಟ್ಯಾಫ್ ಕೇಳುವುದು ಆಶ್ಚರ್ಯವಾಗುತ್ತದೆ. ಎಫಿಷಿಯೆನ್ಸಿ ಹೆಚ್ಚಿಗೆ ಮಾಡುವ ಉದ್ದೇಶದಿಂದ ಆಡಿಟ್ ಸೆಲ್ ಬೇಕು ಎಂದು ಹೇಳುತ್ತಾರೆ. ಆದುದರಿಂದ ಆಂಟಿಕರಪ್ಷನ್‌ನಲ್ಲಿ ಇನ್‌ವಾಲವ್ ಆಗಿರುವವರಿಗೆ ಕೂಡಲೇ ಪನಿಷ್‌ಮೆಂಟ್ ಕೊಡುವ ಕಾರ್ಯಕ್ರಮವನ್ನು ಸರ್ಕಾರದವರು ಕೈಗೊಳ್ಳಬೇಕು ಎಂದು ನಾನು ಸಲಹೆ ಮಾಡುತ್ತೇನೆ.

ಡಿಮ್ಯಾಂಡ್ ನಂಬರ್ 22ರಲ್ಲಿ.—

> "A separate Sub-Division for Survey of drainage works in Gulbarga and Raichur Districts was created in August 1958"

ಎಂದು ಹೇಳಿದೆ. ಇದು ಕಳೆದ ಬಡ್ಜೆಟ್ ಅಧಿವೇಶನದಲ್ಲಿ ಬರಬೇಕಾಗಿತ್ತು. ದೇಶದಲ್ಲಿ ಇಂಥಾ ಕಾರ್ಯಕ್ರಮಗಳು ವಿಶೇಷವಾಗಿ ಆಗಬೇಕಾಗಿವೆ. ಅದರಲ್ಲೂ ಕೂಡ ಇಂಟಿಗ್ರೇಟೆಡ್ ಏರಿಯಾ ಏನು ಇದೆ ಅದು

ಬಹಳ ಹಿಂದುಳಿದಿರತಕ್ಕ ಪ್ರದೇಶ. ಅಲ್ಲಿ ಇಂಥಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಬೇಗ ಸರ್ವೆ ಕ್ರಮಗಳನ್ನು ಮಾಡುವ ಕಾರ್ಯಕ್ಕೆ ಒಂದು ಸಬ್ ಡಿವಿಜನ್ ನೇಮಿಸಿಕೊಂಡಿರುವುದು ಸರ್ಕಾರದ ಪ್ರಗತಿ ಪರವಾದ ಧೋರಣೆಯನ್ನು ತೋರಿಸುತ್ತದೆ. ಆದುದರಿಂದ ಅದನ್ನು ಅನುಮೋದಿಸುತ್ತೇನೆ.

ಡಿಮ್ಯಾಂಡ್ ನಂಬರ್ 23ರಲ್ಲಿ—

> "Due to the participation of the various departments of the State Governments in the world Agriculture Fair"

ಹಣ ಬೇಕಾಗಿದೆ ಎಂದು ಹೇಳಿದ್ದಾರೆ. ನಮ್ಮ ಒಂದು ಸರ್ಕಾರದ—

> "Fisheries, Forests, Animal Husbandry, Industries, Irrigation Electricity, Agriculture fair, Buildings and Decoration, etc."

ಈ ಎಲ್ಲಾ ಐಟಂಗಳಿಗೆ ಕೇಂದ್ರದಲ್ಲಿ ಏತಕ್ಕೆ 4 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲು ತೆಗೆದುಕೊಳ್ಳುತ್ತೀರಿ ! ನಮ್ಮ ದೇಶದಲ್ಲಿ ಎಷ್ಟು ಬೇಕಾದರೂ ಖರ್ಚು ಮಾಡಿ ನಾನು ಬೇಡ ಎನ್ನುವುದಿಲ್ಲ. ಕೇಂದ್ರ ಸರ್ಕಾರದಲ್ಲಿ ನಮ್ಮ ಸರ್ಕಾರದವರು ಖರ್ಚು ಮಾಡಿ ಇಡಬೇಕಾದ ಆವಶ್ಯಕತೆ ಏನು ಇತ್ತು ! ಪ್ರಪಂಚದ ಇತರ ದೇಶಗಳವರು ಅಂದರೆ ಅಮೆರಿಕಾ ರಷ್ಯಾ ದೇಶದವರು ನಮ್ಮ ಸರ್ಕಾರದವರ ಸ್ಥಿತಿ ನೋಡಿಕೊಂಡು ದುಡ್ಡು ಕೊಡುತ್ತಾರೆಯೇ? ಅವರಿಂದ ನಾವು ಹಣ ಪಡೆಯಬೇಕಾಗಿದೆಯೇ? ಇಂಥಾ ಖರ್ಚು ನಮ್ಮ ದೇಶದಲ್ಲ ಮಾಡಿದರೆ ಸಂತೋಷಪಡುತ್ತೇನೆ. ಕೇಂದ್ರ ಸರ್ಕಾರದವರು ಈ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಗಿತ್ತು. ನಾವು ವಹಿಸಿಕೊಳ್ಳುವ ಆವಶ್ಯಕತೆ ಇರಲಿಲ್ಲ ಎಂದು ನಾನು ಸ್ವಲ್ಪ ಸಂಶಯವನ್ನು ವ್ಯಕ್ತಪಡಿಸುತ್ತೇನೆ. ಹಿಂದುಳಿದ ಪಂಗಡದವರಿಗೆ ಒಂದು ಲಕ್ಷ 25 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಪುನಃ ಹೆಚ್ಚುವರಿ ದುಡ್ಡನ್ನು ಕೇಳುತ್ತಿದ್ದಾರೆ. ಸಂಬಂಧಪಟ್ಟ ಸಚಿವರು ಇಷ್ಟೊಂದು ಹಣವನ್ನು ಪಡೆದುಕೊಳ್ಳುವುದನ್ನು ನೋಡಿದರೆ ಅವರು ಆಡಳಿತ ಚೆನ್ನಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ ಎಂದು ವ್ಯಕ್ತವಾಗುತ್ತದೆ. ನನ್ನ ಜಿಲ್ಲೆಯ ವಿಚಾರವನ್ನು ಹೇಳುವುದಾದರೆ ಉಗ್ರಾಣಿ ಹೋಬಳಿಯಲ್ಲಿ ಮನೆ ಕಟ್ಟಿಕೊಳ್ಳಿ; ನೋಡೋಣ ಎಂದು ಸಾವಿರಾರು ಅರ್ಜಿಗಳನ್ನು ತೆಗೆದುಕೊಂಡು ಹಣ ಕೊಡದೆ ಬಹಳ ತೊಂದರೆಯಾಗಿದೆ. ಎಲ್ಲಿ ರೆಕಾರ್ಡ್ ಬಿಲ್ಟ್ ಅಪ್ ಮಾಡಿ ಮನೆ ಕಟ್ಟಲಿಕ್ಕೆ ಸೂಚನೆ ಕೊಟ್ಟಿದ್ದಾರೋ ಅಂಥಾ ಕಡೆ ಹಣ ಕೊಡಬೇಕು. ಅವರಿಗೆ ರೂರಲ್ ಹೌಸಿಂಗ್ ಸ್ಕೀಮಿನಲ್ಲಿ ಹಣ ಕೊಡುತ್ತೇವೆಂದು ಪ್ರಾಮಿಸ್ ಮಾಡಿದ್ದಾರೆ. ಸರ್ಕಾರದವರು ಆದೇಶ ಕೊಟ್ಟಿಲ್ಲ. ಆದರೂ ಸ್ಥಳೀಯ ಅಧಿಕಾರಿಗಳು ಪ್ರಾಮಿಸ್ ಮಾಡಿದ್ದಾರೆ. ಇಂಥಾ ನಿದರ್ಶನಗಳು ಅನೇಕ ಇವೆ. ಅವನ್ನೆಲ್ಲಾ ದೃಷ್ಟಿಯಲ್ಲಿ ಇಟ್ಟುಕೊಂಡು ಸರ್ಕಾರದವರು ಹಣ ಅವರಿಗೆ ಕೊಡಬೇಕು. 6 ಲಕ್ಷ 5 ಲಕ್ಷ ರೂಪಾಯಿಗಳನ್ನು centrally sponsored shemes, welfare of other Backward class in the state ಎನ್ನುವುದಕೆ ಹಣ ಒದಗಿಸಿದ್ದಾರೆ. ಬ್ಯಾಕ್‌ವರ್ಡ್ ಕ್ಲಾಸಿಗೆ ಸೇರಿದ ಹಿಲ್‌ಟ್ರೈಬ್ಸ್ ಷಿಕಾರಿಗಳು, ಷಿಳ್ಳೆಕ್ಯಾತರು, ಸುಡುಗಾಡು ಸಿದ್ಧರು, ಇಂಥಾ ಜನರು ಮಲೆನಾಡಿನಲ್ಲಿ ಬೇಕಾದಷ್ಟು ಜನರು ಇದ್ದಾರೆ. ಅವರಿಗೆಲ್ಲಾ ಮನೆ ಮಾಡಿಕೊಟ್ಟರೆ ಅವರು ಬದುಕುತ್ತಾರೆ. ಅವರ ಕಡೆ ಲಕ್ಷ್ಯ ಕೊಡಬೇಕು. ಕೇಂದ್ರ ಸರ್ಕಾರದವರು ಕೊಡುವ ಹಣದಿಂದ ಅಂಥವರಿಗೆ ಸಹಾಯ ಮಾಡಬೇಕು. ಆ ವರ್ಗದ ಜನರ ಮೇಲೆ ನಿಗಾ ಇಟ್ಟು ಅವರು ಖಾಯಂ ಆಗಿ ನೆಲೆಸುವ ವ್ಯವಸ್ಥೆ ಮಾಡಲು ದುಡ್ಡು ಒದಗಿಸಬೇಕು ಎಂದು ಹೇಳುತ್ತೇನೆ. ಮಿನಿಮಮ್ ವೇಜಸ್ ಕಮಿಟಿಗೋಸ್ಕರ ಒಂದು ಲಕ್ಷ ರೂಪಾಯಿಗಳನ್ನು ಕೇಳಿದ್ದೀರಿ. ಅದರ ರಿಪೋರ್ಟು ಅಷ್ಟು ಹೊತ್ತಿಗೆ ಬರಬಹುದು. ಆದರೂ ಕೂಡ

> "Anticipatory expenditure to end of the year on account of several committees"

ಎಂದು 39352 ರೂಪಾಯಿಗಳನ್ನು ಕೇಳಿದ್ದೀರಿ: ಯಾವ ಯಾವ ಕಮಿಟಿಗಳಿಗೋಸ್ಕರ ಈ ಹಣ ಬೇಕಾಗಿದೆ? ಆ ಕಮಿಟಿಗಳ ಉದ್ದೇಶ ಏನು ಎನ್ನುವ ವಿವರಗಳನ್ನು ಕೊಟ್ಟರೆ ವಿಚಾರ ಏನು ಎಂದು ತಿಳಿದುಕೊಳ್ಳಬಹುದು.

ಆ ಮೇಲೆ—

> "Expenditure on account of Gratuitous Relief to victims of Fire Accidents and other Natural calamities"

ಎನ್ನುವುದಕ್ಕೆ 92 ಸಾವಿರ ರೂಪಾಯಿಗಳನ್ನು ಕೇಳಿದ್ದೀರಿ, ಆಕ್ಸಿಡೆಂಟ್ ಸಂಬಂಧವಾಗಿ ಇನ್ನೂ ಅನೇಕರಿಗೆ ದುಡ್ಡು ಕೊಟ್ಟಿಲ್ಲ. ನಮ್ಮ ಜಿಲ್ಲೆಯಲ್ಲಿ ಅಂತೂ ಆಕಸ್ಮಿಕ ಬೆಂಕಿ ಅನಾಹುತಗಳು ಆಗಿವೆ. ಕೇಳಿದ್ದರಲ್ಲಿ 10-12 ಸಾವಿರ ರೂಪಾಯಿ ದುಡ್ಡು ಕೊಡಬೇಕು. ರೆಕಾರ್ಡ್ ಬಿಲ್ಡ್‌ಅಪ್ ಮಾಡಿದ್ದಾರೆ. ಹಣವಿಲ್ಲ ಎಂದು ಅಲ್ಲಿರತಕ್ಕ ರೆವಿನ್ಯೂ ಆಫೀಸರು ಹೇಳುತ್ತಾರೆ. ಇಲ್ಲಿಂದ ದುಡ್ಡು ಹೋಗಿಲ್ಲ. ಈ ರೀತಿ ಇಂಥಾ ಒಂದು ಸರ್ಕಾರದಲ್ಲಿ ಹಣವೇ ಇಲ್ಲ ಎನ್ನುವ ಸ್ಥಿತಿ ಇದೆ. ಹಣ ಸಿಕ್ಕುತ್ತದೆ ಎಂದು ಊರುಗಳನ್ನು ಸುಟ್ಟಿರುವುದಿಲ್ಲ. ಆದುದರಿಂದ ಸರ್ಕಾರದವರು ನೊಂದವರಿಗೆಲ್ಲಾ ಹಣ ಒದಗಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಇನ್ನು ಈ ಕಮ್ಯುನಿಟಿ ಡೆವಲಪ್‌ಮೆಂಟ್ ಬ್ಲಾಕುಗಳ ವಿಚಾರವಾಗಿ ಈಗಾಗಲೇ ನನ್ನ ಅನೇಕ ಮಿತ್ರರುಗಳು ಮಾತನಾಡಿರುವುದರಿಂದ ನಾನು ಇದರ ಬಗ್ಗೆ ಅಷ್ಟು ಹೆಚ್ಚು ಮಾತನಾಡಲಿಕ್ಕೆ ಹೋಗುವುದಿಲ್ಲ. ಆದರೆ ಈ ದಿವಸ ಈ ಬ್ಲಾಕುಗಳಲ್ಲಿ ಕೆಲಸ ಮಾಡುತ್ತಿರುವ ಗ್ರಾಮ ಸೇವಕಿಯರು ಮತ್ತು ಗ್ರಾಮ ಸೇವಕರು ಅಷ್ಟೇನೂ ತೃಪ್ತಿಕರವಾಗಿ ಕೆಲಸ ಮಾಡುತ್ತಿಲ್ಲ. ಅವರು ಎಸ್.ಎಸ್.ಎಲ್.ಸಿ. ವರೆಗೆ ಓದಿರಬಹುದು. ಆದರೆ ಅಷ್ಟು ಚಿಕ್ಕವಯಸ್ಸಿನಲ್ಲಿರತಕ್ಕವರನ್ನು ಈ ಕೆಲಸಗಳಿಗೆ ನೇಮಿಸಿಕೊಂಡರೆ ಅವರಿಂದ ಅಷ್ಟೇನೂ ಉಪಕಾರವಾಗಲಾರದು. ಆದುದರಿಂದ ಇವರಿಂದಾಗತಕ್ಕ ಕೆಲಸವೇ ಬೇರೆ ಇರುತ್ತದೆ. ಆದರೆ ಈ ಕೆಲಸಗಳಿಗೆ ತಕ್ಕಮಟ್ಟಿಗೆ ಹಳ್ಳಿ ಜೀವನದ ಅನುಭವವಿರತಕ್ಕಂಥವರನ್ನು ನೇಮಕ ಮಾಡಿಕೊಂಡರೆ ಒಳ್ಳೆಯದಾಗುತ್ತದೆಂದು ತಿಳಿಸಲಚ್ಛಿಸುತ್ತೇನೆ.ಆದರೆ ಈ ಯೋಜನೆಯನ್ನು ಜಾರಿಗೆ ತಂದ ಮೇಲೆ ಅನೇಕ ಕಡೆ ಅನೇಕ ಕಟ್ಟಡಗಳೂ, ರಸ್ತೆಗಳೂ, ಕೆರೆಗಳೂ ಇತ್ಯಾದಿ ಕಾರ್ಯಗಳೆಲ್ಲ ನಡೆದಿರುತ್ತದೆ. ಇದರ ಬಗ್ಗೆ ಹಣ ಕೇಳಿರತಕ್ಕದ್ದು ನಮಗೆಲ್ಲ

(ಶ್ರೀ ಡಿ.ಟಿ. ಸೀತಾರಾಮ ರಾವ್)

ರಿಗೂ ತೃಪ್ತಿಕರವಾಗಿದೆ. ಈ ಇಲಾಖೆಯ ಕೆಲಸ ಕಾರ್ಯಗಳು ಒಟ್ಟಿನಲ್ಲಿ ತೃಪ್ತಿಕರವಾಗಿ ನಡೆಯುತ್ತಿವೆ. ಇದರಿಂದ ಈ ದಿವಸ ದೇಶದ ಜನರಲ್ಲಿ ಒಂದು ಹೊಸ ಹುರುಪು ಕಾಣುತ್ತದೆ. ಜನರಲ್ಲಿ ಹೊಸ ಹೊಸ ವಿಚಾರಗಳೂ, ಹೊಸ ಹೊಸ ಭಾವನೆಗಳೂ ಮಾಡುತ್ತಿವೆ. ಆದುದರಿಂದ ಈ ಬಾಬಿಗೆ ಹಣವನ್ನು ಖರ್ಚು ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ. ಆದರೆ ಈ ಇಲಾಖೆಗೆ ಕೆಲಸಕ್ಕಾಗಿ ನೇಮಿಸಿಕೊಳ್ಳತಕ್ಕ ಗ್ರಾಮ ಸೇವಕಿಯರು ಮತ್ತು ಗ್ರಾಮ ಸೇವಕರುಗಳನ್ನು ಅವರು ಕೇವಲ ಒಂದು S.S.L.C. ಓದಿದ್ದರೇನೇ ಸಾಲದು, ಇಂಥವರ ನೇಮಕದಿಂದ ದೇಶದಲ್ಲಿರತಕ್ಕ ನಿರುದ್ಯೋಗ ಸಮಸ್ಯೆ ಕೊಂಚ ಮಟ್ಟಿಗೆ ಕಡಮೆಯಾಗಬಹುದೇ ಹೊರತು ಇವರಿಂದ ದೇಶಕ್ಕೆ ಅಷ್ಟೇನೂ ಉಪಕಾರವಾಗದು. ಆದುದರಿಂದ ಸ್ವಲ್ಪ ನುರಿತ ಮತ್ತು ಹಳ್ಳಿ ಜೀವನದ ಅನುಭವ ಪಡೆದಿರತಕ್ಕ ಜನರನ್ನು ಈ ಕೆಲಸಗಳಿಗೆ ನೇಮಕಮಾಡಿಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ನಮ್ಮ ಕೈಗಾರಿಕಾ ಮಂತ್ರಿಗಳು ಕೈಗಾರಿಕೆಗಳ ಬಗ್ಗೆ ಸಹಾಯ ನೀಡತಕ್ಕ ವಿಚಾರದಲ್ಲಿ ಈಗಾಗಲೇ ಅನೇಕ ಪತ್ರಿಕೆಗಳಲ್ಲಿ ಸರ್ಕಾರದ ನೀತಿಯನ್ನು ತಿಳಿಸಿದ್ದಾರೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಪ್ರೈವೇಟ್-ಸೆಕ್ಟಾರುಗಳಲ್ಲಿರತಕ್ಕ ಕೈಗಾರಿಕೆಗಳಿಗೆ ಉತ್ತೇಜನ ಕೊಡಬೇಕೆಂಬುದು ನಮ್ಮ ಸರ್ಕಾರದ ಧೋರಣೆಯಾಗಿದೆ, ಖಾಸಗೀ ಕಾರ್ಖಾನೆಗಳಿಗೂ ಸರ್ಕಾರ ಸಹಾಯ ನೀಡಬೇಕೆಂಬ ಉದ್ದೇಶ ಸರ್ಕಾರದವರಿಗಿದೆಯೆಂಬುದಾಗಿ ಆ ಸ್ಟೇಟ್‌ಮೆಂಟುಗಳಲ್ಲಿ ಮಾನ್ಯ ಮಂತ್ರಿಗಳು ತಿಳಿಸಿರುವುದನ್ನು ನೋಡಿ ನಮಗೆಲ್ಲ ಬಹಳ ಸಂತೋಷವಾಯಿತು. ಖಾಸಗೀ ಉದ್ಯಮಗಳಲ್ಲೂ ಅವುಗಳಿಗೆ ಸಹಾಯ ಮಾಡುವುದೇ ಅಲ್ಲದೆ ಆ ಉದ್ಯಮಗಳಲ್ಲೂ ಸರ್ಕಾರ ಕೆಲವು ಷೇರುಗಳನ್ನು ಕೊಂಡುಕೊಳ್ಳಲು ಈಗ ಸರ್ಕಾರಕ್ಕೆ ಹಣ ಬೇಕಾಗಿರುತ್ತದೆಂದು ಈ ಬೇಡಿಕೆಗಳಲ್ಲಿ ನಮೂದಿಸಿದ್ದಾರೆ. State Finance Corporation, ಮಂಡ್ಯ ಪೇಪರ್ ಮಿಲ್ಸ್, ಲಿಮಿಟೆಡ್, ತುಂಗಭದ್ರ ಪ್ರಾಜೆಕ್ಟ್ ವರ್ಕ್‌ಷಾಪ್ ಇತ್ಯಾದಿ ಉದ್ಯಮಗಳಲ್ಲಿ ಸರ್ಕಾರದವರು ಷೇರುಗಳನ್ನು ಕೊಂಡುಕೊಳ್ಳಬೇಕೆಂದು ಹೇಳಿರುವುದು ತುಂಬಾ ಸ್ವಾಗತಾರ್ಹವಾದದ್ದು. ಹಿಂದಿನಿಂದಲೂ ಸರ್ಕಾರದವರು Industriesಗೆ ಕೊಡುತ್ತಿದ್ದ ಉತ್ತೇಜನ ಮತ್ತು ಸಹಾಯಕ್ಕಿಂತಲೂ ಈ ದಿವಸ ಇನ್ನೂ ಹೆಚ್ಚಿನ ಸಹಾಯ ನೀಡುತ್ತೇವೆಂದು ಹೇಳಿರುವುದು ನಮ್ಮೆಲ್ಲರಿಗೂ ಬಹಳ ಸಂತೋಷದ ವಿಷಯವಾಗಿದೆ.

ಕೊನೆಯದಾಗಿ ಈ ಮಿರ್ಷ ಆಸ್ಪತ್ರೆಯ ಪ್ರಾಪರ್ಟಿ ಬಗ್ಗೆ 8 ಲಕ್ಷ 53 ಸಾವಿರ ಚಿಲ್ಲರೆ ರೂಪಾಯಿಗಳನ್ನು ಕೇಳಿದ್ದಾರೆ. ಈ ಜಾಗ ಎಲ್ಲಿದೆ, ಯಾವಾಗ ಅಕ್ವೈರ್ ಮಾಡಿಕೊಂಡರು, ಎಕರೆಯೊಂದಕ್ಕೆ ಏನು ಬೆಲೆಯನ್ನು ನಿರ್ಧರಿಸಿದ್ದಾರೆ ಎಂಬ ವಿವರಗಳನ್ನೆಲ್ಲ ತಿಳಿಸಿದ್ದರೆ ಚೆನ್ನಾಗಿತ್ತು. ಅಂತೂ ಒಟ್ಟಿನಲ್ಲಿ ಸರ್ಕಾರದವರು ಈಗ ಸಭೆಯ ಮುಂದೆ ಮಂಡಿಸಿರತಕ್ಕ ಅಡಿಷನಲ್ ಮತ್ತು ಸಪ್ಲಿಮೆಂಟರಿ ಗ್ರಾಂಟ್‌ಗಳ ಬೇಡಿಕೆಯನ್ನು ನಾನು ಅನುಮೋದಿಸುತ್ತಾ ನನಗೆ ಇಷ್ಟು ವಿಷಯಗಳನ್ನು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಂ. ಸಿ. ನರಸಿಂಹನ್ (ಕೋಲಾರ ಚಿನ್ನದ ಗಣಿ).—ಅಧ್ಯಕ್ಷರೇ, ಮಾನ್ಯ ಶ್ರೀ ಜಿ. ವೆಂಕಟೇಗೌಡರು ಈಗ ಸಭೆಯ ಮುಂದೆ ಬಂದಿರತಕ್ಕ ಸಪ್ಲಿಮೆಂಟರಿ ಎಸ್ಟಿಮೇಟುಗಳ ಬಗ್ಗೆ ಒಂದು ರೂಢಮೂಲವಾದ ಆಕ್ಷೇಪಣೆಯನ್ನೆತ್ತಿದ್ದಾರೆ. ಆದರೆ ಆ ಆಕ್ಷೇಪಣೆ ಅವರೆತ್ತಿರುವುದೂ ಸಹ ನ್ಯಾಯವಾಗಿಯೇ ಇದೆ. ಯಾವುದಾದರೊಂದು ಯೋಜನೆಯನ್ನು ಸರ್ಕಾರ ಕೈಗೊಳ್ಳಬೇಕೆಂದು ತೀರ್ಮಾನಮಾಡಿಕೊಂಡರೆ ಅದಕ್ಕೆ ಬೇಕಾಗತಕ್ಕ ಆರ್ಥಿಕದ ಆವಶ್ಯಕತೆ ಎಷ್ಟೆಂಬುದನ್ನು ನಿರ್ಧರಿಸಿ ಅದನ್ನು ಆ ವರ್ಷದ ಬಡ್ಜೆಟ್ಟಿನಲ್ಲೇ ಸೇರಿಸಿ ತರತಕ್ಕದ್ದು ಸರಿಯಾದುದೇ ಹೊರತು ಹಾಗೆ ಮಾಡದೆ ಬಡ್ಜೆಟ್ ಅಧಿವೇಶನ ಮುಗಿದಾದ ಕೆಲವು ತಿಂಗಳನಂತರ ಹೀಗೆ ಆರ್ಥಿಕದ ಅಗತ್ಯವಿದೆಯೆಂಬ ನೆಪದಲ್ಲಿ ಸಪ್ಲಿಮೆಂಟರಿ ಎಸ್ಟಿಮೇಟುಗಳನ್ನು ತರತಕ್ಕದ್ದು ನಮ್ಮ ಆಡಳಿತಕ್ಕೆ ಹೊಂದಾವಣೆಯಾದ್ದಲ್ಲವೆಂದೇ ಹೇಳಬೇಕಾಗುತ್ತದೆ. ಆದರೆ ನಾವು ಹೀಗೆ ಹೇಳುವುದಕ್ಕೆ ಪ್ರಾರಂಭ ಮಾಡಿದಾಗ ಮಾನ್ಯ ಆರ್ಥಿಕ ಸಚಿವರಾದ ಶ್ರೀ ಮರಿಯಪ್ಪನವರು, ನಮ್ಮದು ಪ್ರಜಾ ಸರ್ಕಾರ, ನಾವು ಪ್ರಜೆಗಳ ಅಭಿಪ್ರಾಯಕ್ಕೆ, ಜನಾಭಿಪ್ರಾಯಕ್ಕೆ ತಲೆಬಾಗಲೇಬೇಕಾಗುತ್ತದೆ; ಆ ಕಾರಣದಿಂದ ನಮ್ಮ ಬಡ್ಜೆಟ್ಟನ್ನು ಹೀಗೆ ಮಧ್ಯಕಾಲದಲ್ಲಿ ಬದಲಾವಣೆ ಮಾಡಬೇಕಾಗಿ ಬಂದೇ ಬರುತ್ತದೆಂದು ಅವರು ಹೇಳಬಹುದು. ಹಾಗೆ ಅವರು ಹೇಳತಕ್ಕದ್ದನ್ನು ಪರೀಕ್ಷೆ ಮಾಡಿ ನೋಡಿದರೆ ಅದೂ ಕೂಡ ಸರಿಯೆಂದೇ ಹೇಳಬೇಕಾಗುತ್ತದೆ. ಆದರೆ ಅವರು ಆ ರೀತಿ ಹೇಳತಕ್ಕದ್ದು ಸರಿಯಾದುದೇ, ನ್ಯಾಯವಾದುದೇ ಎಂಬುದನ್ನು ಪರೀಕ್ಷೆ ಮಾಡಿದರೆ ಸರ್ಕಾರದವರಿಗೆ ಈ ರೀತಿಯಾಗಿ ಒಂದು ಸಪ್ಲಿಮೆಂಟರಿ ಎಸ್ಟಿಮೇಟನ್ನು ಮಧ್ಯಕಾಲದಲ್ಲಿ ತರಲು ಅವಕಾಶವಿದೆಯೇ ಎಂಬುದನ್ನು ಪರೀಕ್ಷಿಸಿ ನೋಡಿದರೆ ಇದು ತುಂಬಾ ಸಂಶಯಾತ್ಮಕ ವಿಷಯವಾಗಿದೆ. ಹಾಗೆ ಜನಾಭಿಪ್ರಾಯಕ್ಕೆ ತಲೆಬಾಗಬೇಕಾಗಿದ್ದರೆ ಆ ಬೈಲು ಹೊಂಗಲನಲ್ಲೇನೂ ಅಂಥ ಜ್ವಾಲೆ ಹತ್ತಿರಲಿಲ್ಲ. ಹಾಗೆ ಸರ್ಕಾರದವರಿಗೆ ಆ ಒಂದು ಬೈಲು ಹೊಂಗಲ ಪ್ರದೇಶದ ಜನಾಭಿಪ್ರಾಯಕ್ಕೆ ಮಾತ್ರ ತಲೆಬಾಗಬೇಕಾಗಿ ಬಂದಂತೆ ಉಳಿದ 2 ಲಕ್ಷ ಜನರಿರತಕ್ಕ ಮತ್ತೆ ಯಾವ ಪ್ರದೇಶದ ಜನರಿಂದಲೂ ಅವರಿಗೆ ತಲೆಬಾಗಬೇಕಾದಂಥಾ ಅಭಿಪ್ರಾಯಗಳು ಬರಲಿಲ್ಲವೇನು ! ತಮಗೆ ಒಂದು ರಸ್ತೆಯಾಗಬೇಕು, ಒಂದು ಕೆರೆಯಾಗಬೇಕೆಂದು ಜನರು ಸರ್ಕಾರದವರನ್ನು ಬೇರೆ ಪ್ರದೇಶಗಳಿಂದ ಒತ್ತಾಯ ಮಾಡಲೇ ಇಲ್ಲವೇನು ! ಶ್ರೀಮಾನ್ ಟಿ. ಮರಿಯಪ್ಪನವರ ಕ್ಷೇತ್ರದಲ್ಲೇ ಒಂದು ಕಮ್ಯೂನಿಟಿ ಡೆವಲಪ್‌ಮೆಂಟ್ ಬ್ಲಾಕ್ ಇಲ್ಲ. ಸರ್ಕಾರದವರನ್ನು ಒತ್ತಾಯ ಮಾಡುತ್ತಲೇ ಇದ್ದಾಗ್ಯೂ ಅಲ್ಲಿನ ಜನಾಭಿಪ್ರಾಯಕ್ಕೇಕೆ ಸರ್ಕಾರ ಮನ್ನಣೆ ಕೊಡಲಿಲ್ಲ ! ಇದೇ ಶಾಸನ ಸಭೆಯ ಇದೇ ಅಧಿವೇಶನದಲ್ಲಿ ನಾವೆಲ್ಲರೂ ನೋಡುತ್ತಿರುವಂತೆ ದೇಶದ ನಾನಾ ಮೂಲೆಗಳಲ್ಲಿರತಕ್ಕ ಜನರಿಂದ ಹತ್ತಾರು ಬಗೆಯ ಒತ್ತಾಯಗಳ ಬಗ್ಗೆ ಪ್ರಶ್ನೆಗಳೂ, ನಿರ್ಣಯಗಳೂ ಬರುತ್ತಲೇ ಇವೆ. ಅನೇಕರು ಕೆರೆಗಳನ್ನು ಕೇಳುತ್ತಿದ್ದಾರೆ, ಕೆಲವುಕಡೆ ರಸ್ತೆಗಳಾಗಬೇಕೆಂದೂ, ಕೆಲವು ಕಡೆ ಸೇತುವೆಗಳಾಗಬೇಕೆಂದೂ ಒತ್ತಾಯಪಡಿಸುತ್ತಲೇ ಇದ್ದಾರೆ. ಈ ರೀತಿಯ ಒತ್ತಾಯಗಳು ಅನೇಕ ವರ್ಷಗಳಿಂದ ಒಂದೇ ಸಮನಾಗಿ ಬರುತ್ತಿವೆ. ಅವುಗಳಿಗೆಲ್ಲ ಸರ್ಕಾರದವರು ಹಣವನ್ನೊದಗಿಸಿ ಕೊಟ್ಟಿದ್ದಾರೇನು ? ಹಾಗೆ ಯಾವ ಒಂದು ಪ್ರದೇಶಕ್ಕೂ ಕೊಡದೇ ಇರುವಂಥ ಒಂದು ಮನ್ನಣೆಯನ್ನು ಈ

ಬೈಲುಹೊಂಗಲ ಕ್ಷೇತ್ರಕ್ಕೆ ಏಕೆ ಕೊಟ್ಟರು ? ಈ ಒಂದು ಕ್ಷೇತ್ರ ಮಾತ್ರ ಸರ್ಕಾರದವರ ತಲೆಯ ಮೇಲೆ ಕುಳಿತಿತ್ತು; ಬಾಕಿ ಕ್ಷೇತ್ರಗಳು ಕುಳಿತಿರಲಿಲ್ಲವೇ ? ಬಹುಶಃ ಅದು ಡೆಪ್ಯುಟಿ ಮಿನಿಸ್ಟರ ಕ್ಷೇತ್ರವೆಂದು ಭಾವಿಸಿ ಅಲ್ಲಿಗೆ ಈ ರೀತಿಯ ಸೌಲಭ್ಯ ಒದಗಿಸಿರ ತಕ್ಕದ್ದು ಒಂದು ದೊಡ್ಡ ಆಕ್ಷೇಪಣೆಗೆ ಗುರಿಯಾಗತಕ್ಕದ್ದಾಗಿದೆ.

Sri H. C. LINGA REDDY.—No block was given to the taluk.

ಶ್ರೀ ಎಂ. ಸಿ. ನರಸಿಂಹನ್.—ಆದರೆ ನಾನೀಗ ಯಾವ ಒಂದು ಕ್ಷೇತ್ರಕ್ಕೂ ಹೀಗೆ ಕೆರೆಗಳನ್ನಾಗಲೀ—ರಸ್ತೆಗಳನ್ನಾಗಲೀ ಕೊಡಬಾರದೆಂದು ಹೇಳುತ್ತಿಲ್ಲ. ಕೆಲವು ಕಡೆಗಳಿಗೆ ಎಂದರೆ, ನಿಮಗೆ ಬೇಕಾದ ಕಡೆಗೆ ಕೊಡುವುದು, ಬೇಡವಾದ ಕಡೆಗೆ ವರ್ಷ ಅಖೈರಾಗುವ ತನಕ ಬಡ್ಜೆಟ್ಟನ್ನು ಬದಲಾಯಿಸುವುದಕ್ಕಾಗುವುದಿಲ್ಲ ಎಂದು ಹೇಳುವುದು ನ್ಯಾಯವಾದುದಲ್ಲ. ಜನಾಧಿಪ್ರಾಯಕ್ಕೆ ಸರ್ಕಾರ ತಲೆಬಾಗಲೇ ಬೇಕು. ಹಾಗೆ ಬಾಗಬೇಕೆಂಬ ಉದ್ದೇಶವಿದ್ದರೆ ಎಲ್ಲಾ ಕಡೆಗೂ ಒಂದೇ ಸಮನಾಗಿ ನಡೆಯಬೇಕು. ಅದನ್ನು ಬಿಟ್ಟು ಒಂದು ಕಡೆಗೆ ಬಾಗಿ ಮತ್ತೊಂದು ಕಡೆಗೆ ಏಕೆ ಬಾಗುತ್ತಿಲ್ಲ ? ಕಾರಣವೇನು ? ಒಂದು ಕಡೆಗೆ ಒಂದು ಕಾನೂನು, ಇನ್ನೊಂದು ಕಡೆಗೆ ಇನ್ನೊಂದು ಕಾನೂನು ಇದೆಯೇನು ? ಕೆಲವು ಸಂದರ್ಭಗಳಲ್ಲಿ ಕೆಲವು ಐಟಂಗಳನ್ನು ಬಡ್ಜೆಟ್ಟಿನಲ್ಲಿ ಸೇರಿಸುವಾಗ ಅವುಗಳ ಪೂರ್ಣ ನಿರೀಕ್ಷೆ ಆಗ ಗೊತ್ತಿರುವುದಿಲ್ಲ; ಅದರಿಂದ ಅದರ ಪೂರ್ಣ ಖರ್ಚುವೆಚ್ಚಗಳನ್ನು ಒಂದೇ ಸಾರಿಗೆ ನಿರ್ಧರಿಸುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಇನ್ನು ಕೆಲವು ಸಂದರ್ಭಗಳಲ್ಲಿ ಹೀಗೆ ಮಾಡುತ್ತಾರೆ.

ಈ ದಿವಸ ದೇಶದಲ್ಲಿ ಈಗಾಗಲೇ ಜಹಗೀರು ಅಬಾಲಿಷನ್ ಕಾನೂನು ಜಾರಿಗೆ ಬಂದಿದೆ. ಇದೇನೂ ಹೊಸದಾಗಿ ಈಗತಾನೆ ಜಾರಿಗೆ ಬಂದಿರತಕ್ಕ ಶಾಸನವಲ್ಲ. ಬಡ್ಜೆಟ್ ತಯಾರಿಸುವಾಗ ಇದರ ನಿರೀಕ್ಷಣೆ ಇರಲಿಲ್ಲವೆಂದು ಹೇಳಲು ಅವಕಾಶವೆಲ್ಲಿದೆ ? 1955 ರಲ್ಲೇ ಇದು ಶಾಸನವಾಗಿ 1956ನೆಯ ಇಸವಿ ಕಳೆದು 1957, 1958, 1959ರ ಬಡ್ಜೆಟ್ಟನ್ನು ತಯಾರಿಸತಕ್ಕ ಕಾಲದಲ್ಲಿ ಈ ನಿರೀಕ್ಷಣೆ ಸರ್ಕಾರದವರಿಗೆ ಹೊಳೆಯಲೇ ಇಲ್ಲವೇನು ? ಈ ಗ್ರಾಮ ಪಂಚಾಯತಿ—ತಾಲ್ಲೂಕ್ ಬೋರ್ಡ್‌ಗಳ ಆಕ್ಟಿನ ಬಗ್ಗೆಯೂ ಹಾಗೇ ಮಾಡಿದ್ದಾರೆ. ಈ ಆಕ್ಟ್ ಪಾಸಾಗುವ ಮುಂಚೆ ಇದರ ವಿಚಾರಗಳೆಲ್ಲ ಅವರಿಗೆ ಗೊತ್ತಿರಲಿಲ್ಲವೇನು ? ಆ ಮಿನಿಮಂ ವೇಜಸ್ ಆಕ್ಟಿನ ವಿಚಾರವನ್ನು ತೆಗೆದುಕೊಂಡರೂ ಹೀಗೇ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದ ಆಜ್ಞೆಯಂತೆ ಈ ಮಿನಿಮಂ ವೇಜಸ್ ಆಕ್ಟನ್ನು 5 ವರ್ಷಗಳಿಗೊಮ್ಮೆ ಬದಲಾವಣೆ ಮಾಡಬೇಕೆಂದು ಆ ಶಾಸನದಲ್ಲೇ ಅಡಕ ಮಾಡಲಾಗಿದೆ. ಇದೇ ಅಧಿವೇಶನದಲ್ಲಿ ಈ ವಿಚಾರವಾಗಿ ಒಂದು ಪ್ರಶ್ನೆ ಬಂದಿದ್ದಾಗ ಅದಕ್ಕೆ ಉತ್ತರವಾಗಿ ಆ ಶಾಸನವನ್ನು ಬದಲಾವಣೆಮಾಡುತ್ತೇವೆಂದು ತಿಳಿಸಿದ್ದಾರೆ. ಹೀಗೆ ಸರ್ಕಾರದವರು ಬಡ್ಜೆಟ್ಟನ್ನು ತಯಾರಿಸುವಾಗ ಈ ಖರ್ಚುವೆಚ್ಚಗಳೆಲ್ಲ ಅವರ ನಿರೀಕ್ಷಣೆಗೆ ಬರಲಿಲ್ಲವೆಂದು ಹೇಳುವುದಾದರೆ ಇನ್ನು ಈ ಸರ್ಕಾರಕ್ಕೆ ಏನು ಕೆಲಸ ಕಾರ್ಯಗಳನ್ನು ಜಾರಿಗೆ ತರಲು ಸಾಧ್ಯವಿದೆ ?

ಇನ್ನು ಬಹಳ ಮುಖ್ಯವಾದ ಟೆಕ್ನಿಕಲ್ ಅಬ್‌ಜಕ್ಷನ್ ಇದಕ್ಕೆ ಇದೆ, ಅದನ್ನು ಸ್ವಲ್ಪ ಸೂಕ್ಷ್ಮವಾಗಿ ಗಮನಿಸಬೇಕು. ಸಪ್ಲಿಮೆಂಟರಿ ಎಸ್ಟಿಮೇಟ್ಸನ್ನು ಈ ಸಾರಿ ತಂದಿರುವುದನ್ನು ನೋಡಿ ಎಲ್ಲರೂ ನ್ಯೂ ಸರ್ವಿಸ್ ಎಂದು ಪರಿಗಣಿಸಿದ್ದಾರೆ. ಈ ಹೊಸ ಸರ್ವಿಸ್ ಎಂಬುದನ್ನು ಕಾನ್‌ಸ್ಟಿಟ್ಯೂಷನ್ನಿನ ಆರ್ಟಿಕಲ್ 205 ರಲ್ಲಿ ಡಿಫೈನ್ ಮಾಡಲಿಲ್ಲ. ಆದರೆ 1955-56 ನೆಯ ಸಾಲಿನ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ವರದಿಯಲ್ಲಿ ನ್ಯೂ ಸರ್ವಿಸ್ ಎಂದರೇನು ಎಂಬ ವಿವರಣೆಯನ್ನು ಕೊಟ್ಟಿದ್ದಾರೆ. ಕಾನ್‌ಸ್ಟಿಟ್ಯೂಷನ್ನಿನಲ್ಲಿ ಅದರ ವಿವರಣೆ ಕೊಡದೇ ಇರುವುದರಿಂದ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಕೊಟ್ಟಿರುವ ವಿವರಣೆಯನ್ನು ಶಾಸನವನ್ನಾಗಿ ಪರಿಗಣಿಸಬೇಕು. ಈ ದೃಷ್ಟಿಯಲ್ಲಿ ನೋಡುವುದಾದರೆ ಈಗಿನ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಪ್ರಕಾರ ಡಿಮ್ಯಾಂಡ್ ಮಾಡುವುದನ್ನು ನ್ಯೂ ಸರ್ವಿಸ್ ಎಂದು ಪರಿಗಣಿಸುವುದಕ್ಕಾಗುತ್ತದೆಯೇ ಎಂದರೆ ಇದರೊಳಗೆ ಇರತಕ್ಕ ಐಟಂಗಳನ್ನು ನ್ಯೂ ಸರ್ವಿಸ್ ಎಂದು ಪರಿಗಣಿಸುವುದಕ್ಕಾಗುವುದಿಲ್ಲ.

ಇನ್ನು 5ನೆಯ ಪುಟದಲ್ಲಿ ಡಿಮ್ಯಾಂಡ್ ನಂಬರ್ 13ರಲ್ಲಿ ಒಂದು ವಿಷಯವನ್ನು ಹೇಳಿದ್ದಾರೆ. ಆಂಟಿ ಕರಪ್‌ಷನ್ ಶಾಖೆಯಲ್ಲಿ ಒಂದು ಟೆಕ್ನಿಕಲ್ ಆಡಿಟ್ ಸೆಲ್ ಆಫೀಸರನ್ನು ನೇಮಕಮಾಡಿದ್ದುದರಿಂದ 30 ಸಾವಿರ ರೂಪಾಯಿಗಳನ್ನು ಹೆಚ್ಚಿಗೆ ಖರ್ಚು ಮಾಡಬೇಕೆಂದು ಕೇಳಿದ್ದಾರೆ. ಅದನ್ನು ಸ್ಟ್ಯಾಫಿಗೋಸ್ಕರವೆಂದು ಹೇಳಿದ್ದಾರೆ. ಇದು ಖಂಡಿತವಾಗಿ ನ್ಯೂ ಸರ್ವಿಸ್ ಅಲ್ಲ. ಆಂಟಿಕರಪ್‌ಷನ್ ಇಲಾಖೆ ಹೊಸ ಇಲಾಖೆಯಲ್ಲ. ಹಳೆ ಇಲಾಖೆ. ತಲೆತಲಾಂತರದಿಂದ ಬಂದಿರತಕ್ಕದ್ದು. ಆಂಟಿಕರಪ್‌ಷನ್ ಇಲಾಖೆ ಇರುವುದರಿಂದಲೇ ಕೆಲಸ ಚೆನ್ನಾಗಿ ಆಗುತ್ತದೆಂದು ಭಾವಿಸಬಾರದು.

ಶ್ರೀ ಟಿ. ಮರಿಯಪ್ಪ.—ಡೆಫಿನಿಷನ್ ನೀವು ಹೇಳುವುದನ್ನು ಹೊಂದಿಸಿ ಹೇಳಿದರೆ ಚೆನ್ನಾಗಿರುತ್ತದೆ.

Sri M. C. NARASIMHAN.—On page 68 Annexure VI-New Service-of the Report of the public Accounts Committee for 1954-1957 under the head (1) Extra expenditure on staff in particular establishment—ಇದರಲ್ಲಿ ಹೀಗೆ ಹೇಳಿದೆ. "If, owing to increase in work, the number of Typists in all Government offices is increased, or if an extra clerk is given for each Taluk office—it cannot be treated as "New Services." ಆದುದರಿಂದ ಇವೊತ್ತಿನ ದಿವಸ ಅದು ಹಳೆಯ ಇಲಾಖೆ. ಹೊಸ ಇಲಾಖೆ, ಹೊಸ ಯೋಜನೆ, ಹೊಸ ಸ್ಕೀಮು, ಆಗಿದ್ದರೆ—ಇವೊತ್ತು ಅಂಥಾದ್ದನ್ನು ನ್ಯೂ ಸರ್ವಿಸ್ ಎಂದು ಪರಿಗಣಿಸಬೇಕು. ಎಲ್ಲಿ ಹೆಚ್ಚು ದಕ್ಷತೆಯಿಂದ ಕೆಲಸ ಮಾಡಬೇಕೆಂದು ಯೋಜನೆ ಹಾಕಿದ್ದರೆ, ಅದು ನ್ಯೂ ಸರ್ವಿಸ್ ಆಗುವುದಿಲ್ಲ. ಕೇವಲ 30 ಸಾವಿರ ರೂಪಾಯಿಗಳಿಗಿಂತ ಹೆಚ್ಚಿಗೆ ಪಬ್ಲಿಕ್ ಅಕೌಂಟ್ಸ್ ಕಮಿಟಿ ಶಿಫಾರ್ಸು ಪ್ರಕಾರ ಏನಾದರೂ ಒಂದು ಇಂಪ್ರೂವ್ ಮಾಡಬೇಕೆಂದು ಯೋಚನೆ ಮಾಡಿದ್ದರೆ, ಅದರ ಖರ್ಚು ಎಲ್ಲಾ 2 ಲಕ್ಷ ಅಥವಾ 1 ಲಕ್ಷ ಅಥವಾ 50 ಸಾವಿರ ರೂಪಾಯಿಗಳಾಗಿರಬೇಕು. ಅವರು 50 ಸಾವಿರ ರೂಪಾಯಿಗಳಿಗಿಂತ ಹೆಚ್ಚಾಗಿದ್ದಂಥ ಕೆಲಸಗಳನ್ನು, ನ್ಯೂ ಸರ್ವಿಸ್ ಎಂದು ಹೇಳಿದ್ದಾರೆ. ಆದುದರಿಂದ ಈ ಡೆಫಿನಿಷನ್‌ಗೆ ನಾವು ಒಪ್ಪುವುದಿಲ್ಲ. ಅದರಲ್ಲಿ ಈ ಡಿಮ್ಯಾಂಡ್ ಸೆಪರೇಟ್ ಸಬ್-ಡಿವಿಜನ್, ಡ್ರೈನೇಜ್ ವರ್ಕ್ಸ್, ರೊಟೀನ್ ವರ್ಕ್ಸ್ ಎಂದು ಬೇರೆ ಹೇಳಿದ್ದೀರಿ. ಇದು ಸ್ಟ್ಯಾಫ್‌ಗೋಸ್ಕರ ಹೆಚ್ಚಾಗಿದೆ ಎಂದು ಹೇಳಿದರೆ ಅದನ್ನು ನ್ಯೂ ಸರ್ವಿಸ್ ಎಂದು ಪರಿಗಣಿಸುವುದಕ್ಕಾಗುವುದಿಲ್ಲ. ಇಲಾಖೆಯ ಖರ್ಚು,

(SRI M. C. NARASIMHAN)

ಸ್ಟ್ಯಾಫ್‌ಗೋಸ್ಕರವಲ್ಲ. ರೊಟೀನ್ ಖರ್ಚು ಎಂದು ಹೇಳಿದರೂ it cannot be treated as "New Service". New Works 1ಲಕ್ಷ ಅಥವಾ 2 ಲಕ್ಷಕ್ಕಿಂತ ಹೆಚ್ಚಾಗಿದ್ದರೆ ರೊಟೀನ್ ವರ್ಕ್ಸ್ ಆಗುತ್ತವೆ. ಆದುದರಿಂದ ಇದನ್ನು ನ್ಯೂಸರ್ವಿಸ್ ಎಂದು ಪರಿಗಣಿಸಲಿಕ್ಕಾಗುವುದಿಲ್ಲ. ಆದುದರಿಂದ ಆರ್ಟಿಕಲ್ 205ರ ಪ್ರಕಾರ ಇಲ್ಲಿ ನ್ಯೂ ಸರ್ವಿಸ್ಸನ್ನು ಸರಿಯಾಗಿ ಡಿಫೈನ್ ಮಾಡಿಲ್ಲ. ನೀವು ಈ ರೀತಿ ಡಿಫೈನ್ ಮಾಡುತ್ತೀರಿ. ಆದರೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಮಾಡಿದ ರೂಲ್ಸನ್ನು ಏನು ಮಾಡಬೇಕು ? ಅದನ್ನು ಯೋಚಿಸಿ ಸರಿಪಡಿಸಬೇಕು.

ಇನ್ನು ಡಿಮ್ಯಾಂಡ್ ನಂಬರ್ 28ರಲ್ಲಿ ಎಕ್ಸ್‌ಪ್ಲನೇಟರಿ ನೋಟ್‌ನಲ್ಲಿ ಮಿನಿಮಂ ವೇಜಸ್ ಕಮಿಟಿಯ ರಚನೆಗಾಗಿ ಒಂದು ಲಕ್ಷ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದೇವೆಂದು ಹೇಳಿದ್ದಾರೆ. ಅದು ನ್ಯೂ ಸರ್ವಿಸ್ ಎಂದು ಹೇಳುವುದಕ್ಕಾಗುವುದಿಲ್ಲ. Employment of additional staff in connection with an existing service or for a purely temporary period, need not be treated as a New Service. ಇವೊತ್ತು ಮಿನಿಮಂ ವೇಜಸ್ ಕಮಿಟಿ ಪ್ರೈವಾಷ್ಯಸಿ ; ಟೆಂಪೊರರಿ. ಈ ಕಮಿಟಿಯ ಅವಧಿ ಡಿಸೆಂಬರ್_ಜನವರಿಯೊಳಗೆ ಮುಗಿದುಹೋಗುತ್ತದೆ. ಈ ವರ್ಷದಲ್ಲಿ ಇದು ಟೆಂಪೊರರಿಯಾಗಿರತಕ್ಕದ್ದು. ಈ ರೀತಿ ಟೆಂಪೊರರಿಯಾಗಿರತಕ್ಕದ್ದನ್ನು ನ್ಯೂ ಸರ್ವಿಸ್ ಎಂದು ಟ್ರೀಟ್ ಮಾಡಕೂಡದು. ಅಂಥಾದ್ದನ್ನು ಸರ್ಕಾರದವರು ಹೇಗೆ ನ್ಯೂ ಸರ್ವಿಸ್ ಎಂದು ಟ್ರೀಟ್ ಮಾಡುತ್ತಿದ್ದಾರೋ ನನಗೆ ಗೊತ್ತಾಗುವುದಿಲ್ಲ.

ಇನ್ನು ಡಿಮ್ಯಾಂಡ್ ನಂಬರ್ 38. ಇದರಲ್ಲಿ Expenditure on account of gratuitous Relief to Victims of Fire Accidents and other Natural calamities ಸೇರಿದೆ. ಇದು ಹೋದ ಸಲ ಬಡ್ಜೆಟ್ಟಿನಲ್ಲಿ ಅಡಕವಾಗಿರತಕ್ಕದ್ದು. ಈ ಒಂದು ಐಟಂನಲ್ಲಿ ಮತ್ತೆ ಹೆಚ್ಚಿಗೆ ಖರ್ಚಾಗಬೇಕಾಗಿದೆ. ಇಂಥಾದ್ದನ್ನು ಈಗ ನ್ಯೂಸರ್ವಿಸ್ ಎಂದು ಟ್ರೀಟ್ ಮಾಡಬೇಕಾದರೆ ಎರಡು ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿರಬೇಕು. ಮೊದಲನೆಯ ಪ್ರಾವಿಷನ್‌ಗಿಂತ ನಾಲ್ಕರಷ್ಟು ಹೆಚ್ಚಾಗಿರಬೇಕು. ಇದು ಆ ರೀತಿ ಇಲ್ಲ. ಆದುದರಿಂದ ಇದನ್ನೂ ಸಹ ನ್ಯೂ ಸರ್ವಿಸ್ ಎಂದು ಟ್ರೀಟ್ ಮಾಡುವುದಕ್ಕಾಗುವುದಿಲ್ಲ. ಹೊಸ ಸರ್ವಿಸ್ ವಿಚಾರವಾಗಿ ಇಷ್ಟು ಏಕೆ ವ್ಯಾಖ್ಯಾನ ನಾನು ಮಾಡಿದೆನೆಂದರೆ, ಇಲ್ಲಿರತಕ್ಕ ಸಪ್ಲಿಮೆಂಟರಿ ಎಸ್ಟಿಮೇಟುಗಳನ್ನು ಕಾನೂನು ಬದ್ಧವಾಗಿ ಒಪ್ಪುವುದಕ್ಕಾಗುವುದಿಲ್ಲ. ಆ ರೀತಿ ಎಕ್ಸಪೆಂಡಿಚರ್‌ಗಳು ನಿಲ್ಲುವುದಿಲ್ಲ. ಅದಕ್ಕೋಸ್ಕರ ನಾನು ಅದನ್ನು ಇಷ್ಟು ದೂರ ವ್ಯಾಖ್ಯಾನ ಮಾಡುತ್ತಿದ್ದೇನೆ. ಇದು 205ನೆಯ ಆರ್ಟಿಕಲ್ ಪ್ರಕಾರ ಒಂದು ಸೀಲಿಂಗ್, ಒಂದು ಎಲ್ಲೆಯೊಳಗೇ ಇರಬೇಕು. ಇದನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿಯವರ ವರದಿಯಲ್ಲಿ ಹೇಳಿರುವುದಕ್ಕನುಸಾರವಾಗಿ ಮಾಡಬೇಕು. ಸರ್ಕಾರ ಒಪ್ಪಿರತಕ್ಕ ಚೌಕಟ್ಟಿನೊಳಗೇ ಅದನ್ನು ನಮ್ಮ ಮುಂದೆ ಇಡುವುದು ನ್ಯಾಯವಾಗಿದೆ. ತಾವೇ ಹೇಳಿದ ಪಾಲಿಸಿಗೆ ಈಗ ನೀವೇ ಒಪ್ಪದಿದ್ದರೆ ಸರ್ಕಾರವನ್ನು ನಾವು ಯಾವ ರೀತಿ ನಂಬಬೇಕು ? ಅವರವರ ಮೆರಿಟ್ಸ್ ಮೇಲೆ ಅನೇಕರು ಅನೇಕ ವಿಷಯಗಳನ್ನು ಹೇಳಿದ್ದಾರೆ. ಸರ್ಕಾರದವರು ಈ ವಿಷಯದ ಬಗ್ಗೆ ಕೆಲವು ವಿಚಾರಗಳನ್ನು ಮುಂಚಿತವಾಗಿ ಆಲೋಚನೆ ಮಾಡಬೇಕಾಗಿತ್ತು. ಆ ರೀತಿ ಆಲೋಚನೆ ಮಾಡಿದ್ದರೆ, ಬಡ್ಜೆಟ್ಟಿನಲ್ಲಿ ಒಟ್ಟು ಈಗ ಸಪ್ಲಿಮೆಂಟರಿ ಡಿಮ್ಯಾಂಡ್ ಮೊಬಲಗು ಅಂದರೆ ಸುಮಾರು ಒಂದು ಕೋಟಿ 32 ಲಕ್ಷ ಚಿಲ್ಲರೆ ರೂಪಾಯಿಗಳ ಡಿಫಿಸಿಟ್ ಬರುತ್ತಿತ್ತು ಎಂದು ಹೇಳುತ್ತಿದ್ದರು.

ಇನ್ನು 51ನೆಯ ಡಿಮಾಂಡ್ ಪ್ರಕಾರ ರಸ್ತೆ ಹಾಕುವುದು, ಕೆರೆ ಕಟ್ಟುವುದು-ಇವೆಲ್ಲಾ ನಾರ್ಮಲ್ ವರ್ಕ್ಸ್, ರೊಟೀನ್‌ವರ್ಕ್ಸ್-ಇಂಥಹ ಕೆಲಸಗಳಿಗೆಲ್ಲ ಸಪ್ಲಿಮೆಂಟರಿ ಪ್ರಾವಿಷನ್ ಕೇಳುವುದು ನ್ಯಾಯವಾಗಿಲ್ಲ. As a matter of policy ಇದನ್ನು ಒಪ್ಪುವುದಕ್ಕಾಗುವುದಿಲ್ಲ. ಇದರಿಂದ ಯಾವ ಯೋಜನೆಯನ್ನು ಮುಂದುವರಿಸಲಿಕ್ಕಾಗುವುದಿಲ್ಲ. ಪಿ.ಡಬ್ಲ್ಯೂ.ಡಿ. ಉಪಮಂತ್ರಿಗಳ ಕ್ಷೇತ್ರದಲ್ಲಿ ಒಂದು ಕೆರೆ ಕಟ್ಟಬೇಕು ಎಂದು ಕೇಳಿದರೆ ಅದು ಸಾಧುವಾಗಿರಬಹುದೆಂದು ನಂಬಿ ಒಪ್ಪಿಕೊಳ್ಳೋಣ. ಅಥವಾ ಪಿ.ಡಬ್ಲ್ಯೂ.ಡಿ. ಉಪಮಂತ್ರಿ ಲಕ್ಷಾಂತರ ರೂಪಾಯಿಗಳ ಬೆಲೆ ಬಾಳುವ ಜಮೀನು ಅಗತ್ಯ ಬೇಕು ಎಂದರೆ ಅದನ್ನು ಒಂದು ವೇಳೆ ಒಪ್ಪಿಕೊಳ್ಳೋಣ. ಆದರೆ ಈ ದೃಷ್ಟಿಯಿಂದ ಈ ಸಪ್ಲಿಮೆಂಟರಿ ಡಿಮ್ಯಾಂಡುಗಳನ್ನು ಒಪ್ಪಿಕೊಳ್ಳಿ ಎಂದರೆ ಆ ರೀತಿ ಒಪ್ಪಿಗೆ ಕೊಡುವುದು ಸರಿಯಲ್ಲ. ಮುಂದಿನ ವರ್ಷ ಇಂಥಾದ್ದಕ್ಕೆಲ್ಲಾ ಅವಕಾಶ ಕೊಡಬಾರದು. ಅಂಥಾದ್ದಕ್ಕೆ ನಮ್ಮ ಒಪ್ಪಿಗೆಯನ್ನು ಪಡೆಯಲು ಇನ್ನು ಮುಂದೆ ಸರ್ಕಾರಕ್ಕೆ ಸಾಧ್ಯವಾಗುವುದಿಲ್ಲ. ಈ ದೃಷ್ಟಿಯಿಂದ ಇನ್ನು ಮುಂದೆ ಸರ್ಕಾರದವರು ರೊಟೀನ್ ವರ್ಕ್‌ಗಳನ್ನು ಖಂಡಿತವಾಗಿ ಸಪ್ಲಿಮೆಂಟರಿ ಡಿಮ್ಯಾಂಡ್‌ನಲ್ಲಿ ತೆಗೆದುಕೊಳ್ಳಬಾರದು.

ಇನ್ನು ಆಂಧ್ರ ಪ್ರದೇಶದ ರಸ್ತೆಯ ಸ್ವಲ್ಪ ಭಾಗ ನಮ್ಮ ಮೈಸೂರು ಸರ್ಕಾರಕ್ಕೆ ಸೇರಿಬಂತು. ಆ ರಸ್ತೆಯನ್ನು ಹೈವೆ ಮಾಡಬೇಕಾದದ್ದರಿಂದ ಸ್ವಲ್ಪ ಎಕ್ಸ್‌ಟ್ರಾ ಎಕ್ಸ್‌ಪೆಂಡಿಚರ್ ಆಯಿತು ಎಂದು ಹೇಳುತ್ತಾರೆ. ಆ ವಿಷಯದಲ್ಲಿ ನಾನು ಏನನ್ನೂ ಹೇಳುವುದಿಲ್ಲ.

4-30 P.M.

Demand 23ರಲ್ಲಿ ಹೇಳಿರುವಂತೆ World Agricultural Fairಗಾಗಿ ಖರ್ಚು ಮಾಡತಕ್ಕದ್ದು ಎಂದು ತಂದಿರುವುದು ಸಾಧುವಾದುದೋ ಅಲ್ಲವೋ ನನಗೇನೂ ಅರ್ಥವಾಗುವುದಿಲ್ಲ. ಇಷ್ಟೊಂದು ಹಣ, ಎಂದರೆ ಸುಮಾರು ನಾಲ್ಕು ಲಕ್ಷದಷ್ಟು ಈ Fairಗಾಗಿ ಖರ್ಚು ಮಾಡುವುದು ಸಾಧುವೇ ಎಂದರೆ, ಇದಕ್ಕೆ ತಕ್ಕಂತೆ ಪ್ರತಿಫಲ ಬರುತ್ತದೆ ಎನ್ನಬಹುದು. ಇಂತಹ Fair ನಿಂದ ನಮ್ಮ ದೇಶದಲ್ಲಿ ತಯಾರಾಗತಕ್ಕ ಪದಾರ್ಥಗಳ ಪ್ರಚಾರವಾಗುತ್ತದೆ ಎಂದೂ ಹೇಳಬಹುದು, ಆದರೂ ಇದಕ್ಕೋಸ್ಕರ ಇಷ್ಟೊಂದು ಹಣವನು ಖರ್ಚು ಮಾಡಬೇಕೆನ್ನುವುದು ಬಹಳ ವಿಷಾದಕರವಾದುದು.

ಇನ್ನು Community Development Blockನ್ನು Extend ಮಾಡಬೇಕೆನ್ನುವುದನ್ನು ಮೊದಲೇ ನಿರೀಕ್ಷಿಸಬಹುದಾಗಿತ್ತು. ನನ್ನ ಆಕ್ಷೇಪಣೆ ಇಷ್ಟೇ: ಇದು ಈಗ additional ಆಗಿ ಬರುತ್ತದೆಂದು ನಿರೀಕ್ಷಿಸಿದ್ದರೂ ಅದರಂತೆ ಖರ್ಚು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಪ್ಲಾನಿಗೆ ಹೊಂದಿಕೊಂಡು ಮಾಡಲು, ಯೋಜನೆಯ ಪ್ರಕಾರ ಇಷ್ಟು ದೂರ ಒದಗಿಸುವುದಕ್ಕೆ ಸಾಧ್ಯವೇ ಎನ್ನುವುದರ ಬಗ್ಗೆ ತಾವು 11ನೆಯ

ಪುಟದಲ್ಲಿ ಕೊಟ್ಟಿರುವ Explanatory Noteನಲ್ಲಿ ಹೀಗಿದೆ,

Demand No. 40

Explanatory Note:

Item No. 1.........

"During the current year, Government have, however, extended the period of operation of eight Community Development Blocks which has resulted in the increase over and above the expected number of Community Development Blocks and therefore additional provision required has been advanced from out of the Contingency Fund which is recouped now."

ಮತ್ತೆ 16ನೆಯ ಪೇಜಿನಲ್ಲಿ Item No. 4ನಲ್ಲಿರುವಂತೆ ನೋಡಿದರೆ ಯಾವುದನ್ನೂ ಸ್ಪಷ್ಟವಾಗಿ ತಿಳಿಸಿಲ್ಲ. ಪುಟ 11ರಲ್ಲಿ Item No. (1)ರಲ್ಲಿ 26 ಲಕ್ಷ ರೂಪಾಯಿಗಳಷ್ಟು ಖರ್ಚೆಂದು ನಮೂದಿಸಲಾಗಿದೆ. ಹೀಗೆ ಈ ರೀತಿಯಾಗಿ ಒದಗಿಸಿರುವುದು ಏಕೆ ಎನ್ನುವುದು ಸ್ಪಷ್ಟವಾಗಿಲ್ಲ.

Sri H. C. LINGA REDDY.—If you see Demand No. 58 on page 16, Explanation No. 4, there is an explanation there. Demand No. 58 is for loans and and Demand No. 40 is for services.

Sri M. C. NARASIMHAN.—The explanation is not clear on the point.

Sri H. C. LINGA REDDY.—The item "Loans and Advances under Community Development programme" is self-explanatory.

Sri M. C. NARASIMHAN.—I am referring to page 11 and there the explanation is:

Item No. 1.......

"At the time of the preparation of the Budget Estimates for the year it was expected that 12 Community Development Blocks, 96½ Stage 1 Block, 23 Pre-Extension Blocks and 39 Stage II Blocks would function during the year. During the current year, Government have, however, extended the period of operation of eight Community Development Blocks which has resulted in the increase over and above the expected number of Community Development Blocks and therefore additional provision required has been advanced from out of the Contingency Fund—which is recouped now. This is an item of 'New Service'."

It does not show that it is due to Staff. If it is due to Staff you must say so and also state whether it is temporary. I wonder whether it will be a new service.

ಕೊನೆಯದಾಗಿ Demand 49ರಲ್ಲಿ Item (2)ನಲ್ಲಿ ಮಂಡ್ಯದ ನ್ಯಾಷನಲ್ ಪೇಪರುಮಿಲ್ಸ್‌ಗಾಗಿ ಸುಮಾರು 3,94,500 ರೂಪಾಯಿಗಳನ್ನು ಸಾಲವಾಗಿ ಮಂಜೂರು ಮಾಡಲಾಗಿದೆ ಎಂದು ಹೇಳಲಾಗಿದೆ. ಇದರಲ್ಲಿ ಹೇಳಿರುವುದು ಅರ್ಥವಾಗುವುದಿಲ್ಲ. ಅವರೇ ಹೇಳಿರುವ ಹಾಗೆ ಷೇರು ಒಂದಕ್ಕೆ 10 ರಂತಾದರೆ 39,450 ರೂಪಾಯಿಗಳು 3945 ಷೇರುಗಳಿಗಾಗುತ್ತದೆಯೇ ವಿನಾ, 3,94,500 ಎಂದು ಇಲ್ಲಿ ಹೇಳಿರುವುದನ್ನು ನೋಡಿದರೆ ತಪ್ಪು ಸ್ಟೇಟುಮೆಂಟು ಕೊಟ್ಟಿದ್ದಾರೆ ಎಂದು ಗೊತ್ತಾಗುತ್ತದೆ. ವ್ಯತ್ಯಾಸ ಹೇಗೆ ಉಂಟಾಯಿತು ? ಇದರಂತೆ ನೋಡಿದರೆ 100 ರೂಪಾಯಿಗಳ Preferential Shares ಆಗಿರಬೇಕೇ ಹೊರತು. ಹತ್ತು ರೂಪಾಯಿಗಳಾಗುವುದಿಲ್ಲ. ಹತ್ತು ರೂಪಾಯಿಗಳಂತಾದರೆ ಮೂರು ಲಕ್ಷದಷ್ಟು ಹಣವಾಗುವುದಿಲ್ಲ.

Demand No. 49

Item No. 2.......

"Government have ordered that Rs. 10.00 lakhs worth of ordinary (Equity) Shares of Mandya National Paper Mills, Limited should be purchased; but only 3,945 shares of Rs. 10 each have been allotted and therefore out of the advance of Rs. 10.00 lakhs, a sum of Rs. 3,94,500 only has been utilised which is now proposed to be recouped. This is an item of 'New Service'".

It is obviously a Ten rupee share. If it had been a Hundred rupee shares then, it would have been a different matter.

Sri J. H. SHAMSUDDIN.—I think the Hon'ble member has not cared to look to the errata that has been issued subsequently. This is a clerical mistake which has been corrected in the slip that has been is ued.

Sri M. C. NARASIMHAN.—I got a copy of the Supplementary Demand on the day when it was placed before the House and I did not get a slip. I do not know whether it was subsequently issued.

ಇನ್ನು Demand No. 58ನಲ್ಲಿ ಹೊಸದಾಗಿ ಪಂಚಾಯತಿಗಳ ಎಲೆಕ್ಷನ್ನಿಗಾಗಿ ಇಷ್ಟು ಹಣ ಕೊಡಬೇಕು ಮತ್ತು ಆ ಹಣವನ್ನು ಅವರಿಂದ ವಾಪಸ್ಸು

(SRI M. C. NARASIMHAN)

ಪಡೆಯುತ್ತೇವೆ ಎಂದು ಹೇಳಿರುವುದು ಸಾಧುವಾದುದಲ್ಲ. ವಿಲೇಜು ಪಂಚಾಯತಿ ಆಕ್ಟಿನ ಪ್ರಕಾರ ತೆಗೆದುಕೊಂಡರೂ Section (7) ರಲ್ಲಿ "Elections shall be conducted by the Panchayats" ಎಂದು ಹೇಳಲಿಲ್ಲ. ಹಾಗಿರುವಾಗ ಅವರಿಂದ ಈ ಹಣವನ್ನು ವಸೂಲು ಮಾಡುವುದಕ್ಕಾಗುತ್ತದೆಯೇ ಮತ್ತು ಇದು ನ್ಯಾಯವಾಗಿದೆಯೇ ಎನ್ನುವುದನ್ನು ನೋಡಬೇಕು. ಈ ಬಿಲ್ಲನ್ನು ತಂದು ಚರ್ಚೆಮಾಡುವಾಗ ಪಂಚಾಯತಿಗಳ ಗ್ರೂಪುಗಳನ್ನು ಮಾಡಿ Develop ಮಾಡಬೇಕು ಇಲ್ಲದಿದ್ದರೆ ಈ ಪಂಚಾಯತಿಗಳ ಮುಂದುವರಿಯುವುದಕ್ಕೆ ಅವಕಾಶವಿರುವುದಿಲ್ಲ.

ಆದುದರಿಂದ ಸರ್ಕಾರದವರು ಈ ಚುನಾವಣೆಗಳನ್ನು ನಡೆಸುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ ಈಗ ನೋಡಿದರೆ ರೂಲ್ಸುಗಳಲ್ಲಿಯೂ ಸ್ಪಷ್ಟವಾಗಿ ಪಂಚಾಯತಿಗಳು ತಮ್ಮ ಎಲೆಕ್ಷನ್ನನ್ನು ತಾವೇ ಮಾಡಿಕೊಂಡು ಅದರ ಖರ್ಚನ್ನೂ ನೋಡಿಕೊಳ್ಳಬೇಕೆಂದು ಹೇಳಲಾಗಿದೆ. ಹೀಗಿರುವಾಗ ಇನ್ನೊಂದು ಹೊರೆಯನ್ನು ಹೊಸದಾಗಿ ಬರುವ ಪಂಚಾಯತಿಗಳ ಮೇಲೆ ಹೊರಿಸುವುದು ಸಾಧುವಾದುದೇ ಮತ್ತು ಆರೀತಿ ಮಾಡಿದರೆ ಗ್ರೂಪು ಪಂಚಾಯತಿಗಳನ್ನು develop ಮಾಡುವುದಕ್ಕೆ ಬರುತ್ತದೆಯೇ ಎಂದು ನೋಡಬೇಕು. ಅವುಗಳ Financial Position ಅಷ್ಟು ಆಶಾದಾಯಕವಾಗಿಲ್ಲ. ಈಗಾಗಲೆ ಪಂಚಾಯತಿಗಳ ಮೇಲೆ ಬೇಕಾದಷ್ಟು ಹೊರೆಯನ್ನು ಹೊರಿಸಿದ್ದೀರಿ ಪುನಃ ಈ ಹೊರೆಯನ್ನು ಹೊರಿಸುವುದರಿಂದ ಮುಂದಿನ ವರ್ಷದಲ್ಲಿ ಮಾಡಬೇಕೆಂದಿರುವ ಯಾವ Development workಗಳೂ ಕೂಡ ಚೆನ್ನಾಗಿ ನಡೆಯುವುದಿಲ್ಲ. ಆದುದರಿಂದ ಇದಕ್ಕೆ ವಿರೋಧ ಮಾಡಬೇಕಾಗುತ್ತದೆ.

ಇನ್ನು ಕೊನೆಯದಾಗಿ ಒಂದು ಮಾತನ್ನು ಹೇಳಿ ಮುಗಿಸುತ್ತೇನೆ. Minimum Wages Committeesಗಳಿಗಾಗಿ ಸುಮಾರು ಒಂದು ಲಕ್ಷ ರೂಪಾಯಿಗಳನ್ನು ಗ್ರ್ಯಾಂಟಾಗಿ ಕೇಳಿ ಒಂದು "New Service" ಇಲ್ಲಿ ತೆಗೆದುಕೊಂಡು ಬಂದಿರುವುದು ಖಂಡಿತವಾಗಿಯೂ ಸರಿಯಾದುದಲ್ಲ. Mininum Wages Act ಪ್ರಕಾರ 1957ನೇ ಇಸವಿಯಲ್ಲೇ ರಿವೈಸು ಮಾಡಬೇಕಾಗಿತ್ತು. ಹೀಗಿರುವಾಗ ಈ ಒಂದು ಅಂಶವನ್ನು ಈ ಬಡ್ಜೆಟ್ಟಿನಲ್ಲಿಯೂ ಆಗ ನಮೂದಿಸಿಲ್ಲ. Minimum Wages Committee ಯವರು ಸಿಫಾರಸುಗಳನ್ನು ಮಾಡಿ ಅದಷ್ಟು ಖರ್ಚುಮಾಡಿದ ನಂತರ ಚರ್ಚೆಮಾಡಿದರೆ ಏನೂ ಪ್ರಯೋಜನವಿಲ್ಲ. ಆಗ ಈ ಸೂಕ್ತವಾದ ಸಲಹೆಗಳನ್ನು ಕೊಟ್ಟರೆ ಆ ಸಲಹೆಗಳನ್ನು ಸರಕಾರ ಒಪ್ಪುವುದಕ್ಕೂ ಸಾಧ್ಯವಾಗುವುದಿಲ್ಲ.

ಎರಡನೆಯದು ಮಿನಿಮಂವೇಜಸ್ ಕಮಿಟಿಮಾಡಿದುದರಿಂದ ಏನಾದರೂ ಪ್ರಯೋಜನವಿದೆಯೇ ಎಂದರೆ ಏನೂ ಪ್ರಯೋಜನಕಾರಿಯಾಗುವುದಿಲ್ಲ. ನನಗೆ ತಿಳಿದಮಟ್ಟಿಗೆ ಇವೊತ್ತು ಮಿನಿಮಂ ವೇಜಸ್ ಕಮಿಟಿಯವರು ಹಲವಾರು ಕೈಗಾರಿಕೆಗಳಿಗೆ ಕನಿಷ್ಠ ಕೂಲಿ ಏನಿರಬೇಕೆಂಬ ವಿಷಯದಲ್ಲಿ ಸಿಫಾರಸುಮಾಡಿದ್ದಾರೆ. ಈ ಸಿಫಾರಸುಗಳ ಬಗ್ಗೆ ಸರ್ಕಾರದ ನೀತಿ ಏನಾಗಿದೆ ಎಂದರೆ ಯಾವುದನ್ನೂ ಒಪ್ಪಿಕೊಳ್ಳುವ ಸ್ಥಿತಿಯಲ್ಲಿಲ್ಲ. ಸುಮಾರು ಒಂದು ಲಕ್ಷ ರೂಪಾಯಿ ಹಣ ಖರ್ಚುಮಾಡಿ ಸಮಿತಿಮಾಡಿ ಸಮಿತಿಗೆ ಜುಡಿಷಿಯಲ್ ಅನುಭವವಿದ್ದವರನ್ನು, ಹೈಕೋರ್ಟ್ ಜಡ್ಜಿಗಳನ್ನು ಚೇರ್‌ಮನ್ ಮಾಡಿದ್ದಾರೆ. ಸರ್ಕಾರದ ಉನ್ನತಾಧಿಕಾರಿಗಳು ಆ ಸಮಿತಿಯಲ್ಲಿದ್ದಾರೆ. ಶಾಸನಸಭಾ ಸದಸ್ಯರೂ ಇದ್ದಾರೆ. ಇಂಥ ಒಂದು ಸಮಿತಿ ಮಾಡಿರುವ ಸಿಫಾರಸುಗಳನ್ನು ಸಹ ಈ ಸರ್ಕಾರ ಒಪ್ಪಿಕೊಳ್ಳುವುದಿಲ್ಲವೆಂಬುದು ನನ್ನ ಅಭಿಪ್ರಾಯ ಏಕೆಂದರೆ. Government is the biggest employer ಅವರೇ ದೊಡ್ಡ ಮಾಲೀಕರಾಗಿದ್ದಾರೆ ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆ, ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಲೋಕೋಪಯೋಗಿ ಇಲಾಖೆ, ಇವುಗಳಲ್ಲಿ ಸಹಸ್ರಾರು ಜನ ಕಾರ್ಮಿಕರು ಇದ್ದಾರೆ. ಸರ್ಕಾರ ಇವೊತ್ತು ಕಾರ್ಮಿಕರಿಂದ ಕೆಲಸ ಮಾಡಿಸಿಕೊಂಡು ಬರುತ್ತಿದೆ. ಮಿನಿಮಂವೇಜಸ್ ಕಮಿಟಿ ಇಂಥ ಕಾರ್ಮಿಕರಿಗೆಲ್ಲ ಕನಿಷ್ಠ ವೇತನ ಕೊಡಬೇಕೆಂದು ಸಿಫಾರಸು ಮಾಡಿದೆ. ಈ ಸಿಫಾರಸುಗಳನ್ನು ಜಾರಿಗೆ ತರುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಜಾರಿಗೆ ತಂದರೆ ಬಹಳ ಏರು ಪೇರಾಗುತ್ತದೆಂದು ಹೇಳುತ್ತಾರೆ. 1-1-1957 ರಿಂದ ಸರ್ಕಾರ ಸಂಬಳಗಳನ್ನು ಪುನರ್ವಿಮರ್ಶೆಮಾಡಿ ಗೊತ್ತುಮಾಡಿರುವುದರಿಂದ ಅದಕ್ಕಿಂತ ಹೆಚ್ಚು ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. Industrial Concerns ಮತ್ತು ಲೋಕೋಪಯೋಗಿ ಇಲಾಖೆ ಇದರೊಳಗೆ ಬರುವುದಿಲ್ಲ ಆದರೂಕೂಡ ಸರ್ಕಾರದವರು repercussions ಆಗುತ್ತದೆ, ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ಒಂದು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ, ಒಂದು ಸಮಿತಿ ಮಾಡಿದಂಥ ಸಿಫಾರಸುಗಳನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಸಾಧುವಾಗಿರುವುದನ್ನು ಒಪ್ಪಿಕೊಳ್ಳುವುದಿಲ್ಲವೆಂದರೆ ಇಂಥ ಕಮಿಟಿಗಳನ್ನು ಮಾಡುವುದಾದರೂ ಏಕೆ ಎಂದು ಕೇಳುತ್ತೇನೆ. ಮಿನಿಮಂ ವೇಜಸ್ ಆಕ್ಟ್ ಪ್ರಕಾರ ಸರ್ಕಾರಕ್ಕೆ revise ಮಾಡತಕ್ಕ ಹಕ್ಕು ಇದೆ. ಕಮಿಟಿಗಳನ್ನೇ ಮಾಡಬೇಕಾಗಿಲ್ಲ. ಕಮಿಟಿಗಳನ್ನು ಮಾಡಿಲ್ಲ, ಅದಕ್ಕೆ ಹಣವನ್ನು ಖರ್ಚುಮಾಡಿಲ್ಲವೆಂದು ಸಂತೋಷಪಡೋಣವೆಂದರೆ ಹಾಗೂ ಇಲ್ಲ. ಹೀಗೆ ಇಬ್ಬಗೆಯಾದ ನೀತಿಯನ್ನನುಸರಿಸುತ್ತಿದ್ದಾರೆ ಎಂದು ಈ ಡಿಮ್ಯಾಂಡಿನ ಬಗ್ಗೆ ಮಾತನಾಡುತ್ತ ಹೇಳಬೇಕಾಗಿದೆ.

Re-organisation of Labour and Labour Welfare ಎಂದು ಹೆಡಿಂಗ್ ಕೊಟ್ಟಿದ್ದಾರೆ. Reorganisation of Labour ಆಗಬೇಕು; ಇದರ ಅಗತ್ಯವಿದೆ, ಸಂಶಯವಿಲ್ಲ. ಇತ್ತ ಕಡೆ ಏನಾದರೂ ಗಮನ ಕೊಟ್ಟಿದ್ದಾರೆಯೇ ಎಂದರೆ ಎಳ್ಳಷ್ಟೂ ಇಲ್ಲ. ಪ್ಲಾಂಟೇಷನ್ ಕಾರ್ಮಿಕರಿಗೆ ಸಂಬಂಧಪಟ್ಟಂತೆ ಇರುವ ಕಾನೂನನ್ನು ಜಾರಿಗೆ ತರುವುದಕ್ಕೆ ಸಾಕಷ್ಟು ಸಿಬ್ಬಂದಿ ಇಲ್ಲ. ಸಿಬ್ಬಂದಿ ಇದ್ದರೆ ಜೀಪ್ ಇಲ್ಲ, ಜೀಪ್ ಇದ್ದರೆ ಇತರ ವ್ಯವಸ್ಥೆಗಳಿಲ್ಲ. ಹೀಗಿರುವಾಗ ಇವುಗಳಿಗೆ ಗಮನ ಕೊಟ್ಟು, ಈ ಕಾನೂನುಗಳನ್ನು ಜಾರಿಗೆ ತರಬಹುದಾಗಿತ್ತು. ನಾವು ಈ ವಿಚಾರದಲ್ಲಿ ಎಷ್ಟೋ ಒತ್ತಾಯ ಮಾಡಿದ್ದೇವೆ.

ಅರ್ಜೆಂಟ್ ಆಗಿರುವುದರ ಬಗ್ಗೆ ಮಾತ್ರ ನಾವು ಇವೊತ್ತು ಆಲೋಚನೆ ಮಾಡಬಹುದು. ಎರಡು ವರ್ಷಗಳಿಗೆ ಮುಂಚೆ ಕಾನೂನಿನ ಪ್ರಕಾರ ಮಾಡಬೇಕಾದುದನ್ನು New service ಎಂದು ಸಪ್ಲಿಮೆಂಟರಿ ಬೇಡಿಕೆಗಳಲ್ಲಿ ಸೇರಿಸಿ ತಂದರೆ ಹೇಗೆ ತಾನೇ ಒಪ್ಪಿಕೊಳ್ಳುವುದಕ್ಕೆ ಆಗುತ್ತದೆ ! ಇದು new service ಅಲ್ಲ. ಕಾಲಾವಕಾಶ ಕಡಮೆ ಇರುವುದರಿಂದ ಎಲ್ಲ ಅಂಶಗಳನ್ನು ಹೇಳುವುದಕ್ಕೆ ಬರುವುದಿಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಎಚ್. ಜಿ. ನರಸಿಂಹೇಗೌಡ.—ಸ್ವಾಮಿ, ಸಪ್ಲಿಮೆಂಟರಿ ಬೇಡಿಕೆಗಳ ಮೇಲಿನ ಚರ್ಚೆಯನ್ನು ಇವೊತ್ತು ಮುಗಿಸುವುದಕ್ಕಾಗುವುದಿಲ್ಲ. ಮಾತನಾಡುವವರು ಬಹಳ ಜನರಿದ್ದಾರೆ. Unnecessary expenditureಗೆಲ್ಲ ಹಣ ಬೇಕೆಂದು ನಮ್ಮ ಮುಂದೆ ಇಟ್ಟು ಆಡಳಿತ ಪಕ್ಷಕ್ಕೆ ಬಹುಮತವಿದೆ ಎಂದು ಕೈ ಎತ್ತಿಸಿಕೊಂಡರೆ ಒಳ್ಳೆಯದಲ್ಲ. ನಾವು ನಮ್ಮ ಅಭಿಪ್ರಾಯವನ್ನು ತಿಳಿಸಬೇಕಾಗಿದೆ. ಆದುದರಿಂದ ನಾಳೆಗೆ ಚರ್ಚೆಯನ್ನು ಮುಂದುವರೆಸಬೇಕು.

ಶ್ರೀ ಕೆ. ಕೆಂಚಪ್ಪ.—ಸಪ್ಲಿಮೆಂಟರಿ ಡಿಮ್ಯಾಂಡ್ ಬಹಳ ಮುಖ್ಯವಾದುದಾಗಿದೆ. ಬಿಸಿನೆಸ್ ಅಡ್ವೈಸರಿ ಕಮಿಟಿಯವರೇನಾದರೂ ಕಾಲವನ್ನು ಗೊತ್ತು ಮಾಡಿದ್ದರೆ ಅದನ್ನು ಹೆಚ್ಚು ಮಾಡುವುದಕ್ಕೆ ಈ ಮಾನ್ಯ ಸಭೆಗೆ ಅಧಿಕಾರವಿದೆ. ಈ ಡಿಮಾಂಡ್‌ಗಳ ಮೇಲೆ ಸಭೆಯ ಮತವನ್ನು ತೆಗೆದುಕೊಳ್ಳುವುದಕ್ಕೆ ಮುಂಚಿತವಾಗಿ ತತ್ವವನ್ನು ಪಾಲಿಸಬೇಕು. ಈ ಬೇಡಿಕೆಗಳ ಸಂಬಂಧದಲ್ಲಿ ಮಾತನಾಡಲು ಹೆಚ್ಚು ಅವಕಾಶವನ್ನು ಕೊಡಬೇಕು. ಆದುದರಿಂದ ಈ ಚರ್ಚೆಯನ್ನು ನಾಳೆಗೆ ಮುಂದುವರಿಸಬೇಕೆಂಬ ಅಭಿಪ್ರಾಯ ತಮಗೆ ಇದ್ದರೆ ಮುಂದುವರಿಸಿ, ಇಲ್ಲದೆ ಹೋದರೆ ಸಭೆಯ ಅಭಿಪ್ರಾಯವನ್ನು ತೆಗೆದುಕೊಳ್ಳಿ.

†**Sri B. VAIKUNTA BALIGA** (Mangalore I).—Mr. Speaker, Sir, I have to submit a few points by way of preliminary observation. It was mentioned that this Supplementary Demand was defective inasmuch as some of the items could not be called new service. It was also said that these items were not foreseen at the time of framing the budget and so there was lack of imagination and prudence on the part of the Government. Neither of these is proper. At this stage, I would like to make the position very clear. I entirely support all the Demands but leved charge against the Government that they have brought so few demands. My submission is that more should have been brought. Framing of budget is to provide for all possible things and supplementary demand is for the exact purpose of providing for a few items which have been left over as those that will arise thereafter. So, supplementary demands are inevitable under the Constitution and also under the circumstances that exist anywhere. I must say, the Government is perfectly in order in presenting the demands.

Sir, if the amount that is provided for now has run out, it would be perfectly proper to seek the opinion of the Members and seek their approval. It is in that line that we have the provision and if the amount runs in excess, the Constitution expressly provides for supplementry demands being placed before the Legislature. A charge was made that it has already been included and therefore it need not have been brought. But it will certainly place the Government in an awkward situation if ultimately the other view prevails, namely, that they have spent all the money provided for and it was open to them to have come forward by way of supplementary demands. In that way, we find fault with them. Sir, whenever a new service is mentioned, objection is raised. The Constitution prescribes the ambit of new service. The new service is to be interpreted in this manner, that is as a service which has not been expressly provided for. It is a service which has to be thought of or conceived and thereafter it has to be covered by a new service. If the idea had been there, it could have been provided for in the Budget itself. They knew nothing as to when it was going to be taken up. At the time of framing the Budget it was not thought of and therefore, it was not included. Later on it was thought of and attempts on the part of the Government rendered it possible and that is why it had become a new service because it has not been provided for in the Budget which has been passed. So, new service should be taken as a service not provided for. The idea did not subsist at that time. So, the objection does not stand scrutiny. Sir, the Public Accounts Committee was brought in. In the first place, the opinion of the Public Accounts Committee is not the last word. In interpreting the words 'new service', it will be perfectly proper to place a wide interpretation and not shut out things. If you interpret it like that, it prevents the Government from bringing in new items under new service at all. As regards the point that the Finance Minister fights shy of a deficit budget and therefore he has excluded it, I would say there is nothing wrong in it and I would join my friends here in telling him that the Finance Minister should be bold. Our finances are perfectly sound and he can go to a greater extent. At the same time, we should not shut out in new

(SRI B. VAIKUNTA BALIGA)

service, because the public would be benefited by it. The primary criterion to see whether the Government is functioning properly or not is not covered by the rigidity or the limits of the four corners of the budget; I would say the point in favour of the Government is the principles and policies adopted and it is no use saying that these things should not be brought at all or that they have been wrongly brought before the House. Therefore, Sir, in interpreting the nature of new service, I beg to differ. I would certainly desire that my friend should reconsider what he has said. One thing is certain that there are 12 demands and out of them if I am not mistaken about 11 or at least the bulk of these 12 demands state that amounts are going to be drawn from the Contingency Fund. Nobody finds fault with it; nobody says that the statement is wrong; that is to say, the amount would be drawn from the Contingency Fund, or they intend drawing it. It is the elementary duty of the Government to put it before the House. If they want to touch the Fund but do not put it before the House, I should say it is not at all good democracy or good parliamentary democracy. It is in that light, that these things have been done It gives us an opportunity to criticise the Government and find fault with them. We should not find fault with them and say that they should not have brought it. If the House feels, basically the demand which should not have been put forward has been put forward, we do not give our concurrence to it and we vote it down. In that light let us consider them. I find fault with the Finance Minister in not bringing more demands and doing more work. Questions are asked about want of adequate staff? What is the use of multiplying the demands without adequate staff. They have asked for sanitary staff in the Health Department. I would appeal to the Government to examine every Department and see if there is adequate staff and if there is no adequate staff, provide for it. Particularly, I have in mind the Public Works Department. Several things are held up for want of staff. If they are posted, they don't join duty. In view of these things, why not they ask for more grants is an aspect to which I will draw the attention of the House.

Sir, it is also seen that some of the demands involve policy matters. That is Demand No. 22. Under that a separate sub-division for survey of drainage works in Gulbarga and Raichur Districts was created. I entirely support it. I want to know what are the schemes contemplated in those Districts apart from those contemplated under the normal budget. I want details so that we may apply our mind and see whether this work which has been undertaken is proper or not. It would not have been wrong at all for the Finance Minister to mention those details by way of explanatory note Objection was taken with regard to Demand No. 23. I should feel, Sir, that it is too small an amount because we have to remember that we want our things to be presented at the World Agricultural Fair. It is an opportunity which cannot be lightly brushed aside. Even if we spend Rs. 10 lakhs, we cannot have such an opportunity as the World Agricultural Fair in which sevral couutries are represented. It cannot be denied that we want better co-ordination with other countries and we want financial aid from others. We want to present our case and we want to step up our production. How can we do it unless we participate in these fairs? Therefore, not only do I support it but ask the Government to be on the alert and see whether we can send to foreign countries the products of our various departments, particularly there or the Sericulture Department so that they may participate in international fairs. There are some products for which Mysore State holds the monopoly and these opportunities should be utilised for getting the maximum benefit. So I therefore entirely support Demand No. 23. Coming to Demand No. 28, there is one little error. There it is mentioned

that the expenditure on account of Minimum Wages Committees constituted by Government was not specifically provided for in the Budget. But I also find that the last item refers to anticipatory expenditure to the end of the year on account of several committees. I do not know whether it is put in there by over-sight or whether some other place could not be found for it and so Rs. 39,352 had been included there. The Committees have already been appointed; there is no doubt about it. Sir, there is one thing about which I do like to say a few words and that is Demand No. 38. which came in for criticism In the explanatory note, it is said that the Canara Bank Limited contributed a sum of Rs. 1,00,001 to augment the resources that are available to the Government. What has the Government done? It has spent only Rs. 92,000 so that unless the Government has wrongly spent, we should congratulate the Government and also the particular Institution which undertook the trouble of collecting a lakh of rupees and putting it at the disposal of the Government for giving gratuitous relief to victims of fire accidents and other natural calamities. This Institution deserves our thanks and gratitude for having done that service. Hereafter whenever a new occasion arises, I would appeal to the Government to spend the remaining amount and not divert it for any other purpose.

Sri J. H. SHAMSUDDIN.—The remaining amount has already been spent.

5 P.M.

Sri B. VAIKUNTA BALIGA.—With regard to Demand No. 46, the Government must be aware that by selecting certain things, certain motives are attributed. Attributing motive is of course one of the kinds of criticism which cannot be avoided. Personally, I do not value that approach very much, but I do say that there are many other things which could have been takenup, particularly with regard to production. The Central Government appointed a Committee to go into the matter to step up production particularly with regard to minor irrigation projects. I do desire that the Hon'ble Chief Minister may kindly bestow some attention on this, that is, that the Central Government appointed a Committee to go into the question of stepping up food production particularly with regard to minor irrigation schemes. It was dealt with and a report must have been submitted. If it has been received by this Government, I would say that it might be placed before the House so that the House may have an opportunity of persuading the Government to take action as early as possible. It is not actually outside the budget provision. The Central Government may come to our help and the help may be of the order of a few crores of rupees I would suggest that the Government may be pleased to place it on the Table of the House or the House be permitted to raise it by a short notice question or active half an hour debate. They may take steps so that the food production may be stepped up. I am sure, it will receive the earliest attention of the Government.

With regard to Demand No. 49, it is absolutely new service. There is no doubt about it. With regard to the provision made in the budget, that is, investment in other Commercial Concerns, it may not be treated like other sub heads. There are specific things that are asked for. It is a new Company that is being converted and in that way we are going to subscribe large amounts.

It would be perfectly right to treat it as new service as it was not contemplated at that time.

With regard to Demand No. 51, I would very much like that the Government should clarify the position, particularly with regard to item No. 5.

> "The property known as 'Avalon' has been acquired for locating the National Tuberculosis Institute at Bangalore. No provision has been included in the current year's Budget for meeting this expenditure and therefore an

(SRI B. VAIKUNTA BALIGA)

advance of Rs. 8,53,002 was sanctioned from the Contingency Fund..."

It is a bit ambiguous as to whether ultimately this Government is going to bear it or the Central Government. If such a proposal had been brought, the House would have had a chance of debating it. I may mention that because the Central Government is formulating various schemes for which the expenses are borne by the Central Government and if it is a question of capital expenditure and unless there is a commitment on the part of the Government that they would provide it, this Government may advise the Central Government to see that this expense is borne by the latter.

With regard to Demand No. 58, Sri Narasimhan was pleased to observe that the expenses of the elections should not be borne by this Government and that at the time when the Bill was debated upon, it was understood that it would be borne not by the Government but by the local authorities. One thing which is very clear is, that this is coming into operation for the first time and the funds that are to be spent are spent legally without any objection on the part of the Accountant General or without any audit objection. And if it is going to be spent in the first instance and as it was mentioned that it would be recouped, I do not find any objection so far as this Demand is concerned. Let us take it always the other way that it is to be borne by the State Government and not by the various local boards, in which case it is again rightly before us. So for this present consideration and in this session there cannot be any valid objection to the acceptance of this Demand. Therefore, whatever may be the interpretation as to who should ultimately bear this expenditure, whether it should be from the funds of the local boards or from the State Government, the Demand is very rightly placed before the House and I would therefore say that these Demands are perfectly right and I would conclude by telling the once again Government 'Do not be rigid;. Be flexible; do all that is possible.' If the productive things begin one year earlier, the State gets benefit and there is no question of there being any financial difficulty and therefore the Government will consider all these aspects.

†SRI B. SHAMSUNDER (Bhalki).—Mr. Speaker, Sir, I do not know how many Demands are before the House. The Speaker told us that we could speak on all the Demands. I would begin with the Panchayat system. I had recently been to Gulbarga and Bidar. I was surprised to know this. The nomination papers were filed and the date of scrutiny was fixed and at the time of scrutiny when it was known that a majority of the Congress nomination papers were rejected and all the opposition people were declared as elected, the Deputy Commissioner of Bider issued an order cancelling all the elections. Then on the 17th and 18th when I was at Gulburga I was told there that the elections were going to be held. Then again it was stated that those elections also were cancelled. Why? They know it full well that if the party in power is unable to get seats, they may play all these tricks. At the time when the Panchayats Bill came up before the House I had stated that the Shanbhogs, the Patels, the Patwaris....

MR. DEPUTY SPEAKER.—How does this arise? If you are to speak on the panchayat system, it must be only in connection with the cost to be met for the Elections.

SRI B. SHAMSUNDER.—I think members are entitled to speak on all the Demands.

SRI J. H. SHAMSUDDIN (Deputy Minister for Finance).—It is not the whole general administration that is before the House. It is the re-organisation of the audit; that is the only item before us.

SRI C. M. ARUMUGHAM.—There is a provision for panchayat election. How the Congress Government is going to conduct it is a matter for consideration. This is a sort of new service because it was not originally contemplated in the

previous budget. So there is scope for discussing it on the merits of the case of the local boards.

Sri M. RAMAPPA.—According to Rule 231 of the Lok Sabha, discussion of matters of policy is prohibited only in respect of continuing demands, but in respect of new services the whole question of policy could be discussed in the same way as if it was an original demand.

Mr. DEPUTY SPEAKER.—Though it relates to a new service, it is concerned with village panchayats, whereas the Member is speaking of elections to Municipalities.

Sri B. SHAM SUNDER.—I am speaking of local bodies in general.

Mr. DEPUTY SPEAKER.—The Member should concentrate on the particular item for which a demand is made.

Sri B. SHAMSUNDER.—Sir, in almost all the villages this Government has been trying to stifle progressive movements and whenever a chance comes to make the best opportunity of it, they are not sincere. Take the question of land reforms, for instance. Since the day the Land Reforms Bill was introduced, the owners have been indiscriminately transferring land. What is it that the Government has done to prevent evictions? Nothing. The Hon. Minister for Revenue was pleased to say recently that he had set up a committee or appointed some officers to distribute land among the landless agriculturists. Thousands of Scheduled Castes people have applied for land, but their applications have been rejected. I can give not a few instances but thousands of instances. The former Hyderabad Government had issued a circular, *i.e.* No. 14, in which it said that in the case of Scheduled Castes, Harijans and backward classes, even though the gairan area is less than 10% of the total cultivable land, land should be given to Harijans and the pattas should be confirmed in their name. It was so in 1956. I do not know what this Government is doing. This Government has gone to the extent of issuing a circular dated 8th October 1959 which says that if the landless people are in possession of land, they should be evicted and if the landless Harijans are already in possession of the land and if by chance they encroach upon some other land, their cases should beconsidered sympathetically. If any owner occupies two lands without knowing the boundaries of his own land, such cases may be considered sympathetically.

In the face of this, I do not know with what motive land reforms are sought to be introduced. When the Hon'ble Revenue Minister came to Gulbarga, 40 thousand Harijans gathered and gave a notice that they would start a Satyagraha.

Mr. DEPUTY SPEAKER.—How can the Hon'ble Member speak on land reforms? How can he discuss policies at this stage?

Sri B. SHAMSUNDER.—Why not? We are discussing items on revenue. There is a demand for supplementary grant. It is part of the common grant.

Mr. DEPUTY SPEAKER.—No. You cannot discuss like that.

Sri B. SHAMSUNDER.—You cannot dictate like that. I am speaking only on demands.

Sir, I would not like to go into details. I would only draw the attention of the Government to Directives contained in the Constitution. Article 16 (4) says that if the Harijans are not in an adequate number in the services, Government should take extra care and make arrangements to recruit them. But in reply to questions, Government stated that the percentage of Harijans in the services was 1·4. Is this what the Government has done to the Harijans for the last 10 or 12 years? I will tell the House how party influences come into play...

Mr. DEPUTY SPEAKER.—The member is again going out-of-the-way. How can he discuss recruitment policy here?

Sri B. SHAMSUNDER.—Administration includes everything, including safeguarding the interests of the Harijans, including the bigger classes of people who come in the way of their development.

Mr. DEPUTY SPEAKER.—How can you discuss everything?

An HON'BLE MEMBER.—He can discusss about the Police also.

Sri B. SHAMSUNDER.—Not the police. We do not want to discuss that subject because we saw their efficiency four or five days ago. We witnessed their ability to resort to firing. The drama is somehow over.

Sri C. M. ARUMUGHAM.—The drama is not over. It is only a rehear-al. (*Laughter*).

Sri B. SHAMSUNDER.—Sir, there are grants for the P. W. D. and Planning Departments. Fourteen years ago, the former Hyderabad Government had proposed a scheme of developing the Hyderabad Karnatak area. There was a project called the Bendsura project. That project was prepared after consulting some of the greatest engineers of the world. The former Government of Hyderabad took the advice of eminent American and European engineers and decided upon this project. What is the fate of that project today? It is still pending. Why? Because there is one Hon'ble Member of this House who is in that village as its headman. I will give his name. He is Sri Chandrasekhara Patil. He is coming in the way of the project being carried out....

Mr. DEPUTY SPEAKER.—I will have to ask you to discontinue. It has nothing to do with the demands.

Sri B. SHAMSUNDER.—It is within the demands....

Mr. DEPUTY SPEAKER.—I tell you strictly that you should confine yourself to the demands.

Sri B. SHAMSUNDER.—I am confining to the demands only. I am not going out of the scope of the demands.

Mr. DEPUTY SPEAKER.—No, you are not.

Sri B. SHAMSUNDER.—That project is now suspended. I got a letter from Delhi addressed to this Government. ..

Mr. DEPUTY SPEAKER.—You are wasting time. I should warn you.

Sri B. SHAMSUNDER.—This is a useful information. Government have been ignorant. Government have been callous in regard to these matters and you say that we cannot go on with this. Excuseme.

Mr. DEPUTY SPEAKER.—But you cannot be irrelevant.

Sri B. SHAMSUNDER.—Simply because I speak on matters which are unpalatable, I cannot be said to be irrelevant. It may be unpalatable to the ruling party, the Government and to those who are supposed to be impartial. But the rights of the minorities, including those of the scheduled castes, should not be trampled upon, but they should be safeguarded. There is a demand that we should have one Member in the Public Service Commission. That is so. I would go to the extent of saying that one Muslim Member should also be there.

Two members, one from the Scheduled Castes and the other a Muslima should be there. The Muslims have a population of 22 lakhs in this State. We cannot ignore them.

It is no good only appointing a Secretary to that Commission. It is just like patronising somebody. We do not want patronisation.

I think there is also a Demand under Industries.

Mr. DEPUTY SPEAKER.—Will you please discontinue your speech? I cannot allow you to speak.

Sri B. SHAMSUNDER.—Will you tell me why?

Mr. DEPUTY SPEAKER.—I cannot allow you to speak.

Sri B. SHAMSUNDER.—Why? Please give a ruling.

Mr. DEPUTY SPEAKER.—I cannot allow you. That is the only point. I call upon Sri Mudaligiri Gowda to speak.

Sri B. SHAMSUNDER.—I have not finished.

Mr. DEPUTY SPEAKER.—I cannot allow you.

Sri B. SHAMSUNDER.—Please tell me under what rules you cannot allow me to speak.

Mr. DEPUTY SPEAKER.—Please resume your seat.

Sri B. SHAMSUNDER.—If that is your pleasure then it is all right.

Mr. DEPUTY SPEAKER.—No; please resume your seat.

Sri B. SHAMSUNDER.—Please tell me what the matter is.

Mr. DEPUTY SPEAKER.—No, you resume your seat.

Sri C. J. MUCKANNAPPA.—Sir—

Mr. DEPUTY SPEAKER.—No.

Sri N. G. NARASIMHE GOWDA.—I rise to a point of order.

Sri M. RAMAPPA.—Please give the reason for asking him to sit down. There is a specific demand under Capital Outlay on Industrial Development. He was speaking on that specific demand. When he was speaking on a specific demand the Hon'ble Speaker asked him to resume his seat. It is expected of the Speaker to give the reason why he should resume his seat.

Mr. DEPUTY SPEAKER.—No.

Sri M. RAMAPPA.—I am saying this because it will be a very bad precedent. It will not be conducive to the healthy procedure of this House to ask an Hon'ble Member to sit down without assigning any reason as to why he should resume his seat. This is not proper and that is why I request the Speaker to give the reason as to why he should resume his seat.

Mr. DEPUTY SPEAKER.—We have only the supplementary demands before us for discussion. He is discussing land reforms, etc. The scope of the discussion is very limited. When a particular demand is presented to the House it is left to the Hon'ble Members to decide it as they like. I had definitely informed Sri Shamsunder not to go away from the subject under discussion, but still he was persisting in that. So I used my discretion and asked him to discontinue his speech as I did not like him to continue. That is all.

Sri N. G. NARASIMHE GOWDA.—I rise to a point of order.

Mr. DEPUTY SPEAKER.—There is no point of order when I am on my legs. That was my ruling.

ಶ್ರೀ ಎನ್. ಜಿ. ನರಸಿಂಹೇಗೌಡ.—ತಮ್ಮ ಗಮನಕ್ಕೆ ಕೆಲವು ವಿಷಯಗಳನ್ನು ತರಬೇಕಾಗಿದೆ.

Mr DEPUTY SPEAKER.—I cannot allow any discussion. Sri Mudalagiri Gowda will be the last speaker.

ಶ್ರೀ ಎನ್. ಜಿ ನರಸಿಂಹೇಗೌಡ.—ಈ ದಿನದ ಚರ್ಚೆಯನ್ನು ನಾಳೆಯುವರೆಗೂ ಮುಂದುವರಿಸಬೇಕೆಂದು ಕೋರುತ್ತೇನೆ. ಏಕೆಂದರೆ ನಮ್ಮಲ್ಲಿ ಮಾತನಾಡುವವರೇ ಸುಮಾರು ಏಳೆಂಟು ಜನರ ಮೇಲ್ಪಟ್ಟು ಇದ್ದಾರೆ. ಈಗ ಬಂದಿರುವ ಅಡಿಷನಲ್ಲು ಗ್ರಾಂಟು ಸುಮಾರು ಒಂದು ಕೋಟಿ ರೂಪಾಯಿಗಳಿಗಿಂತ ಮೇಲ್ಪಟ್ಟಿರುವುದರಿಂದ ವಿರೋಧಪಕ್ಷದವರಿಗೆ ತಮ್ಮ ಅಭಿಪ್ರಾಯವನ್ನು ತಿಳಿಸಲು ಒಂದು ಅವಕಾಶ ಸಿಕ್ಕಿರುವುದರಿಂದ ಇದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಸರಕಾರದವರು ನಮ್ಮ ಸಲಹೆಗಳನ್ನು ಕೇಳುವುದು ಅವಶ್ಯಕವಾದುದು. ಸರಕಾರದಲ್ಲಿ ಏನು ಲೋಪದೋಷಗಳಿವೆ ಎಂಬುದನ್ನೆಲ್ಲ ತಿಳಿಸಬೇಕಾಗಿದೆ. ಆದುದರಿಂದ ಈ ಚರ್ಚೆಯನ್ನು ನಾಳೆ ಕೂಡ ಮುಂದುವರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗಿಲ್ಲದಿದ್ದರೆ ಕಾಲವನ್ನಾದರೂ ಹೆಚ್ಚಿಗೆ ಮಾಡಬೇಕಾಗುತ್ತದೆ.

Sri M. RAMAPPA.—I want to bring to your notice that so far only Sri Puttaramiah has spoken from this side.

[MR. SPEAKER in the Chair].

Sri C. M. ARUMUGHAM.—I have got to make one submission. Sri Sham Sunder was speaking on the demands. When he was speaking on the demand for Capital Outlay on Industrial Development the Deputy Speaker was pleased to pull him up and ask him to discontinue his speech. We want to know from the Speaker why Sri Sham Sunder was not allowed to continue his speech and was asked to sit down.

Mr. SPEAKER.—Since the ruling has been given I am not going to reopen it.

Sri C. M. ARUMUGHAM.—Sir, we have got supreme regard for the Speaker. We also expect the Speaker to treat us like members.

Mr. SPEAKER.—I tell you, this is not fair.

Sri C. M. ARUMUGHAM.—When a member is speaking, how can the Speaker ask him to discontinue his speech? You can put him on the guard saying "this is out of order, speak on the subject."

Mr. SPEAKER.—Since a ruling has been given, I am not going to reopen it.

Sri C. M. ARUMUGHAM.—Either you revise the ruling or allow Sri Sham Sunder to speak.

Mr. SPEAKER.—Since a ruling has given, I am not going to reopen it.

Sri C. M. ARUMUGHAM.—What is the meaning of simply asking the member to discontinue his speech?

5-30 P.M.

Mr. SPEAKER.—You cannot ask me to revise the ruling. A ruling is given by the Deputy Speaker and it is binding on the House and on me also.

Sri C. J. MUCKANNAPPA.—There was no ruling, Sir. The Deputy Speaker simply asked the Member to sit down.

Mr. SPEAKER.—I have just asked the Deputy Speaker before he left the Chair whether he had given any ruling. He said, that he had given a ruling.

Sri M. RAMAPPA.—I request the Hon'ble Members not to continue this. They have expressed their grievances when the Deputy Speaker was in the Chair. It is not good to express something against the ruling of the Deputy Speaker before the Speaker. I request that they should put a stop to that. Another thing is: it is said that Sri Mudalagiri Gowda is the last speaker. So far, it is only Sri Puttaramiah, Sri Narasimhan, Sri Venkatai Gowda and Sri Sham Sunder that have spoken. So far as our side is concerned, it is only Sri Puttaramiah that has spoken. This is a policy matter. This is not only an additional Grant. It is the new services that really require debate on policy matters. So, I request the Hon'ble Speaker to give some more time and take it up tomorrow also.

Sri C. M. ARUMUGHAM.—Sir, I appeal to you to kindly allow Sri Sham Sunder to continue his speech. It is an insult to ask him to sit down in the middle of his speech.

Mr SPEAKER.—I am helpless. It is a question which cannot be reopened; I cannot reopen it.

Sri C. M. ARUMUGHAM.—We protest, Sir. It is an insult to the Member and therefore we stage a walk-out.

Mr. SPEAKER.—If it is the wish of the Hon'ble Members that some more time should be given, we shall sit for some more time to-day.

Sri B. K. PATTARAMIYA.—You will have to allow the Member (Sri Sham Sunder) to speak, Sir.

Mr. SPEAKER.—A ruling has been given by the Deputy Speaker that the Member should resume his seat. Please do not go back on the same point. We shall sit for an hour more. It may cause some hardship to the Member. Since a ruling has already been given, we should not go against it.

Sri K. KENCHAPPA.—Sir, a tired mind may not produce better work. Therefore, I request that the debate may be postponed until tomorrow.

Sri B. D. JATTI (Chief Minister).—Sir, there are only five items and we are taking so much time. If Hon'ble Members want, we may sit for some more time.

ಶ್ರೀ ಟಿ. ಎನ್. ಮುದಲಗಿರಿಗೌಡ (ಕುಣಿಗಲ್).–ಸ್ವಾಮಿ, ನಮ್ಮ ಮುಂದೆ ಇರತಕ್ಕ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಮೇಲೆ ಇದುವರೆಗೂ ಚರ್ಚೆಗಳು ನಡೆದಿವೆ. ನಾನು ಪ್ರತಿಪಕ್ಷದ ಚರ್ಚೆಯನ್ನು ಬಹಳ ಕೂಲಂಕಷವಾಗಿ ವಿಮರ್ಶಿಸಿದ್ದೇನೆ. ಆದರೆ ಪ್ರತಿಪಕ್ಷದವರು ನಮ್ಮ ಮುಂದೆ ಇಟ್ಟಿರತಕ್ಕ ಸಪ್ಲಿಮೆಂಟರಿ ಡಿಮ್ಯಾಂಡ್‌ಗಳನ್ನು ಯಾವ ರೀತಿಯಲ್ಲಿ ಅವಲೋಕಿಸಿ ಈ ಸಭೆಯನ್ನೂ ಅದರಲ್ಲಿಯೂ ಆಡಳಿತದಲ್ಲಿರತಕ್ಕ ಪಕ್ಷವನ್ನು ಎಚ್ಚರಗೊಳಿಸಬಹುದು ಎನ್ನುವ ದೃಷ್ಟಿಯಲ್ಲಿ ಚರ್ಚಿಸಿದ್ದರೆ ಚೆನ್ನಾಗಿತ್ತು ಎಂದುಕೊಂಡಿದ್ದೇನೆ. ಇದನ್ನೂ ಸಾಮಾನ್ಯವಾಗಿ ಲೋಕಾಭಿರಾಮವಾಗಿ ಚರ್ಚೆಮಾಡತಕ್ಕ ರೀತಿಯಲ್ಲಿ, comment ಮಾಡತಕ್ಕ ರೀತಿಯಲ್ಲಿ ಚರ್ಚಿಸಿದರೇ ವಿನಾ ಬಹಳ ಪ್ರಾಮುಖ್ಯವಾದ ವಿಷಯಗಳನ್ನೂ ಎತ್ತಿ principles ಎತ್ತಿ ಚರ್ಚಿಸಲಿಲ್ಲವೆಂದು ಹೇಳಬೇಕಾಗಿದೆ. ಇದರಲ್ಲಿರುವ ಯಾವುದೇ ಸಪ್ಲಿಮೆಂಟರಿ ಡಿಮ್ಯಾಂಡ್ ಸಹಿತ ಹೊಸದಾಗಿ, ಬಡ್ಜೆಟ್‌ನಲ್ಲಿಲ್ಲದೇ ಇರತಕ್ಕ ಹಣವನ್ನು ಪಡೆಯಲು ಈ ಡಿಮ್ಯಾಂಡ್‌ಗಳಲ್ಲಿ ಸೇರಿಸಿಲ್ಲ. ಯಾವ ಹಣ ಕಂಟಿಂಜೆನ್ಸಿ ಫಂಡಿನಲ್ಲಿದೆಯೋ ಅದನ್ನು ಜರೂರಾಗಿ, ಅತ್ಯಾವಶ್ಯಕವಾಗಿ ಉಪಯೋಗಿಸಬಹುದಾದಂಥಾ ಹೆಡ್‌ಗಳಿಗೆ ಅದನ್ನು ಬದಲಾಯಿಸಿಕೊಂಡಿದ್ದಾರೆ.

ಈ ಹಣವನ್ನು ಬಳಸಿಕೊಂಡಿರುವುದಕ್ಕೆ ಪ್ರಾವಿಷನ್ ಇದೆಯೇ ಇಲ್ಲವೇ ಎಂಬುದನ್ನು ಯೋಚನೆ ಮಾಡಬೇಕು. ಪ್ರಾವಿಷನ್ ಇದ್ದರೆ ಯಾವ ಐಟಮ್ಮಿಗೆ ಬಳಸಿಕೊಂಡಿದ್ದಾರೆ, ಅದು ಸರಿಯಾಗಿದೆಯೇ ಇಲ್ಲವೇ ಎಂಬುದನ್ನು ನಾವು ಚರ್ಚಿಸಬೇಕು. ಹೀಗೆ ನಾವು ಚರ್ಚಿಸುವಾಗ ಈ ಡಿಮ್ಯಾಂಡುಗಳಿಗೆ ಪ್ರೊವೈಡ್ ಮಾಡಿಕೊಂಡಿರತಕ್ಕ ಹಣ ನ್ಯಾಯಬದ್ಧವಾಗಿ ಕ್ರಮಬದ್ಧವಾಗಿ ಅತ್ಯಗತ್ಯವಾಗಿ ಉಪಯೋಗಿಸಬೇಕಾದಂಥ ಹೆಡ್‌ಗಳಿಗೆ ಉಪಯೋಗಿಸಿಕೊಂಡಿದ್ದಾರೆಯೇ, ನಮ್ಮ ಅಪ್ರೂವಲ್ ತೆಗೆದುಕೊಳ್ಳುವುದಕ್ಕೋಸ್ಕರ ಕ್ರಮಬದ್ಧವಾಗಿ ನಮ್ಮ ಮುಂದೆ ಇಟ್ಟಿದ್ದಾರೆಯೇ ಎಂಬುದನ್ನು ನಾವು ನೋಡಬೇಕು.

ನ್ಯೂ ಸರ್ವೀಸ್ ಎಂದರೆ ಪ್ರತ್ಯೇಕವಾದಂತಹ ಒಂದು ಸಂಸ್ಥೆಯನ್ನು, ಪ್ರತ್ಯೇಕವಾದಂತಹ ಡಿಪಾರ್ಟ್‌ಮೆಂಟನ್ನು ತೆಗೆದು ನ್ಯೂ ಸರ್ವಿಸ್ ಇಟ್ಟಿಲ್ಲ. ಇರತಕ್ಕ ಡಿಪಾರ್ಟ್‌ಮೆಂಟ್ ಯಾವುದು ಇದೆಯೋ ಅದನ್ನು ಅತ್ಯಗತ್ಯವಾಗಿ ಎಕ್ಸ್‌ಪ್ಯಾಂಡ್ ಮಾಡಬೇಕಾದಂಥ ಸಂದರ್ಭ ಒದಗಿದ್ದರಿಂದ, ಇದನ್ನು ನ್ಯೂ ಸರ್ವೀಸ್ ಎಂದು ಅವರು ಹೇಳಿದರು.

Sri B. K. PUTTARAMIYA.—On a point of information. ಹಣ ಕಾಸಿನ ಸಚಿವರು ಇದ್ದಾರೆ; ನ್ಯೂ ಸರ್ವಿಸ್ ವಿಷಯವನ್ನು ಕ್ಲಿಯರ್ ಮಾಡಿ ಹೇಳಿ ಬಿಟ್ಟರೆ ಇದೆಲ್ಲಾ ಸರಿಹೋಗುತ್ತದೆ.

ಶ್ರೀ ಟಿ. ಎನ್. ಮುದಲಗಿರಿಗೌಡ.—ಶ್ರೀ ಜಿ. ವೆಂಕಟೇಗೌಡರು, ನರಸಿಂಹನ್‌ರವರು, ಪ್ರಸ್ತಾಪ ಮಾಡಿದ್ದಕ್ಕೆ ಶ್ರೀ ವೈಕುಂಠಬಾಳಿಗರವರು ಉತ್ತರ ಕೊಟ್ಟಿದ್ದಾರೆ. ಈಗ ಶ್ರೀ ಪುಟ್ಟರಾಮಯ್ಯನವರು

ಅದನ್ನೇ ಕೇಳಿದ್ದಾರೆ. ಅದನ್ನು ಸರಿಯಾಗಿ ತಿಳಿದು ಕೊಳ್ಳಬೇಕಾದುದ್ದು ಅವರ ಕರ್ತವ್ಯ. ಈಗ ಡಿಮ್ಯಾಂಡ್ ನಂ. 13ರಲ್ಲಿ ಎಫಿಷಿಯೆನ್ಸಿ ಆಡಿಟ್ ಮತ್ತು ಆಂಟಿ ಕರಪ್‌ಷನ್ ಏನು ಹೇಳಿದ್ದಾರೆ ಇದರ ವಿಷಯದಲ್ಲಿ ನಾನು ಸರ್ಕಾರಕ್ಕೆ ಒಂದು ಸೂಚನೆಯನ್ನು ಕೊಡಬೇಕು ಎಂದಿದ್ದೇನೆ. ಅವರು ಅಲ್ಲಿ "A Technical Audit cell in the Directorate of Efficiency Audit and Anti-corruption with the following Staff." ಎಂದು ಹೇಳಿದ್ದಾರೆ. ಫೈನಾನ್ಸ್ ಡಿಪಾರ್ಟ್‌ಮೆಂಟಿನವರಿಗೆ ಒಂದು ವಿಷಯವನ್ನು ಹೇಳಬೇಕು ಎಂದು ಇದ್ದೇನೆ. ಯಾವ ಹಣ ವನ್ನು ಯಾವ ಡಿಪಾರ್ಟ್‌ಮೆಂಟಿಗೆ ಹೆಚ್ಚಿಗೆ ಡಿಮ್ಯಾಂಡಿನ ಮೇಲೆ ಕೊಡಬೇಕಾಗಿದ್ದರೂ ಕೂಡ ಫೈನಾನ್ಸ್ ಡಿಪಾರ್ಟ್‌ಮೆಂಟಿನವರು ಇದುವರೆಗೂ ಕೊಟ್ಟಿರತಕ್ಕ ಹಣವನ್ನು ಎಷ್ಟರ ಮಟ್ಟಿಗೆ ಖರ್ಚು ಮಾಡಿದ್ದಾರೆ, ಎಷ್ಟರ ಮಟ್ಟಿಗೆ ಅದರಿಂದ ಕೆಲಸಕಾರ್ಯಗಳು ನಡೆದಿವೆ, ಎಫಿಷಿಯೆನ್ಸಿ ಜಾಸ್ತಿಯಾಗಿ ದೆಯೇ ಅಥವಾ ಇಳಿದಿದೆಯೇ ಎನ್ನುವುದನ್ನು ಪ್ರತಿಯೊಂದು ಹೆಡ್‌ನಲ್ಲಿ ನೋಡಬೇಕು ಎಂದು ಸೂಚನೆ ಮಾಡುತ್ತೇನೆ. ಎಫಿಷಿಯೆನ್ಸಿ ಆಡಿಟ್ ಮತ್ತು ಆಂಟಿಕರಪ್‌ಷನ್ ಡಿಪಾರ್ಟ್‌ಮೆಂಟಿನಲ್ಲಿ ಈಗ ಎಷ್ಟರ ಮಟ್ಟಿಗೆ ಡಿಪಾರ್ಟ್‌ಮೆಂಟಿನ ಕೆಲಸ ಕಾರ್ಯಗಳು ನಡೆಯುತ್ತಿವೆ, ಎಷ್ಟರ ಮಟ್ಟಿಗೆ ಎಫಿಷಿಯೆನ್ಸಿ ಇಂಪ್ರೂವ್ ಆಗಿದೆ ಎನ್ನುವ ನೀವು ನಮಗೆ ತೋರಿಸಿಕೊಡಬೇಕು. ಮತ್ತು ಕೊಡಬೇಕಾದ ಅಗತ್ಯವಿದೆಯೇ. ಆದಕಾರಣ ಹೆಚ್ಚಿಗೆ ಹಣವನ್ನು ಕೊಡುವಾಗ ಫೈನಾನ್ಸ್ ಇಲಾಖೆ ಯವರು ಕಳೆದ ವರ್ಷ ಕೊಟ್ಟಿರತಕ್ಕ ಹಣ ಯಾವ ರೀತಿ ಖರ್ಚಾಗಿದೆ ಎಂಬುದನ್ನು ನೋಡಿಕೊಂಡು ಸಂಬಂಧ ಪಟ್ಟ ಇಲಾಖೆಯವರು ಎಫಿಷಿಯೆನ್ಸಿ ನೋಡಿಕೊಂಡು ಹೆಚ್ಚಿಗೆ ಹಣವನ್ನು ಒದಗಿಸತಕ್ಕ ವಿಷಯವನ್ನು ಯೋಚಿಸಬೇಕು ಎಂದು ಸೂಚನೆ ಮಾಡುತ್ತೇನೆ.

ಇನ್ನು 40ನೆಯ ಡಿಮ್ಯಾಂಡಿನ ಮೇಲೆ ಚರ್ಚೆಮಾಡಿದರೆ ಅನೇಕ ವಿಷಯಗಳನ್ನು ಸೂಚಿಸಬಹುದು, ಎಂದು ನಾನು ಅರ್ಥ ಮಾಡಿಕೊಂಡಿದ್ದೇನೆ. ಆದರೂ ಇದರಲ್ಲಿ ಕೆಲವು ನಿರೀಕ್ಷೆಗಿಂತಲೂ ಹೆಚ್ಚು ಬ್ಲಾಕುಗಳನ್ನು ಕೊಡಬೇಕಾಗಿ ಬಂತು ಎಂದು ಹೆಚ್ಚಿಗೆ ಹಣವನ್ನು ಒದಗಿಸಿಕೊಂಡಿದ್ದಾರೆ. Grama Seviks ಟ್ರೇನಿಂಗ್‌ಗೋಸ್ಕರ ಈ ಹಣವನ್ನು ಒದಗಿಸಿದ್ದಾರೆ. ಇದರ ವಿಷಯದಲ್ಲಿ ಒಂದೆರಡು ಅಂಶಗಳನ್ನು ಸೂಚಿಸುತ್ತೇನೆ. ಹೆಚ್ಚು ಹೆಚ್ಚು ಹಣವನ್ನು ಒದಗಿಸಿಕೊಳ್ಳಲೇಬೇಕು. ಅದಕ್ಕೆ ನಮ್ಮ ಅಭ್ಯಂತರ ವಿಲ್ಲ ರಿಜಿಡ್ ಆಗಿ ಇರಬೇಕಾಗಿಲ್ಲ, ಫ್ಲೆಕಿಬಲ್ ಆಗಿರಬೇಕು. ಡೆವಲಪ್‌ಮೆಂಟ್ ಫಂಡ್‌ನಿಂದ ಯಾವುದಕ್ಕೂ ಹಣವನ್ನು ಒದಗಿಸಬೇಕಾದರೂ ಕೂಡ, ರಿಜಿಡ್ ಆಗಿ ಒಂದು ಚೌಕಟ್ಟಿನೊಳಗೆ ಒದಗಿಸಿ ಕೊಡತಕ್ಕದ್ದು ಸರಿಯಲ್ಲ ಎಂದು ಹೇಳಿದರು. ಹೀಗೆ ಹೇಳುವಾಗ ಖರ್ಚು ಮಾಡತಕ್ಕಂಥ ಹಣದಿಂದ ಎಷ್ಟರ ಮಟ್ಟಿಗೆ ದೇಶಕ್ಕೆ ಪ್ರಯೋಜನಕಾರಿಯಾಗಿದೆ, ಎಷ್ಟರ ಮಟ್ಟಿಗೆ ಪ್ರಯೋಜನಕಾರಿಯಾಗಿಲ್ಲ ಎನ್ನುವುದನ್ನೂ ಕೂಡ ಸರ್ಕಾರದವರು ಯೋಚನೆ ಮಾಡಬೇಕು. ಹಣವನ್ನು ಫೈನಾನ್ಸ್ ಡಿಪಾರ್ಟ್‌ಮೆಂಟ್ ಕೇಳು ವಾಗ ಈ ವಿಷಯವನ್ನು ಸರ್ಕಾರದವರು ಗಮನಿಸಬೇಕು. ಸೇವಕರುಗಳು ಮತ್ತು ಸೇವಕಿಯರುಗಳ ವಿಷಯದಲ್ಲಿ ಅವರಿಗೆ ಟ್ರೈನಿಂಗ್ ಕೊಡುವುದ ಕ್ಕೋಸ್ಕರ ಟ್ರೈನಿಂಗ್ ಸೆಂಟರನ್ನು ತೆಗೆಯಬೇಕು ಎಂದು ಹಣವನ್ನು ಕೇಳಿದ್ದಾರೆ. ಇದುವರೆಗೆ ಸೆಲೆಕ್ಟ್ ಮಾಡಿದ ಸೇವಕರು ಮತ್ತು ಸೇವಕಿಯರುಗಳು ಎಷ್ಟು ಜನರು ಪ್ಲಾನಿಂಗಿಗೆ ಹೊಂದಿಕೊಂಡಂತೆ ನಮ್ಮ ಪ್ಲಾನಿಂಗಿನಲ್ಲಿ ಕೆಲಸ ಕಾರ್ಯಗಳನ್ನು ಈಗ ಎರಡು ವರ್ಷ ಕಳೆದರೂ ಕೂಡ ತಿಳಿದುಕೊಂಡಿರತಕ್ಕವರು ಇದ್ದಾರೆ? ಅದು ಬಹಳ ಮುಖ್ಯವಾಗಿ ಗಮನಿಸ ಬೇಕಾದ ವಿಷಯ. ನೀವು ಕೇಳತಕ್ಕ ಹಣದಿಂದ ನಮ್ಮ ದೇಶಕ್ಕೆ ಎಷ್ಟರ ಮಟ್ಟಿಗೆ ಪ್ರಯೋಜನವಾಗುತ್ತದೆ ಎನ್ನುವುದು ಮುಖ್ಯವಾದ ವಿಷಯ. ಎರಡು ವರ್ಷ ಗಳಿಂದ ಟ್ರೈನಿಂಗ್ ಆಗಿಯೂ ಕೂಡ ಇವೊತ್ತಿನ ದಿವಸ ಅವರಿಗೆ ಏನಾದರೂ ಒಂದು ಪ್ರಶ್ನೆಯನ್ನು ಕೇಳಿದರೆ ಅವರನ್ನು ಒಂದು ಹಳ್ಳಿಯಲ್ಲಿ ತೆಗೆದುಕೊಂಡು ಹೋಗಿ ನಿಲ್ಲಿಸಿ ಇವೊತ್ತಿನ ದಿವಸ ಹಳ್ಳಿಯಲ್ಲಿ ಕೆಲಸ ಕಾರ್ಯ ಗಳನ್ನು ಹೇಗೆ ಇಂಪ್ಲಿಮೆಂಟ್ ಮಾಡುತ್ತೀರಿ ಎಂದು ಕೇಳಿದರೆ? ಇಂಪ್ಲಿಮೆಂಟ್ ಮಾಡತಕ್ಕ ವಿಧಾನವನ್ನು ಹೇಳತಕ್ಕ ಪರಿಸ್ಥಿತಿ ಇರಬೇಕು. ಬಹು ಮುಖ್ಯವಾಗಿ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರಾಗಲೀ, ಗ್ರಾಮ ಸೇವಕರಾಗಲೀ, ಗ್ರಾಮ ಸೇವಕಿಯರಾಗಲೀ ಇವರ ಸೆಲೆಕ್ಷನ್‌ನ್ನು ನಾವು ಸರಿಯಾದ ರೀತಿಯಲ್ಲಿ ಮಾಡದೆ ಇರುವುದರಿಂದ, ಸರಿಯಾದ ಸೆಲೆಕ್ಷನ್ ಆಗದೆ ಇರುವುದ ರಿಂದ ಇವೊತ್ತಿನ ದಿವಸ ಸ್ಕೀಮುಗಳು ಫೇಲ್ ಆಗುತ್ತಿವೆ: ನಾವು ಏನು ಗುರಿ ನಿರೀಕ್ಷಣೆ ಮಾಡಿದ್ದೇವೋ ಅದನ್ನು ಮುಟ್ಟುವುದಕ್ಕೆ ಸಾಧ್ಯವಾಗುತ್ತಾ ಇಲ್ಲ, ಎಷ್ಟು ಪ್ರಯತ್ನ ಮಾಡಿದರೂ ಆಗುತ್ತಾ ಇಲ್ಲ. ಟ್ರೈನಿಂಗಿನಲ್ಲಿ ಕೂಡ ಏನೋ ಲೋಪ ದೋಷಗಳಿರ ಬೇಕು. ನಾವು ಖರ್ಚು ಮಾಡಿದಂತಹ ಹಣ ಪ್ರಯೋಜನಕಾರಿ ಆಗಬೇಕು, ಎಂಬ ಅಂಶವನ್ನು ಸರ್ಕಾರದವರು ಹೆಚ್ಚು ಗಮನಿಸಬೇಕು. ಇಂಡಿಯಾ ಸರ್ಕಾರದವರು ಹಣವನ್ನು ಕೊಟ್ಟಿದ್ದಾರೆ; ಸ್ಟೇಟ್ ಗೌರ್ನ್ಮೆಂಟಿನವರಾದ ನಾವು ಕೊಟ್ಟಿದ್ದೇವೆ. ಕೋಟಿ ಗಟ್ಟಲೆ, ಲಕ್ಷಗಟ್ಟಲೆ ಹಣ ಖರ್ಚು ಮಾಡುತ್ತಿದ್ದೇವೆ. ಆದರೆ ಅದರಿಂದ ಸಾಧಿಸಿದ ಪ್ರಗತಿ ನಾವು ಖಂಡಿತ ವಾಗಿಯೂ ಹೇಳಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತೇನೆ.

ಸ್ವಾಮಿ, ಇನ್ನು 46ನೆಯ ಡಿಮ್ಯಾಂಡಿನ ಮೇಲೆ ಪ್ರಸ್ತಾಪ ಮಾಡುವಾಗ ಈ ವಿಚಾರದಲ್ಲಿ ಈಗಾಗಲೇ ಶ್ರೀಮಾನ್ ವೈಕುಂಠ ಬಾಳಿಗ ಅವರು ಏನು ಹೇಳಿದ್ದಾರೋ ಅದನ್ನು ನಾನು ನೂರಕ್ಕೆ ನೂರು ಭಾಗ ಸರಿಯಾಗಿ ಹೇಳಿದ್ದಾರೆಂದು ಒಪ್ಪುತ್ತೇನೆ. ಈ ಡಿಮ್ಯಾಂಡನ್ನು ತಂದಿರುವುದರಿಂದ ಸರ್ಕಾರದವರ ದೃಷ್ಟಿಯೇ ಒಂದು ರೀತಿಯಾಗಿ ಬದಲಾವಣೆ ಆಗಿರುತ್ತದೆಂಬುದು ಈ ಡಿಮ್ಯಾಂಡನ್ನು ನೋಡುತ್ತಿದ್ದ ಹಾಗೆಯೇ ಯಾರಿಗಾದರೂ ಆ ಅಂಶ ಎದ್ದು ಕಾಣದೆ ಇರಲಾರದೆಂದು ಹೇಳುತ್ತೇನೆ. ಈ ರೆಯ ವಿಚಾರ ಅಂಥ ಒಂದು ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದುದಾಗಿದ್ದರೆ ಇದನ್ನು ತಾವು ಈ ವರ್ಷದ ಆದಿಯಲ್ಲೇ ತಯಾರಿಸಿದಂಥ ಮೂಲ ಬಡ್ಜೆಟ್ಟಿನಲ್ಲೇ ಸೇರಿಸಬಹುದಿತ್ತು. ಆದರೆ ಸರ್ಕಾರದವರ ಮನಸ್ಸಿನ ಮೇಲೆ ಯಾರು ಒಂದು ಹೆಚ್ಚಿನ ಒತ್ತಾಯ ತರಬಲ್ಲರೋ ಮತ್ತು ಯಾವ ಕಾರ್ಯಗಳ ಮೇಲೆ ಸರ್ಕಾರದವರ ಮನಸ್ಸು ಹೆಚ್ಚಿಗೆ ಆಕರ್ಷಿತವಾಗಿ ಹೋಗುತ್ತದೋ ಅಂಥ ಒಂದು ಸಂದರ್ಭ ಒದಗಿ ಬಂದುದರಿಂದ ಈಗ ಸರ್ಕಾರ ಈ ಕೆಲಸಕ್ಕೆ ಕೈ ಹಾಕಿದೆ ಎಂಬುದು ಚೆನ್ನಾಗಿ ಕಂಡು ಬರುತ್ತಿದೆ. ಆದರೆ ಯಾರು ಕೈ ಕಟ್ಟಿಕೊಂಡು ಸರ್ಕಾರದವರ ಮೇಲೆ ಒಂದು ಪ್ರಭಾವ ಬೀರಲು ಸಾಧ್ಯವಿಲ್ಲವೆಂದು ಕುಳಿತು ಬಿಡುತ್ತಾರೋ ಅಂಥ ಪ್ರದೇಶಗಳು ಎಂದಿಗೂ ನಿರ್ಲಕ್ಷ್ಯ

(ಶ್ರೀ ಟಿ. ಎನ್. ಮುಡಲಗಿರಿಗೌಡ)

ಭಾವದಿಂದಲೇ ನೋಡಲ್ಪಡುತ್ತವೆಂಬುದು ಇದರಿಂದ ಗೊತ್ತಾಗುತ್ತದೆ. ಹಾಗೆ ಸರ್ಕಾರಕ್ಕೆ ಇಂಥ ದೂಷಣೆಗೆ ಗುರಿಯಾಗ ಬಾರದೆಂಬ ಇರಾದೆ ಇದ್ದಿದ್ದರೆ ಅವರೇಕೆ ಈ ಕಾಮಗಾರಿಯನ್ನು ವರ್ಷಾರಂಭದಲ್ಲೇ ಬಡ್ಜೆಟ್ಟಿನಲ್ಲಿ ಸೇರಿಸಬಾರದಾಗಿತ್ತು ಎಂದು ಕೇಳುತ್ತೇನೆ.

ಇನ್ನು 49 ನೆಯ ಡಿಮ್ಯಾಂಡಿನಲ್ಲಿ ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಲಿನಲ್ಲಿ ಷೇರುಗಳನ್ನು ಕೊಂಡುಕೊಳ್ಳಲು ಈಗ ಹಣ ಬೇಕೆಂದು ಕೇಳಿದ್ದಾರೆ. ಅದೇ ರೀತಿ ಫೈನಾನ್‌ಷಿಯಲ್ ಕಾರ್ಪೊರೇಷನ್‌ನಲ್ಲಿ ಷೇರುಗಳಿಗೆ ಹಣ ಬೇಕಾಗಿರುತ್ತದೆಂದು ಈ ಡಿಮ್ಯಾಂಡಿನಲ್ಲಿ ತಿಳಿಸಿದ್ದಾರೆ. ಆದರೆ ಈ ವಿಚಾರದಲ್ಲಿ ನಾನು ಎರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಈಗ ಸಭೆಯಲ್ಲಿ ಮುಖ್ಯ ಮಂತ್ರಿಗಳಿಲ್ಲ. ಅವರಿದ್ದಿದ್ದರೆ ಚೆನ್ನಾಗಿತ್ತು. ಈಗಾಗಲೇ ನಮ್ಮ ಸರ್ಕಾರದವರು ಅನೇಕ ಕೈಗಾರಿಕೋದ್ಯಮಗಳನ್ನು ಕೈಗೊಂಡಿದ್ದಾರೆ. ಇನ್ನೂ ಕೆಲವು ಹೊಸ ಹೊಸ ಕೈಗಾರಿಕೆಗಳನ್ನು ತೆರೆಯಬೇಕೆಂಬ ಅಭಿಪ್ರಾಯವುಳ್ಳವರಾಗಿದ್ದಾರೆ. ಈಗಾಗಲೇ ನಡೆಯುತ್ತಿರುವ ಹಲವಾರು ಕೈಗಾರಿಕೆಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚಾಗಿ ಸರ್ಕಾರದ ಬಂಡವಾಳ ಬಿದ್ದಿದೆ. ಕೆಲವು ಕೈಗಾರಿಕೆಗಳು ಸಂಪೂರ್ಣವಾಗಿ ಸರ್ಕಾರದವರ ಹಿಡಿತದಲ್ಲೇ ಇವೆ. ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗೆ ನಮ್ಮ ಮುಖ್ಯ ಮಂತ್ರಿಗಳೇ ಛೇರ್ಮನ್ನರಾಗಿದ್ದಾರೆ. ಇನ್ನು ಕೆಲವಾರು ಕಾರ್ಖಾನೆಗಳಿಗೆ ಅವರು ಛೇರ್ಮನ್ ಆಗಿರದಿದ್ದಾಗ್ಯೂ ಅವರ ಸಂಪೂರ್ಣ ಹಿಡಿತದಲ್ಲಿರುತ್ತವೆ. ಈಗಾಗಲೇ ನಾವು ಬಂಡವಾಳ ಹಾಕಿರತಕ್ಕ ಮತ್ತು ನಮ್ಮ ಹಿಡಿತದಲ್ಲಿರತಕ್ಕ ಕೈಗಾರಿಕೆಗಳಲ್ಲಿ ಯಾವು ಯಾವುದಕ್ಕೆ ಎಷ್ಟೆಷ್ಟು ಬಂಡವಾಳ ಹಾಕಲಾಗಿದೆ; ಅವುಗಳೆಲ್ಲಿ ವಭಿವೃದ್ಧಿಸ್ಥಿತಿಯಲ್ಲಿ ಮುಂದುವರಿಯುತ್ತಿವೆಯೇ ನಾವು ಹಾಕಿರತಕ್ಕ ಬಂಡವಾಳಕ್ಕೆ ತಕ್ಕಂತೆ ನಾವು ನಿರೀಕ್ಷಿಸಿದ್ದ ಮಟ್ಟದಲ್ಲಿ ಅವುಗಳಿಂದ ನಮ್ಮ ಸರ್ಕಾರಕ್ಕೆ ಉತ್ಪತ್ತಿ ಬರುತ್ತಿದೆಯೇ ಎನ್ನತಕ್ಕ ಅಂಶಗಳೊಂದನ್ನೂ ಸರ್ಕಾರ ಮನಸ್ಸಿಟ್ಟು ಸರಿಯಾಗಿ ಗಮನಿಸುತ್ತಿಲ್ಲವೆಂದು ಕಾಣುತ್ತಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಶಾಖೆಯ ಸಚಿವರು).—ಮಾನ್ಯ ಸದಸ್ಯರು ಯಾವ ಡಿಮ್ಯಾಂಡಿನ ಮೇಲೆ ಮಾತನಾಡುತ್ತಾರೋ ಆ ಡಿಮ್ಯಾಂಡಿನಲ್ಲಿರತಕ್ಕ ಮುಖ್ಯಾಂಶದ ಮೇಲೆ ಮಾತನಾಡುವುದು ಸರಿಯಾದುದೆಂದು ಕಾಣುತ್ತದೆ.

ಶ್ರೀ ಟಿ. ಎನ್. ಮುಡಲಗಿರಿ ಗೌಡ.—ಹೌದು. ನಾನು ಈಗ 49ನೆಯ ಡಿಮ್ಯಾಂಡನ್ನು ಪ್ರಸ್ತಾಪಿಸುತ್ತಿರುವೆ. ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್‌ನಲ್ಲಿ ಈಗ ಸರ್ಕಾರದ ಬಂಡವಾಳವನ್ನು ಹಾಕಲು ಹೋಗುತ್ತಿದ್ದೇವೆ. ಇಂಥ ಸಂದರ್ಭದಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂಬುದನ್ನು ಹೇಳುತ್ತಿದ್ದೇನು. ಆದರೆ ನಾನೀಗ ಸರ್ಕಾರದವರಿಗೆ ಖಾಸಗೀ ಕೈಗಾರಿಕೆಗಳಲ್ಲಿ ತಮ್ಮ ಬಂಡವಾಳವನ್ನು ಹಾಕ ಬೇಡಿ ಎಂದು ಹೇಳುತ್ತಿಲ್ಲ. ಆದರೆ ಈ ದಿವಸ ಸರ್ಕಾರದವರು ನಡೆಸುತ್ತಿರುವ ಇಂಡಸ್ಟ್ರೀಸ್‌ಗೂ ಮತ್ತು ಖಾಸಗೀ ಜನರು ನಡೆಸುತ್ತಿರುವ ಇಂಡಸ್ಟ್ರೀಸ್‌ಗೂ ಏನು ವ್ಯತ್ಯಾಸವಿದೆಯೆಂಬುದನ್ನು ಸರ್ಕಾರದವರು ಹೆಚ್ಚು ಗಮನವಿಟ್ಟು ನೋಡಬೇಕಾಗಿದೆ. ಈ ದಿವಸ ನಾವು ಸರ್ಕಾರದ ಹಿಡಿತದಲ್ಲಿರುವ ಯಾವುದೇ ಒಂದು ಕೈಗಾರಿಕೆಯನ್ನೇ ತೆಗೆದುಕೊಳ್ಳಲಿ ಆ ಭದ್ರಾವತಿ ಕಾರ್ಖಾನೆ, ನಮ್ಮ ಸಿಲ್ಕ್ ಕಾರ್ಖಾನೆ ಸೋಪು ಇತ್ಯಾದಿ ಅನೇಕ ಕಾರ್ಖಾನೆಗಳಲ್ಲಿ ಸರ್ಕಾರದ ಬಂಡವಾಳ ಹಾಕಿದೆ. ಆದರೆ ಈ ವರೆಗೆ ಈ ಅನೇಕ ಕಾರ್ಖಾನೆಗಳಿಗೆ ಸರ್ಕಾರ ಹಾಕಿರತಕ್ಕ ಬಂಡವಾಳವೆಷ್ಟು, ಅಲ್ಲಿ ಕೆಲಸ ಮಾಡತಕ್ಕ ಸಿಬ್ಬಂದಿಯೇನು ; ಅಲ್ಲಿರತಕ್ಕ staff ಎಷ್ಟು, ಆ ಕಾರ್ಖಾನೆಗಳಲ್ಲಿ ಪ್ರೊಡಕ್ಷನ್ ಯಾವ ಮಟ್ಟದಲ್ಲಾಗುತ್ತಿದೆ, ಅವುಗಳಿಂದ ನಮಗೆ ಬರುತ್ತಿರುವ ಉತ್ಪತ್ತಿಯೇನು, ವೆಚ್ಚವೇನು, ಯಾವ ಸೆಕ್ಷನ್ನಿನಲ್ಲಿ ನಮಗೆ ಹೆಚ್ಚು ಪ್ರಯೋಜನವಾಗುತ್ತಿದೆ, ಯಾವ ಸೆಕ್ಷನ್ನಿನಿಂದ ನಮಗೆ ಲುಕ್ಸಾನಾಗುತ್ತಿದೆ, ಹಾಗೆ ಆ ಸೆಕ್ಷನ್ನಿನಲ್ಲಿ ಲುಕ್ಸಾನಾಗುವುದಕ್ಕೆ ಕಾರಣವೇನು, ಆ ಕಾರ್ಖಾನೆಗಳಲ್ಲಿ ರತಕ್ಕ ಅಧಿಕಾರಿ ಸರಿಯಾಗಿ ಕೆಲಸ ಮಾಡುತ್ತಿದ್ದಾನೆಯೇ, ಇಲ್ಲವೇ ಎನ್ನುವುದನ್ನೂ, ಪ್ರತಿಯೊಬ್ಬ ಅಧಿಕಾರಿಗೂ work load ಸರಿಯಾಗಿ ಫಿಕ್ಸ್ ಮಾಡಲ್ಪಟ್ಟಿದೆಯೇ, ಆ ನಿಬಂಧನೆಗಳಿಗೆ ಅನುಸಾರವಾಗಿ ಅವರು ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆಯೇ ಎನ್ನತಕ್ಕ ಈ ವಿಚಾರಗಳಲ್ಲಿ ಸರ್ಕಾರದವರು ಸಾಕಷ್ಟು ನಿಗಾವಹಿಸದಿದ್ದರೆ ಏನೂ ಪ್ರಯೋಜನವಿಲ್ಲ. ನಮಗೆ ಯಾವ ಯಾವ ಮಿಲ್‌ಗಳಲ್ಲಿ ಎಷ್ಟೆಷ್ಟು ಉತ್ಪತ್ತಿ ಆಗುತ್ತಿದೆ, ಎಷ್ಟೆಷ್ಟು ಲಾಭವಾಗುತ್ತಿವೆ ಎಂಬುದರ ಕಡೆಗೆ ಸರ್ಕಾರದವರು ಸರಿಯಾಗಿ ನಿಗಾ ಕೊಡದೆ ಹೋದರೆ ಜನರ ಮನಸ್ಸಿನಲ್ಲಿ ಈ ಸರ್ಕಾರ ನಡೆಸತಕ್ಕ ಕೈಗಾರಿಕೆಗಳ ಬಗ್ಗೆ ಅಷ್ಟಾಗಿ ಅಭಿಮಾನ ವಿರಲಾರದು. ಅಂಥ ಒಂದು ಸನ್ನಿವೇಶ ಒದಗಲು ಸರ್ಕಾರದವರು ದಾರಿ ಕೊಡಬಾರದು. ಸರ್ಕಾರ ಈ ದಿವಸ ಒಂದು ಪೇಪರ್ ಮಿಲ್ಲೇ ಆಗಲೀ ಸಕ್ಕರೆ ಕಾರ್ಖಾನೆಯೇ ಆಗಲೀ ಅಥವಾ ಒಂದು ಕೋ-ಆಪರೇಟೀವ್ ಇನ್‌ಸ್ಟಿಟ್ಯೂಟ್ ಆಗಲಿ-ಇವುಗಳಲ್ಲಿ ಆಗತಕ್ಕ ಉತ್ಪತ್ತಿಯನ್ನು ಹೆಚ್ಚಿಸದೆ ಹೋದರೆ ಇದರಿಂದ ದೇಶಕ್ಕೆ ಬಹಳ ಧಕ್ಕೆಯುಂಟಾಗುತ್ತದೆ. ಆದುದರಿಂದ ಈ ವಿಚಾರಕ್ಕೆ ಸರ್ಕಾರದವರು ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ.

ಸ್ವಾಮಿ, ಇನ್ನು ಈ 51ನೆಯ ಡಿಮ್ಯಾಂಡಿನ ಬಗ್ಗೆ ನಾನಿಷ್ಟೇ ಹೇಳುತ್ತೇನೆ: 1956ನೆಯ ಇಸವಿಯಿಂದಲೂ ದೇಶದಲ್ಲಿರತಕ್ಕ ಅನೇಕ ರಸ್ತೆಗಳಲ್ಲಿ ಅದರಲ್ಲೂ ಬಹಳ ಮುಖ್ಯವಾಗಿದ್ದು, ಅಸ್ಫಾಲ್ಟ್ ಮಾಡಿರತಕ್ಕಂಥ ನ್ಯಾಷನಲ್ ಹೈವೇಸ್‌ಗೂ ಸಹ ಈ ದಿವಸ ಒಂದೊಂದು ಮೊಳದುದ್ದ ಗುಂಡಿಗಳು ಬಿದ್ದು ಅಲ್ಲಿ ಗಾಡಿ ಸಹ ತಿರುಗಾಡುವುದಕ್ಕೆ ಸಾಧ್ಯವಿಲ್ಲದಷ್ಟು ಕೆಟ್ಟು ಹೋಗಿವೆ. ಅದೇ ರೀತಿ ಇನ್ನುಳಿದ ಮಾರ್ಕೆಟಿಂಗ್ ರೋಡುಗಳೂ ಮತ್ತು ಇತರ ರಸ್ತೆಗಳಿಗೊಂದಕ್ಕೂ ರಿಪೇರಿಯೇ ಆಗಿಲ್ಲ. ಆದರೆ ಈ ಡಿಮ್ಯಾಂಡಿನ ಮೇಲೆ ಮಾತನಾಡುವಾಗ ಯಾವಯಾವ ರಸ್ತೆಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಎಷ್ಟೆಷ್ಟು ಹಣವನ್ನೊದಗಿಸಬೇಕು, ಯಾವುದು ಬಹಳ ಮುಖ್ಯವಾದ ರಸ್ತೆ, ಯಾವ ಯಾವ ಭಾಗದಲ್ಲಿ ಹೆಚ್ಚಿಗೆ ರಸ್ತೆಗಳ ಕೆಲಸವಾಗಬೇಕು ಎನ್ನತಕ್ಕದ್ದೆಲ್ಲ ಒಂದು ಆಡಳಿತ ನೀತಿಗೆ ಸಂಬಂಧ ಪಟ್ಟ ಕೆಲಸವಾಗಿದೆ ಎಂಬುದನ್ನು ಗಮನಿಸಿ ಮಾತನಾಡಬೇಕಾಗಿರುತ್ತದೆ. ಆ ಒಂದು ದೃಷ್ಟಿಯಿಂದ ಈಗ ಕೆಲವು ರಸ್ತೆಗಳಿಗೆ ಇಲ್ಲಿ ಹಣವನ್ನೊದಗಿಸಿರುವುದು—ಅದರಲ್ಲೂ ಸಪ್ಲಿಮೆಂಟರಿ ಗ್ರ್ಯಾಂಟ್ ರೂಪದಲ್ಲಿ ಸರಿಯಾದುದಲ್ಲವೆಂದೇ ಹೇಳಬೇಕಾಗಿದೆ. ಈಗ ಇಲ್ಲಿ ಕೊಟ್ಟಿರತಕ್ಕ ನೋಟಿನಲ್ಲಿ ಆಂಧ್ರ ಸರ್ಕಾರದಿಂದ ಒಂದು ರಸ್ತೆ ನಮ್ಮ ಸರ್ಕಾರಕ್ಕೆ ತೆಗೆದುಕೊಳ್ಳಲಾಯಿತೆಂದು ಹೇಳಿದೆ. ಆದರೆ ಆ ರಸ್ತೆಯೇನು ನ್ಯಾಷನಲ್ ಹೈವೇನೇ, ಅದು ನಮ್ಮ ಸರ್ಕಾರಕ್ಕೆ ಬಂದದ್ದು ಯಾವಾಗ, ಆ ರಸ್ತೆ ಕೆಲಸ

ವನ್ನು ಎಂದು ಪ್ರಾರಂಭಿಸಲಾಯಿತು, ಈ ಕಾರ್ಯವನ್ನು ಈ ಮೊದಲೇ ಬಡ್ಜೆಟ್ಟಿನಲ್ಲೇಕೆ ಸೇರಿಸಲಿಲ್ಲ? That I want to know. ಈ ರಸ್ತೆ ಹಾಗೊಂದು ವೇಳೆ ನ್ಯಾಷನಲ್ ಹೈವೇ ಆಗಿದ್ದರೆ ರೆಗ್ಯುಲರ್ ಬಡ್ಜೆಟ್ಟಿನಲ್ಲೇ ಏತಕ್ಕೆ ಸೇರಿಸಲಿಲ್ಲ! ಈ ದಿವಸ P.W.D ಅವರು ಅವರ ಸುಪರ್ದಿನಲ್ಲಿರತಕ್ಕ ರಸ್ತೆಗಳಿಗೆ ಎಷ್ಟರ ಮಟ್ಟಿಗೆ ನಿಗಾ ಕೊಡುತ್ತಿದ್ದಾರೆಂಬ ಮಾತು ಹಾಗಿರಲಿ, ಆದರೆ ಕೆಲವು P.W.D. ರಸ್ತೆಗಳು ಜಿಲ್ಲಾ ಬೋರ್ಡ್ ರಸ್ತೆಗಳಿಗಿಂತ ತೀರಾ ಹೀನ ಸ್ಥಿತಿಯಲ್ಲಿರುತ್ತವೆ. ಈ ರಸ್ತೆಗಳಿಗೆ ಬಡ್ಜೆಟ್ಟಿನಲ್ಲಿ ಹಣವನ್ನೊದಗಿಸದಿದ್ದರೂ ಆ ರಸ್ತೆಗಳ ರಿಪೇರಿ ನಡೆಸದೆ ಇರುವುದಕ್ಕೆ ಕಾರಣವಾದರೂ ಏನು! ಸರ್ಕಾರದವರು ರಸ್ತೆಗಳನ್ನು ಒಳ್ಳೆಯ ಸ್ಥಿತಿಯಲ್ಲಿಟ್ಟುಕೊಂಡಿದ್ದರೆ ಅದಕ್ಕೆ ಅವರು ಎಷ್ಟು ಹಣಬೇಕಾದರೂ ತೆಗೆದುಕೊಳ್ಳಲಿ ಎನ್ನಬಹುದಾಗಿತ್ತು. ಕೆಲಸ ನಡೆಸುವ ಸ್ಥಿತಿಯಲ್ಲಿದ್ದರೆ ಇನ್ನೂ ಹೆಚ್ಚು ಹಣ ಕೊಡಬಹುದು. ಆದರೆ ಆ ರೀತಿ ಕೆಲಸಗಳನ್ನೇನೂ ಮಾಡದೆ ಈ ರೀತಿಯಾಗಿ ಸಪ್ಲಿಮೆಂಟರಿ ಗ್ರಾಂಟುಗಳನ್ನು ತರುವುದು ಸರಿಯಾದುದಲ್ಲ. ಈಗಲಾದರೂ ಶ್ರೀಮಾನ್ ಚನ್ನಬಸಪ್ಪನವರು ದೇಶದಲ್ಲಿರತಕ್ಕ ಎಲ್ಲ ರಸ್ತೆಗಳನ್ನು ಶೀಘ್ರವಾಗಿಯೇ ಉತ್ತಮಪಡಿಸುತ್ತಾರೆಂದು ನಂಬಿದ್ದೇನೆ.

6 P.M.

ಸರ್ಕಾರದವರು ಈ ಸಪ್ಲಿಮೆಂಟರಿ ಡಿಮ್ಯಾಂಡುಗಳನ್ನು ಕೇಳಿರುವುದು, ಹಿತವಾಗಿದೆ, ಸೂಕ್ತವಾಗಿದೆ, ನ್ಯಾಯಬದ್ಧವಾಗಿದೆ ಎಂದು ಹೇಳಿ ನಾನು ಈ ಸಪ್ಲಿಮೆಂಟರಿ ಡಿಮ್ಯಾಂಡುಗಳನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆ.

†ಶ್ರೀ ಎಚ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಸ್ವಾಮಿ ಈಗಾಗಲೇ ಬಹುಶಃ ನಮ್ಮ ಟ್ರೆಜರಿ ಬೆಂಚಿನ ಅನೇಕ ಸದಸ್ಯರು ನಮ್ಮ ಮುಂದೆ ಇಟ್ಟಿರತಕ್ಕಂಥ ಅಡಿಷನಲ್ ಡಿಮ್ಯಾಂಡ್ಸ್ ವಿಷಯದಲ್ಲಿ ಮಾತನಾಡಿದ್ದಾರೆ. ಆ ರೀತಿ ಮಾತನಾಡುವಾಗ ನನ್ನ ಮಿತ್ರರಾದ ಶ್ರೀಮಾನ್ ಮೂಡಲಗಿರಿ ಗೌಡರು ಬಹಳ ಸ್ವಾರಸ್ಯವಾಗಿ ಹೇಳಿದರು. ಅದನ್ನು ನಾನು ತಿಳಿದುಕೊಳ್ಳಬೇಕಾಗಿತ್ತೋ ಏನೋ ಗೊತ್ತಿಲ್ಲ. ಅವರು ಕಾಂಟಿಂಜೆಂಟ್ ಡಿಮ್ಯಾಂಡ್‌ನಲ್ಲಿ ಸುಮಾರು 1 ಕೋಟಿ 35 ಲಕ್ಷ ರೂಪಾಯಿಗಳಷ್ಟು ಅಡಿಷನಲ್ ಗ್ರಾಂಟು ಇದೆಯೆಂದು ಹೇಳಿದರು. ಅರ್ಥ ಸಚಿವರು ನಮ್ಮ ಮುಂದೆ ಇಟ್ಟಿರತಕ್ಕ ಪ್ರತಿಯೊಂದು ಡಿಮ್ಯಾಂಡಿನ ಬಗ್ಗೆ ಯಾವ ಕಾಂಟಿಂಜೆಂಟ್ ಡಿಮ್ಯಾಂಡಿನಲ್ಲಿ ಅವನ್ನು ಟ್ರಾನ್ಸ್‌ಫರ್ ಮಾಡುತ್ತಾರೆ, ಅದರ ಚರಿತ್ರೆಯೇನು, ಅದರಲ್ಲಿ ಏನಾದರೂ ಉಳಿದಿದೆಯೇ ಎಂಬುದನ್ನು ಯೋಚನೆ ಮಾಡಬೇಕು. ಬಹುಶಃ ಶ್ರೀ ಮೂಡಲಗಿರಿ ಗೌಡರು ನಮ್ಮ ಮುಂದೆ ಇಟ್ಟಿರತಕ್ಕ ಡಿಮ್ಯಾಂಡ್‌ಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲವೆಂದು ನನ್ನ ಮನಸ್ಸಿಗೆ ಭಾವನೆಯಾಗಿದೆ. ನಮ್ಮ ಮುಂದೆ 1959 ನೆಯ ಇಸವಿಯಲ್ಲಿ ಬಡ್ಜೆಟ್ ಮಂಡಿಸುವ ಕಾಲದಲ್ಲಿ 40 ಲಕ್ಷದಿಂದ ಸರ್ಪ್ಲಸ್ ಬಡ್ಜೆಟ್ ಆಗಿದೆಯೆಂದು ಹೇಳಿದರು. ಬಹುಶಃ ಯಾವ ಯಾವ ಬಾಬಿನಲ್ಲಿ ಇಷ್ಟು ಸಪ್ಲಿಮೆಂಟರಿ ಡಿಮ್ಯಾಂಡುಗಳನ್ನು ಹೇಗೆ ಅಡ್ಜಸ್ಟ್‌ಮೆಂಟ್ ಮಾಡಿದ್ದಾರೆ ಎನ್ನುವ ವಿಷಯದಲ್ಲಿ ಆರ್ಥಿಕ ಸಚಿವರು ಒಂದು ಸ್ಟೇಟ್‌ಮೆಂಟನ್ನು ಕೊಡಬೇಕಾಗಿತ್ತು. ಆದರೆ ಈಗ ನಮ್ಮ ಮುಂದೆ ಯಾವ ರೀತಿ ಈ ಸಪ್ಲಿಮೆಂಟರಿ ಡಿಮ್ಯಾಂಡ್‌ಗಳನ್ನು ಇಟ್ಟಿದ್ದಾರೆಂಬುದಕ್ಕೆ ಯಾವ ಒಂದು ಹಿಸ್ಟರಿಶೀಟ್ ಮಾಡಿಲ್ಲ, ಒಂದು ಸ್ಟೇಟ್‌ಮೆಂಟ್ ಕೂಡ ಮಾಡಿಲ್ಲ. ಕಣ್ಣು ಮುಚ್ಚಾಲೆ ಆಡುವ ರೀತಿಯಲ್ಲಿ ಈ ಸಭೆಯ ಮುಂದೆ ಇಟ್ಟಿದ್ದಾರೆ. ಇದಕ್ಕೆ ಹಿಂದಿನ ಹಿಸ್ಟರಿ ಇಲ್ಲ. ಎಲ್ಲಾ ನ್ಯೂ ಪಾಲಿಸಿ, ನ್ಯೂ ಸರ್ವಿಟ್ ಎಂದು ಹೇಳಿದ್ದಾರೆ. ಯಾವ ಐಟಂನಲ್ಲಿ ಯಾವ ಅಮೌಂಟನ್ನು ಖರ್ಚು ಮಾಡುತ್ತಾರೆಂಬುದಾಗಿ ಇಟ್ಟಿದ್ದಾರೆಂಬುದು ಇದರಲ್ಲಿ ಸರಿಯಾಗಿಲ್ಲ; ಅರ್ಥವಿಲ್ಲ. ಈ ಡಿಮ್ಯಾಂಡ್‌ಗಳನ್ನು ಈ ಸಭೆಯಲ್ಲಿಡುವುದಕ್ಕೆ ಮುಂಚೆಯೇ ಆ ವಿಷಯವನ್ನು ಆ ರೀತಿ ತಿಳಿಸಿಲ್ಲ. ಆದರೆ ನಾನು ಇದರಲ್ಲಿನ ಅನೇಕ ಡಿಮ್ಯಾಂಡುಗಳನ್ನು ಖಂಡಿತ ಒಪ್ಪುವುದಿಲ್ಲ. ಅನೇಕ ಅಂಕಿ ಅಂಶಗಳನ್ನು ಈ ಫೈನಾನ್ಸಿಯಲ್ ಸ್ಟೇಟ್‌ಮೆಂಟಿಗೆ ಸಂಬಂಧಪಟ್ಟವರು ಈ ಡಿಮ್ಯಾಂಡ್‌ಗಳಿಗೆ ಸಂಬಂಧಪಟ್ಟಂತೆ ಈ ಸಭೆಯ ಮುಂದೆ ಇಟ್ಟಿಲ್ಲ. ಈ ರೀತಿ ಆಡಳಿತ ದೃಷ್ಟಿಯಿಂದ ಸರ್ಕಾರದವರು ಖರ್ಚು ಮಾಡುವ ಈ ಡಿಮ್ಯಾಂಡುಗಳ ಮೊಬಲಗಿಗೆ ನಾನು ಖಂಡಿತ ಒಪ್ಪುವುದಿಲ್ಲ. ಇದರ ಬ್ಯಾಕ್ ಗ್ರೌಂಡು ಏನಿದೆ ಎಂಬುದನ್ನು ಹೇಳದೆ ಕೆಲವು ಡಿಮ್ಯಾಂಡ್‌ಗಳನ್ನು ಈಗ ನಮ್ಮ ಮುಂದೆ ಇಟ್ಟು ಈ ಎಲ್ಲ ಡಿಮ್ಯಾಂಡ್‌ಗಳನ್ನು ಒಪ್ಪಿಕೊಳ್ಳಿ ಎಂದು ಹೇಳಿದರೆ ಹೇಗೆ? ಈ ತರಹ ಡಿಮ್ಯಾಂಡುಗಳನ್ನು ಖಂಡಿತವಾಗಿ ಇಡಬಾರದು. ಯಾವ ಯಾವ ಮೊಬಲಗು ಯಾವ ಯಾವ ಹೆಸರಿನಲ್ಲಿ ಎಷ್ಟೆಷ್ಟು ಖರ್ಚಾಗಿದೆ, ಎಷ್ಟೆಷ್ಟು ಸರ್ಪ್ಲಸ್ ಆಗಿದೆ ಯೆಂಬುದನ್ನು ನಮ್ಮ ಮುಂದೆ ಇಟ್ಟಿಲ್ಲ. ಈ ಸರ್ಪ್ಲಸ್ ಡಿಮ್ಯಾಂಡುಗಳನ್ನು ಸಂಪೂರ್ಣವಾಗಿ ಒಪ್ಪುವುದಕ್ಕಾಗುವುದಿಲ್ಲ. ಇನ್ನು ಮುಂದೆ ಈ ರೀತಿ ಮಾಡಬಾರದು.

ಇನ್ನು ಡಿಮ್ಯಾಂಡ್ ನಂಬರ್ 24. ಇದರಲ್ಲಿ ಐಟಂ ನಂಬರ್ 2ರಲ್ಲಿ 5 ಲಕ್ಷ 50 ಸಾವಿರ ರೂಪಾಯಿಗಳನ್ನು ಖರ್ಚುಮಾಡಬೇಕೆಂದಿದ್ದೀರಿ. ಆ ರೀತಿ ಖರ್ಚು ಮಾಡುವ ಸಂದರ್ಭದಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಕಮಿಷನರಿಂದ ನಮಗೇನಾದರೂ ಪ್ರೋಗ್ರೆಸ್ಸಿವ್ ರಿಪೋರ್ಟ್ ಬಂದಿದೆಯೇ, ಅಡಿಷನಲ್ ಗ್ರಾಂಟು ಕೊಡುವಾಗ ಡ್ರಿಂಕಿಂಗ್ ವಾಟರ್‌ವೆಲ್ಸ್, ಅಗ್ರಿಕಲ್ಚರಲ್ ಕಾಲೊನೀಸ್, ಎಲ್ಲೆಲ್ಲಿ ಮಾಡುತ್ತಾರೆಂಬುದಕ್ಕೆ ಏನಾದರೂ ಪ್ರೋಗ್ರಾಂ ಇದೆಯೇ ಎಂಬುದನ್ನು ನೋಡಬೇಕು. ಈಗ ಈ ಸಂದರ್ಭದಲ್ಲಿ ಖರ್ಚು ಮಾಡುವ ಆವಶ್ಯಕತೆಯೇನು? ಹಿಂದಿನ ಬಡ್ಜೆಟ್ಟಿನಲ್ಲಿ ಈ ಬಾಬಿಗೆ ಮಂಜೂರು ಮಾಡಿದ್ದ ಮೊಬಲಗಿನಲ್ಲಿ ಎಷ್ಟು ಉಳಿದಿದೆ, ಎಷ್ಟು ಖರ್ಚಾಗಿದೆ ಎಂಬುದನ್ನು ನಮ್ಮ ಮುಂದೆ ಹೇಳಬೇಕಾಗಿತ್ತು. ಅದು ನಮ್ಮ ಮುಂದೆ ಇಲ್ಲ. ಕೆಲವು ಅಂಕಿ ಅಂಶಗಳಿಂದ ಇವೊತ್ತಿನ ದಿವಸ 11 ಲಕ್ಷ 50 ಸಾವಿರ ರೂಪಾಯಿಗಳನ್ನು ಖರ್ಚುಮಾಡಲು ನಮ್ಮ ಒಪ್ಪಿಗೆಗಾಗಿ ಈ ಸಭೆಯಲ್ಲಿ ನಮ್ಮ ಮುಂದೆ ಇಟ್ಟಿದ್ದಾರೆ. ಯಾವ ಕಾಂಟಿಂಜೆಂಟ್ ಫಂಡ್, ಪ್ರೋಗ್ರೆಸ್ ಏನು ಮಾಡಿದ್ದಾರೆ, ಯಾವ ಯಾವ ಐಟಂಗೆ ಎಷ್ಟೆಷ್ಟು ಖರ್ಚಾಗುತ್ತಿದೆ, ಎಷ್ಟೆಷ್ಟು ಉಳಿದಿದೆ ಎಂಬುದನ್ನೆಲ್ಲಾ ನಮ್ಮ ಮುಂದೆ ವಿಶದವಾಗಿ ಮಂಡಿಸಿದ್ದರೆ, ನಮಗೆ ನಿಜವಾಗಿ ಸಮಾಧಾನವಾಗುತ್ತಿತ್ತು. ಆಗ ಸಂಬಂಧಪಟ್ಟ ಮಂತ್ರಿಗಳು ಕೇಳುವುದೂ ನ್ಯಾಯವಾಗುತ್ತಿತ್ತು. ಇಷ್ಟು ಕೆಲಸವನ್ನು ಮಾಡಬೇಕಾಗಿತ್ತು. ಅಷ್ಟು ಕೆಲಸವನ್ನು ಮಾಡಲಿಕ್ಕಾಗಲಿಲ್ಲವೆಂದು ಇಲ್ಲಿ ಹೇಳಬೇಕಾಗಿತ್ತು. ಆ ರೀತಿ ಹಿಸ್ಟರಿ ಕೊಟ್ಟಿಲ್ಲ. ಆದುದರಿಂದ ಈ ಬಾಬಿಗೆ ಖರ್ಚು ಮಾಡುವುದು ನನಗೆ ಅಸಮಾಧಾನ.

ಇನ್ನು ಡಿಮ್ಯಾಂಡ್ ನಂಬರ್ 38. ಈ ವಿಷಯದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಯಾವುದಕ್ಕೆ ಹಣವನ್ನು ಒದಗಿಸದಿದ್ದರೂ ಈ ಬಾಬಿಗೆ ಹೆಚ್ಚಿಗೆ ಹಣವನ್ನೊದಗಿಸಬೇಕು. ಫ್ಲಡ್ಸ್‌ನಿಂದ ಜನರಿಗೆ

(ಶ್ರೀ ಎಚ್. ಜಿ. ನರಸಿಂಹೇಗೌಡ)

ವಿಶೇಷವಾಗಿ ಅನ್ಯಾಯವಾಗಿದೆ. ಇದರಿಂದ ಅನೇಕ ಸಂಸಾರಗಳೇ ಹಾಳಾಗಿವೆ. ಹಿಂದಿನ ಎರಡು ತಿಂಗಳುಗಳ ಮಳೆಗಾಲದಲ್ಲಿ ಮೈಸೂರು ಸಂಸ್ಥಾನದಲ್ಲಿ ಆಗಿರತಕ್ಕ ಅನ್ಯಾಯ, ನಷ್ಟಗಳನ್ನು ವಿವರಿಸಿ ಹೇಳುವುದಾದರೆ ನನಗೆ ಬಹಳ ಸಂಕಟವಾಗುತ್ತದೆ. ಅನೇಕ ದೊಡ್ಡ ದೊಡ್ಡ, ಚಿಕ್ಕ ಚಿಕ್ಕ ಸಂಸಾರಗಳೆಲ್ಲಾ ಹಾಳಾಗಿ ಹೋಗಿವೆ. ಅನೇಕ ಆಸ್ತಿ ಪಾಸ್ತಿಗಳು ನಷ್ಟವಾಗಿವೆ. ಈಗ ನೀವು ಈ ಬಾಬಗೆ ಒದಗಿಸಿರುವುದು ಕೇವಲ 92 ಸಾವಿರ ರೂಪಾಯಿಗಳು. ಅದು ನಿಜವಾಗಿಯೂ ಸಾಲದು. ನಿಮ್ಮ ಪೈಕಿ, ಅದರಲ್ಲೂ ನಿಜವಾಗಿ ಮಂತ್ರಿಗಳಿರುವ ಕ್ಷೇತ್ರಗಳ ಕಡೆ ಫ್ಲಡ್ಸ್ ಹೆಚ್ಚಿಗೆ ಬಂದು, ಅವರು ಅಂತಹ ಸ್ಥಳಗಳನ್ನು ಬಿಟ್ಟು ಹೆಡ್ ಕ್ವಾರ್ಟರ್ಸಿನಲ್ಲಿ ಬಂದು ಇರುವಂತಹ ಪರಿಸ್ಥಿತಿ ಉಂಟಾಗಿದ್ದ ಪಕ್ಷದಲ್ಲಿ, ನಿಜವಾಗಿ ಅದರ ಆಗು ಹೋಗುಗಳನ್ನು ತಿಳಿದುಕೊಂಡು, ಕಷ್ಟ ನಷ್ಟಗಳ ಅರಿವಾಗಿ, ಏನು ಮಾಡಬೇಕೆಂದು ಹೇಳುತ್ತಿದ್ದರೋ ನನಗೆ ಗೊತ್ತಿಲ್ಲ. ಒಟ್ಟಿನಲ್ಲಿ ಈ ಫ್ಲಡ್ಸ್‌ನಿಂದ ನಷ್ಟ 10 ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗೆ ಆಗಿದೆಯೆಂದು ನಾನು ಹೇಳುತ್ತೇನೆ. ಒಂದು ಉದಾಹರಣೆಯನ್ನು ಹೇಳಬಹುದಾದರೆ ಶಿವಮೊಗ್ಗಾಕ್ಕೆ ಕೇವಲ 20 ಸಾವಿರ ರೂಪಾಯಿಗಳನ್ನು ಮಾತ್ರ ಒದಗಿಸಿದ್ದೀರಿ. ಅದೇನೂ ಸಾಲದು. ಕೇವಲ ಒಂದು ಸಂಸಾರಕ್ಕೇ ಅಷ್ಟು ನಷ್ಟವಾಗಿದೆ. ಅನಾವಶ್ಯಕವಾಗಿ ವ್ಯಥಾ ಹಣ ಎಷ್ಟೋ ಖರ್ಚಾಗುತ್ತದೆ. ಆದರೆ ಇದರ ನಿಜಾಂಶವನ್ನು ಒಪ್ಪಿಕೊಂಡಿದ್ದೀರಿ; ಸ್ಟೇಟ್‌ಮೆಂಟ್ ಕೊಟ್ಟಿದ್ದೀರಿ. ನಿಜವಾಗಿ ಇದಕ್ಕೆ ತಕ್ಕ ರೆಮಿಡಿ ಕೊಡುತ್ತೇವೆಂದು ಹೇಳಿದ್ದೀರಿ. ಆದರೂ ಈಗ 20 ಸಾವಿರ, ಜೊತೆಗೆ ಇನ್ನಷ್ಟು 500-1,000 ರೂಪಾಯಿಗಳನ್ನಾದರೂ ಜಾಸ್ತಿ ಮಾಡಿ ಹಂಚಿದರೆ ನಿಜವಾಗಿ ಆ ಸಂಸಾರಗಳು ಮುಂದಕ್ಕೆ ಬರುತ್ತವೆ. ಅವರ ಮನೆಯಲ್ಲಿರತಕ್ಕ ಸಾಮಾನುಗಳನ್ನು ಬಿಸಾಡಿ ಎಲ್ಲೆಲ್ಲೋ ತೆರಳಿರುವಾಗ ಅವನ್ನು ಪುನಃ ಪಡೆಯಬೇಕೆಂದರೆ, ಈಗ ಒದಗಿಸಿರತಕ್ಕ ಮೊಬಲಗಿನಿಂದ ಏನಾದರೂ ಸಾಧ್ಯವೇ? ಹೊರಗಡೆಯಿಂದ ಬಂದಿರುವವರಿಗೆ ಬೇಕಾದಷ್ಟು ಸೌಕರ್ಯಗಳನ್ನು ಕೊಡುತ್ತೀರಿ. ಮನೆಗಳನ್ನು ಕೊಡುತ್ತೀರಿ. ಬಿಜಿನೆಸ್‌ಗೋಸ್ಕರ ಫೈನಾನ್ಸ್ ಕೊಡುತ್ತೀರಿ. ಉಳುಮೆಗೋಸ್ಕರ ಬೇಕಾದಷ್ಟು ಹಣವನ್ನು ಸಾಲದ ರೂಪವಾಗಿ ಕೊಡುತ್ತೀರಿ. ಈ ರೀತಿಯಲ್ಲಿ ಹೊರಗಡೆಯಿಂದ ಅಂದರೆ Out of India ಬಂದಿರುವವರಿಗೆ ಖರ್ಚು ಮಾಡುವಾಗ ಮೈಸೂರು ದೇಶದಲ್ಲಿ ಜನಗಳು ಕಷ್ಟಪಟ್ಟು ದೇಶಕ್ಕೋಸ್ಕರ ನಷ್ಟಕ್ಕೀಡಾಗಿರುವವರಿಗೆ ಕಡಮೆ ಸೌಕರ್ಯಗಳನ್ನು ಕೊಡುವುದು ನ್ಯಾಯವಲ್ಲ. ಇದನ್ನು ನೋಡಿದರೆ ನಿಜವಾಗಿ ಪ್ರಜಾಪ್ರಭುತ್ವದಲ್ಲಿ ನಿಮಗೆ ನ್ಯಾಯವಿಲ್ಲ, ನೀತಿಯಿಲ್ಲ. ಅನೀತಿ ಜಾಸ್ತಿಯಾಗುತ್ತಿದೆ, ಜನಗಳ ನೆಮ್ಮದಿಯನ್ನು ಕಾಪಾಡುವುದಕ್ಕೆ ಸರ್ಕಾರದ ಶಕ್ತಿ ಕುಂದಿದೆ. ಇವರು ನಡೆಸುತ್ತಿರುವ ಆಡಳಿತ ಕ್ರಮವನ್ನು ನೋಡುವುದಾದರೆ ಸದ್ಯದಲ್ಲಿಯೇ ಈ ಸರ್ಕಾರ ಕೆಳಗೆ ಇಳಿಯುವುದಕ್ಕೆ ಅವಕಾಶವಾಗುತ್ತದೆಯೆಂದು ನಾನು ಹೇಳಬಲ್ಲೆ.

ಕೆಲವು ಜಿಲ್ಲೆಗಳ ಬಗ್ಗೆ ಈ ಫ್ಲಡ್ಸ್ ವಿಷಯದಲ್ಲಿ ನಾನು ಹೇಳುವುದಾದರೆ, ಅನೇಕ ಕಡೆಗಳಲ್ಲಿ ವಿಪರೀತ ನಷ್ಟವಾಗಿದೆ. ಅದರಲ್ಲೂ ಹಾಸನ ಜಿಲ್ಲೆಯಲ್ಲಿ ಹೇಮಾವತಿ ನದಿಯ ಪಕ್ಕದಲ್ಲಿ ಇದರಿಂದ ಅನೇಕ ಹಳ್ಳಿಗಳು ಮುಳುಗಿ ನಾಶವಾಗಿ ಹೊರಟು ಹೋದುವು.

Sri H. M. CHANNABASAPPA.—I rise to a point of order. The matter that is being referred to by the Hon'ble Member is not relevant under any one of the demands before the House. These are supplementary demands.

Mr. SPEAKER.—The debate under supplementary demands is governed by Rule 172. The Rule 172 says 'Unless there are some variations between the original grant and this grant ....

ಶ್ರೀ ಎಚ್. ಜಿ. ನರಸಿಂಹೇಗೌಡ.—ನಾನು ಅದರ ಮೇಲೆಯೇ ಮಾತನಾಡುತ್ತಿದ್ದೇನೆ.

ಅಧ್ಯಕ್ಷರು.—ಇಲ್ಲ, ಆ ರೀತಿ ನೀವು ಮಾತನಾಡುತ್ತಿಲ್ಲ. ಪರ್ಟಿಕ್ಯುಲರ್ ಐಟಂ ಮೇಲೆಯೇ ಮಾತನಾಡುತ್ತೇನೆಂದು ಬಾಯಲ್ಲಿ ಹೇಳಿ—ಹಿಂದಿನಿಂದಲೂ ಚರ್ಚೆ ಆಗಿರುವುದನ್ನು ಇಲ್ಲಿ ಮತ್ತೊಂದಸಾರಿ ಸಭೆಯ ಗಮನಕ್ಕೆ ತರುತ್ತಿದ್ದೀರಿ. ಒರಿಜಿನಲ್ ಗ್ರಾಂಟಿನ ಮೇಲೆ ಈಗ ಮಾತನಾಡಬೇಡಿ. ಸಪ್ಲಿಮೆಂಟರಿ ಗ್ರಾಂಟಿನ ಮೇಲೆ ಮಾತ್ರ ಮಾತನಾಡಿ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಇದರ ಪೈಕಿ ಕೆಲವು ಡಿಸ್ಟ್ರಿಕ್ಟುಗಳನ್ನು ಸೇರಿಸಿಲಾಗಿದೆ. ಇದರೊಡನೆ ಹಾಸನ ಜಿಲ್ಲೆಯನ್ನೂ ಸೇರಿಸಬೇಕು. ಮುಂದೆ ಈ ರೀತಿ ತಪ್ಪು ಮಾಡಿದ್ದೆವು ಎನ್ನುವ ಹಾಗೆ ಮಾಡಬಾರದು. ಸುಮ್ಮನೆ ನಾವು ಇಲ್ಲಿ ಕುಳಿತುಕೊಂಡು ಕಣ್ಣುಮುಚ್ಚಿಕೊಂಡು "Yes" or "No" ಎನ್ನುವಂತೆ ಚರ್ಚೆ ಮಾಡುವ ಪದ್ಧತಿ ಸರಿಯಿಲ್ಲ. ಈ ರೀತಿ 98,000 ಎಂದು ಡಿಮ್ಯಾಂಡನ್ನು ತರುವುದಕ್ಕೆ ಬದಲು 97 ಲಕ್ಷ ಎಂದು ಬೇರಾದರೂ ಮಾಡಿತಂದು ಜನಗಳಿಗೆ ಅನುಕೂಲವಾಗುವ ಹಾಗೆ ಮಾಡಿದರೆ ನಿಮ್ಮ ಪ್ರಜಾಪ್ರಭುತ್ವದ ನೀತಿ ಒಳ್ಳೆಯದು ಆ ರೀತಿಯಾಗಿ ಹೆಚ್ಚು ಮಾಡಬಹುದು ಎಂದು ಇಲ್ಲಿ ಹೇಳುತ್ತೇನೆ.

ಇನ್ನು Demand No. 58 ರಲ್ಲಿ ', Advances to Local Boards and Village Panchayats Conduct of Elections ಗಾಗಿ ಎಂದಿದೆ. ಬಹುಶಃ ಡಿಮ್ಯಾಂಡು ಇರತಕ್ಕದ್ದು ದೇಶದ ಹಿತದೃಷ್ಟಿಯಿಂದ ಎಂದು ಈಗ ನಮ್ಮ ಮುಂದಿದೆ. ಸರಕಾರ ಈ ವಿಚಾರವನ್ನು ಬಹಳ ಸೂಕ್ಷ್ಮವಾಗಿ ಯೋಚನೆ ಮಾಡಬೇಕಾಗಿದೆ. ಇಲ್ಲಿ ಬಂದಿರುವ ಎಲ್ಲ ಡಿಮ್ಯಾಂಡುಗಳು ಜನಗಳ ಅನುಕೂಲಕ್ಕೋಸ್ಕರವಾಗಿ ದೇಶದ ಕೆಲಸ ಕಾರ್ಯಗಳಾಗ ಬೇಕು ಎಂದು ಬಡೆಟ್ಟನ್ನು ಮಾಡಿ ಅದಕ್ಕೆ ಸಾಲದೇಹೋದ ಮೊಬಲಗುಗಳನ್ನು ಹೆಚ್ಚಾಗಿ ತೆಗೆದುಕೊಂಡು, ದೇಶ ಮುಂದಕ್ಕೆ ಬರಬೇಕು ಎನ್ನುವ ಆಸೆಯಿಂದ ನಮ್ಮ ಫೈನಾನ್ಸ್ ಮಿನಿಸ್ಟರು ನಮ್ಮ ಮುಂದೆ ಈ ಡಿಮ್ಯಾಂಡಗಳನ್ನು ಈಗ ತಂದಿದ್ದಾರೆ. ಮೊನ್ನೆ ತಾನೇ ಸ್ಥಳೀಯ ಸಂಸ್ಥೆಗಳ ಮಂತ್ರಿಗಳು ಈ ಸ್ಥಳೀಯಸಂಸ್ಥೆಗಳು ದೇಶದ ಮೂಲಾಂಗವೆಂದು ಹೇಳಿದರು. ಇವೊತ್ತಿನ ದಿವಸ ಲೋಕಲ್ಲು ಬಾಡೀಸ್ ಮತ್ತು ಎಲ್ಲ ತಾಲ್ಲೂಕು ಬೋರ್ಡುಗಳು ಇವುಗಳಿಂದಲೇ ದೇಶ ಮುಂದೆ ಬರಬೇಕಾಗಿದೆ. ಹಾಗೆ ಲೋಕಲ್ ಬಾಡೀಸ್ ಮುಂದೆ ಬಾರದ ಹೊರತು ದೇಶ ಮುಂದಕ್ಕೆ ಬರುವುದಿಲ್ಲ ಎಂದೂ ಹೇಳಿದ್ದರು. ಈ ಸಂದರ್ಭದಲ್ಲಿ ನಮ್ಮ ಲೋಕಲ್ ಬಾಡೀಸ್ ಮಂತ್ರಿಗಳು ಹೇಳಿದ ಹಾಗೆ 10 ಲಕ್ಷ ರೂಪಾಯಿಗಳಷ್ಟು ಈ ಎಲೆಕ್ಷನ್ನಿಗಾಗಿ ಖರ್ಚು ಮಾಡಬೇಕೆಂದು ಇಲ್ಲಿ ತರಲಾಗಿದೆ. ಈ ಖರ್ಚಿನ

ಮೊಬಲಗೆಲ್ಲವನ್ನೂ ಈ ಪಂಚಾಯತಿಗಳ ಅಥವಾ ತಾಲ್ಲೂಕು ಬೋರ್ಡುಗಳ ಮೇಲೆ ಹೊರಿಸುವುದು ನ್ಯಾಯವಾದುದಲ್ಲ. ಒಂದು ಪಕ್ಷ ಹಾಗೆ ಮಾಡುವುದಾದ ಪಕ್ಷದಲ್ಲಿ ಇಲ್ಲಿ 10 ಲಕ್ಷ ರೂಪಾಯಿಗಳನ್ನು ಡಿಮ್ಯಾಂಡು ರೂಪದಲ್ಲಿ ತರುವಾಗ ಅದರೊಡನೆ reasons ಹಾಕಬೇಕಾಗಿತ್ತು. ಹಾಗಾದರೆ ಈ ಲೋಕಲ್ ಬಾಡೀಸುಗಳು ಒಂದು ಮಿತಿಯಿಂದ ಕೆಲಸ ಮಾಡಲು ಪ್ರಯತ್ನಿಸಬಹುದಾಗಿತ್ತು. ನ್ಯಾಯವಾಗಿ ಎಲೆಕ್ಷನ್ನು ಮಾಡುವುದು ದೇಶದ ಹಿತದೃಷ್ಟಿಯಿಂದ. ಇದರ ಎಲ್ಲ ಖರ್ಚನ್ನೂ ಸರಕಾರವೇ ಸಂಪೂರ್ಣವಾಗಿ ವಹಿಸಬೇಕು.

ಈಗ ಲೋಕಲ್ ಬಾಡಿಸ್ ಆಕ್ಟನ್ನು ಇಷ್ಟು ಜರೂರಾಗಿ ಪಾಸುಮಾಡಿದ್ದರೂ 10 ಲಕ್ಷ ಎಂದು ಸಪ್ಲಿಮೆಂಟರಿ ಡಿಮ್ಯಾಂಡನ್ನು ತರಬೇಕಾಗಿಲ್ಲ. ಹೇಗೆಂದರೆ, ಇವೊತ್ತಿನ ದಿವಸ ನಮ್ಮ ಮುಂದೆ ಇಟ್ಟಿರತಕ್ಕ objections, Calender of Events. ಇವನ್ನೆಲ್ಲಾ ಲೆಕ್ಕ ಹಾಕಿ ನೋಡಿದರೆ ಮಾರ್ಚಿ 31ನೆಯ ತಾರೀಖು ದಾಟುತ್ತದೆ. 1960ನೇ ಮಾರ್ಚಿ 31ನೆಯ ತಾರೀಖು ದಾಟಿದ ಮೇಲೆ ಈ ಪಂಚಾಯತಿಗಳ ಮತ್ತು ತಾಲ್ಲೂಕು ಬೋರ್ಡುಗಳ ಎಲೆಕ್ಷನ್ನುಗಳನ್ನು ನಡೆಸಬೇಕಾಗುತ್ತದೆ. ಆದುದರಿಂದ ಈ ಡಿಮ್ಯಾಂಡನ್ನು ಮಾರ್ಚಿ ತಿಂಗಳಿನಿಂದಾಚೆಗೆ ತರುವ ಬಡ್ಜೆಟ್ಟಿನಲ್ಲಿ ತರಬೇಕಾಗಿತ್ತು. ಈ ಡಿಮ್ಯಾಂಡಿನಂತೆ ನಿಜವಾಗಿಯೂ ಖರ್ಚು ಆಗುವುದಿಲ್ಲ. ಆದರಿಂದ ಇಲ್ಲಿರುವ ಈ ರೀತಿಯಾದ ಡಿಮ್ಯಾಂಡನ್ನು ಒಪ್ಪುವುದಕ್ಕಾಗುವುದಿಲ್ಲ. ಏಕೆಂದರೆ, ವಿಲೇಜು ಪಂಚಾಯತಿಗಳ ಮತ್ತು ತಾಲ್ಲೂಕು ಬೋರ್ಡುಗಳ ಎಲೆಕ್ಷನ್ನುಗಳನ್ನು ಮಾರ್ಚಿ 31ನೆಯ ತಾರೀಖಿನೊಳಗೆ ಆಗದೆ ಇರುವುದರಿಂದ ಈ ಡಿಮ್ಯಾಂಡನ್ನು ಸಂಪೂರ್ಣವಾಗಿ Round off ಮಾಡುವುದು ಉತ್ತಮ. ಇದನ್ನು ವೋಟು ಮಾಡುವ ಆವಶ್ಯಕತೆಯೂ ಇಲ್ಲ. ಮುಂದಿನ ಬಡ್ಜೆಟ್ಟಿನಲ್ಲಿ ಈ 10 ಲಕ್ಷ ರೂಪಾಯಿಗಳನ್ನು ಒದಗಿಸಿಕೊಡಿ, ಈಗ ಬೇಕಿಲ್ಲ. ಎಲೆಕ್ಷನ್ನನ್ನು ಮಾಡುವುದಕ್ಕೆ ನಿಮ್ಮ ಕೈಯಿಂದಾಗುವುದಿಲ್ಲ. ನಿಮ್ಮ ಸ್ಟೇಟುಮೆಂಟಿನ ಪ್ರಕಾರ ಜನವರಿ 15ನೆಯ ತಾರೀಖಿನೊಳಗಾಗಿ ನೀವು ಎಲೆಕ್ಷನನ್ನು ನಡೆಸುವುದಕ್ಕಾಗುವುದಿಲ್ಲ. ನೀವು ಹೇಳುವ ವಾದದಲ್ಲಿ ತಿರುಳಿಲ್ಲ. ಈ ಹತ್ತು ಲಕ್ಷ ಈಗ ಬೇಕಾಗಿಲ್ಲ. 1960-61ರ ಬಡ್ಜೆಟ್ಟಿನಲ್ಲಿ ಇದನ್ನು ತೆಗೆದುಕೊಂಡು ಬನ್ನಿ. ಈ ಟೆಂಪರರಿ ಡಿಮ್ಯಾಂಡುಗಳನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಈ ರೀತಿ ತಂದಿರತಕ್ಕದ್ದು ನ್ಯಾಯವೂ ಅಲ್ಲ, ಉಚಿತವೂ ಅಲ್ಲ.

†Sri B. R. SUNTHANKAR (Belgaum).—Mr. Speaker, Sir, I wish to make a few observations on the Supplementary Estimates that are before us. Every year Supplementary Estimates are placed before us for vote. I submit that most of the Supplementary Estimates consist of omissions, failings and lapses on the part of the Government. We are asked to vote for the failings and lapses on the part of the Government. I think the Supplementary Estimates that are before us perhaps break the record of this Government on this score. If you analyse all the estimates, you will come to know that in all there are 27 items pertaining to 12 demands. Out of these one item is charged. One item is due to insufficient provision of expenditure and 25 items belong to new services. I cannot agree with my venerable friend Sri Baliga when he tried to give a meaning to the term 'new service'. He tried to attribute a wide meaning to the term 'new service'. In parliamentary procedure the term 'new service' has got a definite meaning and a definite connotation. I may quote here one authority from the book 'Parliamentary Procedure in India' by Sri A. R. Mukherji :—

> "In respect of altogether 'new services', not provided forin the estimates, transfer is permissible only for urgent services."

Further I will quote from the book which gives an extract from the well-known parliamentary authority Durell. The extract says :

> "The Treasury admits that having placed before Parliament a list of new works, it would not hold that it had a free right to apply money to new works of any consequence, except under such urgent circumstances as it would be prepared to justify before Parliament. The Public Accounts Committee recommends that the Treasury shall exhibit the utmost jealousy to use savings for the commencement of any new work in the absence of any provision in the estimates."

Mark the words 'utmost jealousy to use the savings for the commencement of a new work.' Government ought to be more zealous and should take more precaution while placing before this House the new items of work—new services.

Sir, out of these 27 items, most of them could have been anticipated, foreseen and premeditated while bringing the budget before the House. The least I can say is, it is a faulty budget and the sooner Government improves upon this, the better. Budget is planned and co-ordinated in advance. So, in this matter the Government should be more cautious while placing the demands for new services. Now, I will come to demand No. 2, items 1 and 2.

(SRI B. R. SUNTHANKAR)

My friend Sri Narasimhan referred to these items : the Inams Abolition Act-Compensation to be given and made remarks. This Act was passed as far back as 1955. This item, as a matter of fact, should have been included in the original Budget.

Sri J. H. SHAMSUDDIN (Deputy Minister for Finance).—The Budget for 1959 is over.

Sri B. R. SUNTHANKAR.—But, this measure was passed four years back. Government was not sleeping over this matter. This is a serious lapse and it does not speak good of the financial administration of the Government. Similarly, items 3 and 4 on page 5 could have been foreseen and anticipated.

Coming to Demand 22—drainage work in Gulbarga and Raichur—much has been said about this item. This was created in August 1958. This item was not contemplated at the time of framing the budget. This seems to have cropped up all of a sudden. This could have been easily contemplated at the time of preparing the budget. This shows lack of pre-arrangements on the part of the Government.

Then, Sir, Demand 28 on page 9, about the expenses provided for Minimum Wages Committee. Sir, this Minimum Wages Committee was formed before the budget was presented to the House and besides, it is one of the statutory obligations on the Government to institute such committees. So, this item could have been easily foreseen or contemplated at the time of framing the budget. This is also a serious omission inasmuch as the Government appoints committees and does not provide for their expenses. Such things should not recur.

[MR. DEPUTY SPEAKER in the Chair]

Sir, only item 38 can be called really a new service. Demand No. 40 is about N.E.S. Blocks and C.D. Blocks. In all, these items involve an expenditure of half a crore of rupees. That is a considerable amount. In this connection I would like to urge in the Government to pause for a moment and see whether they did not put, in any unnecessary haste, in the development of these N.E.S. and C.D. blocks. Government should think for a moment and see how the work in these blocks is going on. Government is extending these blocks. But, instead of undertaking such extensive activities, it is better that they concentrate their attention on intensive work and intensification the movement. In this respect, I would like to draw the attention of the House to one of the reports of the Estimates Committee. This Report reveals a very sad picture about the Community Development in this State. As one of the News-papers has called it, it is a damning report. The Report reveals the disheartening state of affairs regarding this movement in the State. The Report says :

" Except for a few buildings here and there, the impact of the movement is not felt by the people ". In another place they say, ' the poor man of the village has become poorer'. The Report is full of such remarks. It has made some agreeable suggestions to further the Community Development Movement in the State. Similarly about Grama Sevaks they have made some remarks. In the opinion of the Committee, many Grama Sevaks do not possess the required talent and this is because in many cases selection has been made without finding the suitability of the person ; selection should be made from the men of the department on the basis of experience and efficiency on record. So, Government should take all precautionary measures to appoint proper men for the proper job. Government should select proper men for training. Haste in the matter would deteriorate the movement and the very purpose of the movement would be defeated. Sir, there are four or five centres of training and the expenditure on their account could have been easily contemplated at the time of framing the budget.

Coming to Demand 46, page 12, much has been said about this item. My Hon'ble friend Sri Puttaramiah has at some length dealt with this matter. But, perhaps, he did not know the real

secret. So, I would disclose the real secret to Sri Puttaramiya and it is this. The tank belongs to a taluka from which the Deputy Minister for Public Works comes and not only that, it is his own constituency.

6-30 P.M.

So, perhaps Sir, he stands prepared for the next election. It may be perhaps one of his attempts to get elected from his constituency next time.

Sri H. M. CHANNABASAPPA.—How did he get elected from his constituency though there was no such Sidramapura Tank ?

Sri B. R. SUNTHANKAR.—The Hon'ble Minister does not know that he was elected uncontested.

Sri H. M. CHANNABASAPPA.—It is all the more creditable. There was no attempt even to compete with him.

Sri B. R. SUNTHANKAR.—Because he has to face election next time he has to be more particular and cautious. As my comrade Sri Narasimhan said, it is a clear case of favouritism. There are a number of schemes which have been approved by the Government but which are not sanctioned and which are laging behind. In the audit report, we come across a number of items and a number of cases which were not executed at all.

Sri H. M. CHANNABASAPPA.—Will you please name one or two of them which have not been sanctioned and not executed ?

Sri B. R. SUNTHANKAR.—At the time of the discussion on the audit Report, I will certainly do it. I will quote here one instance of the late execution of Rakaskop in Belgaum.

Sri H. M. CHANNABASAPPA.—It is in full swing. The Hon'ble Member can go and see it.

Sri B. R. SUNTHANKAR.—At present it is in full swing. But that is an instance of late execution of works. There are so many things, which we can point out. So, the administration of this Ministry is not fool-proof. There are so many lapses and so many omissions on the part of the Department. Anyhow, this particular item seems to have cropped up all of a sudden. I do not understand what was the urgency or expediency to take up this work at this juncture. This could have been easily included in the next year's budget. Now Demand No. 58. Much has been said about this. I should like to say simply that this item could have been easily contemplated at the time of framing the budget because this has been before us for the last two years and the Act was passed at the time of the Budget. It would have been right on the part of the Government to include this item in the original estimates. This is a serious omission on the part of the Government which I think cannot be pardoned. With these remarks, I come to the close of my speech. Again, I would request the Government not to place us in an awkward position and put such new services which are not in the nature of urgent services and we should not be asked to vote for the omissions and faults of the Government.

†ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಇದುವರೆಗೂ ಎಲ್ಲರೂ ಮಾತನಾಡಿದ್ದನ್ನು ಕೇಳಿದ್ದೇನೆ. ಶ್ರೀಮಾನ್ ಮೂಡಲಗಿರಿಗೌಡರು, ಮತ್ತು ಶ್ರೀ ನರಸಿಂಹೇಗೌಡರು ಸ್ಪಷ್ಟವಾಗಿ ಐಟಂವಾರು ವಿವರಿಸಿದ್ದಾರೆ. ಸರಕಾರವು ಮುಂದೆ ತಪ್ಪು ಮಾಡುವುದಕ್ಕೆ ಸಾಧ್ಯವಾದ ಮಟ್ಟಿಗೂ ಅವಕಾಶ ಕೊಡಬಾರದು. ಎಷ್ಟು ಬಡ್ಜೆಟ್ಟಿನಲ್ಲಿ ಅವಕಾಶವಿದ್ದರೂ ಸಪ್ಲಿಮೆಂಟರಿ ಬಡ್ಜೆಟ್ಟನ್ನು ಕೇಳಿ ತಮ್ಮ ಸಂಸ್ಥೆಯನ್ನು ಒಲಿಸಿಕೊಳ್ಳುವ ದೃಷ್ಟಿಯಿಂದ ಅನೇಕ ಸಂಸ್ಥೆಗಳನ್ನು ಅನೇಕ ಬಗೆಯಲ್ಲಿ ರಚಿಸಿ ತಮ್ಮ ಕಡೆ ಜನರನ್ನು ಒಲಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆಂದು ಒಟ್ಟಿನಲ್ಲಿ ಹೇಳಬಹುದು. ಕೋಟ್ಯಂತರ ರೂಪಾಯಿಗಳ ನೀರಾವರಿ ಕೆಲಸಗಳು ನಡೆಯುತ್ತಾ ಇರುವಾಗ P.W.D. ಮಿನಿಷ್ಟರಿಗೆ ತುರುವೇಕೆರೆ ತಾಲ್ಲೂಕಿಗೆ ಒಂದು ಲಕ್ಷಾಂತರ ರೂಪಾಯಿಗಳ ಪ್ರಾಜೆಕ್ಟು ಇಲ್ಲದಕಡೆ 5–10 ಮೈಲಿ ಆಗತಕ್ಕ ಸಣ್ಣ ಸಣ್ಣ ರಸ್ತೆಗಳಲ್ಲಿ ತಿರುಗಾಡುವುದಕ್ಕೆ ಕಾಲ ಎಲ್ಲಿ ಇತ್ತು? ಇಬ್ಬರು ಮಂತ್ರಿಗಳು 3–4 ದಿವಸ ಆ ಸಣ್ಣ ತಾಲ್ಲೂಕಿನಲ್ಲಿ 4–5 ಮೈಲಿ ಸಣ್ಣ ಸಣ್ಣ ರಸ್ತೆಗಳಲ್ಲಿ ತಿರುಗಾಡಲು ಎಗ್ಜಿಕ್ಯುಟೀವ್ ಇಂಜಿನಿಯರ್, ಅಸಿಸ್ಟೆಂಟ್ ಇಂಜಿನಿಯರ್ ಚೀಫ್ ಇಂಜಿನಿಯರ್ ಇವರುಗಳೊಡನೆ ಹೋಗಿದ್ದಾರೆ. ಬೇರೆ ಜಲಾಶಯಗಳಲ್ಲಿ ಕೋಟ್ಯಂತರ ರೂಪಾಯಿ ಲುಕ್ಸಾನು ಆಗುತ್ತಾ ಇರುವ ಕಾಲದಲ್ಲಿ ಇಂಥಾ ಸಾಮಾನ್ಯ ಕೆಲಸವನ್ನೇ ಮಹತ್ವವಾದ ಕಾರ್ಯವೆಂದು ಭಾವಿಸಿ ಮಂತ್ರಿಗಳು ಹೋಗಿ ಇನ್‌ಸ್ಪೆಕ್ಟು ಮಾಡಿ ಜನರನ್ನು ತಮ್ಮ ಕಡೆ ಎಳೆದುಕೊಳ್ಳಲು ಪ್ರಯತ್ನ ಮಾಡುವುದು ಒಳ್ಳೆಯದಲ್ಲ—ಎಂದು ಹೇಳುತ್ತೇನೆ. ಇನ್ನು N.E.S. ಮತ್ತು ಬ್ಲಾಕ್ ಡೆವಲಪ್‌ಮೆಂಟ್ ವಿಷಯವಾಗಿ ಎಲ್ಲರೂ ಹೇಳಿದ ಹಾಗೆ ಸೇವಕ, ಸೇವಕಿಯರನ್ನು ನೇಮಿಸುವ ವಿಷಯದಲ್ಲಿ ನನ್ನ ಅಭ್ಯಂತರವೇನೂ ಇಲ್ಲ. ಆದರೆ ಆ ಕಾರ್ಯ ಫಲಪ್ರದವಾಗಿಲ್ಲ. ಅವರಿಂದ ಏನೂ ಸಾರ್ಥಕವಾಗುವುದಿಲ್ಲ. ಆದುದರಿಂದ ಅದಕ್ಕೆ ಖರ್ಚು ಮಾಡುವ ಹಣವನ್ನು ಮಿಗಿಸಿ ಅದನ್ನು ಬೇರೆ ಐಟಮ್‌ಗಳಿಗೆ

(ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ)

ಉಪಯೋಗಿಸಬೇಕು ಎಂದು ನಾನು ಸಲಹೆ ಮಾಡುತ್ತೇನೆ.

ಒಬ್ಬ ಸದಸ್ಯರು.—ನಿಮ್ಮ ತಾಲ್ಲೂಕಿನಲ್ಲಿ ಎನ್.ಇ.ಎಸ್. ಬ್ಲಾಕು ಇಲ್ಲ. ಎಲ್ಲಿ ನೋಡಿದಿರಿ ?

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—ಎಲ್ಲಾ ಕಡೆಗೂ ಟೂರ್ ಮಾಡಿ ನೋಡಿದೆ. ನಿಮಗೆ ಟಿ.ಎ., ಡಿ.ಎ. ಬರುತ್ತವೆ. ಟೂರ್ ಮಾಡಿದರೆ ನನಗೆ ಅದೂ ಬರುವುದಿಲ್ಲ. ಪ್ರತಿಯೊಂದು ಸಾರಿಯೂ ನಾವು ಈ ಬ್ಲಾಕುಗಳನ್ನು ಕೇಳುವುದಕ್ಕೆ ಕಾರಣವಿಷ್ಟೆ. ಎಲ್ಲಾ ಕಡೆಯಲ್ಲಿಯೂ ವೇಸ್ಟ್ ಆಗುವ ದುಡ್ಡು ನಮ್ಮ ತಾಲ್ಲೂಕಿನಲ್ಲಿಯೂ ಸ್ವಲ್ಪ ವೇಸ್ಟ್ ಆಗಲಿ ಎನ್ನುವ ಒಂದೇ ದೃಷ್ಟಿಯಿಂದ. ಇದಕ್ಕೆ ಸಂಬಂಧಪಟ್ಟ ಇನ್ನೊಂದು ವಿಷಯವೇನೆಂದರೆ ಬ್ಲಾಕ್ ಕೊಡುವಾಗ ದಯೆದಾಕ್ಷಿಣ್ಯಗಳಿಗೆ ಒಳಗಾಗಬೇಕಾದ್ದು ಇಲ್ಲ. ಅನೇಕ ಸಾರಿ ಈ ವಿಷಯವನ್ನು ಹೇಳಿದ್ದೇನೆ. ಮೂರು-ನಾಲ್ಕು ತಾಲ್ಲೂಕುಗಳಲ್ಲಿ ಅಕ್ಕಪಕ್ಕದಲ್ಲಿ ಕೊಟ್ಟು ಸಬ್-ಡಿವಿಜನ್ ಆಫೀಸರ ಹೆಡ್‌ಕ್ವಾರ್ಟರ್ಸ್ ಇದ್ದರೂ ಅಂಥಾ ಕಡೆ ಕೊಡದೆ, ಮುಂದೆ 16–20 ಮೈಲಿ ದೂರ ಇರುವ ತಾಲ್ಲೂಕಿಗೆ ಕೊಡಲು ಕಾರಣವೇನು ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಪ್ರಯೋಜನವಿಲ್ಲ ಎಂದು ಹೇಳಿದಿರಿ ?

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—ನಮ್ಮಲ್ಲೂ ಸಹ ವೇಸ್ಟ್ ಆಗಲಿ ಎಂದು ಹೇಳಿದೆ. ಅನೇಕರು ಬೆಂಕಿ ಅನಾಹುತದ ವಿಷಯದಲ್ಲಿ ಹೇಳಿದರು. ಕೊಟ್ಟಿಗೆಗೆ ಬೆಂಕಿ ಬಿದ್ದಾಗ ಬಾವಿ ತೆಗೆಯಿರಿ ಎಂದು ಹೇಳಿದಂತೆ ಬೆಂಕಿ ಅನಾಹುತವಾದಾಗ ಕೊಡುವುದು 15 ಅಥವಾ 20 ರೂಪಾಯಿಗಳು. ದಳ್ಳಾಳಿ ಹೋಗುತ್ತಾ ಕೊನೆಗೆ ಅವರಿಗೆ 3 ರೂಪಾಯಿಗಳು ಸಿಕ್ಕುತ್ತವೆ. ನೀವು ಕೊಡುವ 20 ರೂಪಾಯಿಗಳಿಗೆ ವರ್ಷಾನುಗಟ್ಟಲೆ ಎಲ್ಲಾ ಆಫೀಸಿಗಳಿಗೂ ತಿರುಗಿಸಿ ಕೊನೆಗೆ ನನ್ನಂಥವನನ್ನು ಕರೆದುಕೊಂಡು ಹೋಗಿ ದಳ್ಳಾಳಿ ಕೊಟ್ಟು ತಮ್ಮ ಕೆಲಸವನ್ನು ಮಾಡಿಕೊಂಡು ಬರುತ್ತಾರೆ. ಹೀಗೆ ಎರಡು ರೂಪಾಯಿಗಳು ಸಿಕ್ಕುವುದಕ್ಕೆ ಎರಡು ವರ್ಷ ಮಾಡಬೇಡಿ. ದುಡ್ಡು ದುರುಪಯೋಗವಾಗುತ್ತದೆ. ಸರ್‌ಪ್ಲಸ್ ಗ್ರಾಂಟು ಕೊಟ್ಟು ನೊಂದವರಿಗೆ ತಕ್ಷಣ ಪರಿಹಾರ ಕೊಡುವುದಕ್ಕೆ ಏರ್ಪಾಟು ಮಾಡಿ ಎಂದು ಹೇಳುತ್ತೇನೆ.

ಪಂಚಾಯತಿಯ ವಿಚಾರದಲ್ಲಿ ಪಂಚಾಯತಿ ಎಲೆಕ್ಷನ್ ಖರ್ಚನ್ನು ಹಳ್ಳಿಯ ಮೇಲೆ ಹಾಕುತ್ತೀರಿ. ದಯವಿಟ್ಟು ಹಾಗೆ ಮಾಡಬೇಡಿ.

ಈ ಚುನಾವಣೆಗಳ ಬಗ್ಗೆ ಈಗಾಗಲೇ ಗೊಂದಲ ವೆದ್ದಿದೆ. ಈ ವೆಚ್ಚವನ್ನು ಮೊದಲ ಸಾರಿಗೇನೆ ಈ ಸಂಸ್ಥೆಗಳ ಮೇಲೆ ಹಾಕಬೇಡಿ ಎಂದು ಹೇಳುತ್ತಿದ್ದೇನೆ. ಈ ಸಾರಿಗಾದರೂ ಈ ವೆಚ್ಚವನ್ನು ಸಂಪೂರ್ಣವಾಗಿ ಸರ್ಕಾರದವರೇ ವಹಿಸಬೇಕೆಂದು ಹೇಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಸರ್ಕಾರದವರು ಈ ಸ್ಥಳೀಯ ಸಂಸ್ಥೆಗಳಿಗೆ ವರ್ಷಕ್ಕೆ 2½ ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದಾರೆಂಬುದು ತಮಗೆ ಗೊತ್ತಿದೆಯೇ ?

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—ತಮಗೆ ಗೊತ್ತಿದ್ದರೆ ಅಷ್ಟೇ ಸಾಕು. ತಾವು ತಮ್ಮ ಮೇಧಾವಂತಿಕೆಯನ್ನು ತಮ್ಮ ಭಾಷಣದಲ್ಲಿ ತಿಳಿಸಬಹುದು. ಆದರೆ ನನಗೆ ಗೊತ್ತಿರುವ ಮಟ್ಟಿಗೆ ಹಳ್ಳಿಗಳಲ್ಲಿ ಈ ಪಂಚಾಯತಿಗಳ ಚುನಾವಣೆಗಳು ಇಲ್ಲಿಯತನಕ ನಡೆದಿರುವುದಿಲ್ಲ. ಮುಂದೇನಾದರೂ ಕಾಂಗ್ರೆಸ್ ಪಕ್ಷದ ಜನಗಳೊಂದು ಕಿತಾಪತಿ ತಂದಿಟ್ಟರೆ ಆಗೇನಾದರು, ಚುನಾವಣೆಗಳಿಗೆ ಅವಕಾಶವಾದರೂ ಆಗಬಹುದು. ಆದರೆ ಸದ್ಯಕ್ಕೆ ಈ ಗ್ರಾಮ ಪಂಚಾಯತಿಗಳ ವಿಚಾರದಲ್ಲಿ ನಾನು ಹೇಳುವುದು ಇಷ್ಟೆ; ಸರ್ಕಾರದವರೇನೂ ಆ ಬ್ಯಾಲೆಟ್ ಪೇಪರುಗಳನ್ನಾಗಲಿ, ಅಥವಾ ಓಟಿಂಗ್ ಸ್ಲಿಪ್‌ಗಳನ್ನಾಗಲೀ ಪ್ರಿಂಟ್ ಮಾಡಿಸುವುದೇ ಬೇಡವೆ. ಆ ಹಳ್ಳಿಯಲ್ಲಿರತಕ್ಕ ಜನಗಳು ಒಂದಾಗಿ ಚೆನ್ನಾಗಿ ಬಾಳುವುದಕ್ಕೆ ಒಂದು ಅವಕಾಶ ಮಾಡಿಕೊಡಿ. ಊರುಗಳಲ್ಲಿ ಪಾರ್ಟಿಗಳನ್ನು ತಂದಿಡ ಬಾರದು. ತಮ್ಮ ಅಭಿಪ್ರಾಯವನ್ನು ನೋಡಿದರೆ ಈ ಗ್ರಾಮ ಪಂಚಾಯತಿ ಕಾನೂನಿಂದ ಊರು ಊರುಗಳೆಲ್ಲ ಪಾರ್ಟಿಗಳಾಗಿ ಹೈ ಕೋರ್ಟಿನತನಕ ಬಡಿದಾಡುವಂತೆ ಮಾಡಬೇಕೆಂಬ ಉದ್ದೇಶವನ್ನಿಟ್ಟುಕೊಡಿರುವಂತೆ ಕಾಣುತ್ತಿದೆ. ಆದರೆ ಅಂಥಾದ್ದಕ್ಕೆಲ್ಲ ಸರ್ಕಾರದವರು ದಯವಿಟ್ಟು ಅವಕಾಶ ಮಾಡಿಕೊಡಬಾರದು ಎಂದು ನಾನು ಅವರಲ್ಲಿ ಬೇಡಿಕೊಳ್ಳುತ್ತೇನೆ. ಆ ಮಟ್ಟದ ವರೆಗೂ ಆಡಳಿತ ಪಕ್ಷ ಇಳಿಯಬಾರದೆಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಈ ಮೈನರ್ ಇರಿಗೇಷನ್ ಬಾಬುಗಳಿಗೆ ಬಂದರೆ ಸುಮಾರು ಇಲ್ಲಿಗೆ 10–15 ವರ್ಷಗಳಿಂದಲೂ ತೀರ್ಮಾನವಾಗದೇ ಹಾಗೇ ಮುಲ್ಕಿ ನಿಂತಿರತಕ್ಕ ಕೆಲಸ ಕಾರ್ಯಗಳು ಕಾರ್ಯರೂಪಕ್ಕೆ ಬರುವುದೆಂದು ಎಂದು ಜನರು ಕೇಳುತ್ತಿದ್ದಾರೆ. ಯಾವ ಪೇಪರ್ ಎಲ್ಲಿ ಪೆಂಡಿಂಗ್ ನಿಂತಿದೆ ಎನ್ನುವುದನ್ನು ಪತ್ತೆಹಚ್ಚುವುದೇ ಬಹಳ ಕಷ್ಟವಾಗಿದೆ. ಕೆಲಸದ ಮಾಹಿತಿಯಿಲ್ಲದವರೆಲ್ಲ ಅಸಿಸ್ಟೆಂಟ್ ಇಂಜಿನಿಯರುಗಳಾಗಿದ್ದಾರೆ. ಅವರಿಗೆ ಯಾರು ತರಪೇತುಕೊಟ್ಟರೋ ದೇವರೇ ಬಲ್ಲ! ಆ ಅಸಿಸ್ಟೆಂಟ್ ಇಂಜಿನಿಯರುಗಳಿಗಿಂತ ಅವರ ಕೈಕೆಳಗೆ ಕೆಲಸ ಮಾಡುತ್ತಿರುವ ಆ ಸಬ್-ಓವರ್‌ಸೀಯರುಗಳು ಸಾವಿರ ಪಾಲು ಉತ್ತಮ. ಅವರಿಗೆ ಕೆಲಸದಲ್ಲಿ ಚೆನ್ನಾಗಿ ಮಾಹಿತಿಯಿರುತ್ತದೆ. ಅವರಿಂದಾದರೂ ಆ ಅಸಿಸ್ಟೆಂಟ್ ಇಂಜಿನಿಯರುಗಳು ಏಕೆ ಕೆಲಸವನ್ನು ಕಲಿಯಬಾರದು ? ಆದರೆ ಅವರಿಗೆ ಅವರ ಕೈಕೆಳಗಿರತಕ್ಕವರಿಂದ ಕೆಲಸ ಕಲಿಯಲು ನಾಚಿಕೆಯೇನೋ ! ಈ ದಿವಸ ಹೊಸದಾಗಿ ಇಂಜಿನಿಯರಿಂಗ್ ಡಿಗ್ರಿ ಪಡೆದು ತಕ್ಷಣ ಅಸಿಸ್ಟೆಂಟ್ ಇಂಜಿನಿಯರುಗಳಾಗಿ ಬಂದಿರತಕ್ಕವರನ್ನು ನನ್ನ ಎದುರಿನಲ್ಲಿ ಕೂಡಿಸಿ ಅವರಿಂದ ಯಾವುದಾದರೂ ಒಂದು ಕಂಟ್ರಾಕ್ಟ್ ಕೆಲಸದ ಎಸ್ಟಿಮೇಟನ್ನು ಸರಿಯಾಗಿ ಮಾಡಿಸಿಕೊಟ್ಟರೆ ಈ ದಿವಸವೇ ನಾನು ನನ್ನ ಈ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತೇನೆ. ಅವರಿಂದ ಈ ಕೆಲಸ ಮಾಡಲು ಖಂಡಿತ ಸಾಧ್ಯವಿಲ್ಲ. ಅವರೇನಿದ್ದರೂ ಸೊಗಸಾಗಿ ಬಟ್ಟೆ ಹಾಕಿಕೊಂಡು, ಹೇಗೂ ಸರ್ಕಾರ ಅವರಿಗೆ ತಿಂಗಳಿಗೆ 200-250 ರೂಪಾಯಿಗಳ ಸಂಬಳ ಕೊಡುತ್ತಿರಬಹುದು, ಈ ಊರಿಂದ ಆ ಊರಿಗೆ ಆ ಊರಿಂದ ಮತ್ತೊಂದೂರಿಗೆ ಸೈಕಲ್ ಹಾಕಿಕೊಂಡು ಸುಮ್ಮನೆ ತಿರುಗಾಡುತ್ತಿದ್ದಾರೆ; ಇಷ್ಟಕ್ಕೆ ಇವರು ಚೆನ್ನಾಗಿರಬಹುದು. ಇದರಿಂದ ಸರ್ಕಾರಕ್ಕೇನಾದರೂ ಸಹಾಯ ದೊರೆಯಬೇಕಾಗಿದ್ದರೆ ಇವರೆಲ್ಲರಿಗೂ ಆ ಸಬ್-ಓವರ್‌ಸೀಯರುಗಳಿಂದ ವರ್ಷಾರುತಿಂಗಳು ಟ್ರೈನಿಂಗ್ ತೆಗೆದುಕೊಳ್ಳುವಂತೆ ಮಾಡಲಿ.

ಇನ್ನು ಈ ರಸ್ತೆಗಳಲ್ಲಿ ಕೆಲವನ್ನು ಸರ್ಕಾರದವರು ತಮ್ಮ ಹತೋಟಿಯೊಳಗೆ ತೆಗೆದುಕೊಳ್ಳುವುದಾಗಿ ತಿಳಿಸಿದ್ದಾರೆ. ಆ ವೇಳೆಯಲ್ಲಿ ಸರ್ಕಾರದಲ್ಲಿ ಒಂದು ಇನ್‌ಫ್ಲುಯೆನ್ಸ್ ಮಾಡತಕ್ಕ ಜನಗಳೇನಿದ್ದಾರೆ ಅವರು

ಯಾರೂ ಮಧ್ಯೆ ಸೇರಿ ಒಂದು ಗೊಂದಲವೆಬ್ಬಿಸುವುದಕ್ಕೆ ಅವಕಾಶ ವಿರಲಾರದೆಂದೂ, ಆ ಕೆಲಸವೇನಿದ್ದರೂ ಸರ್ಕಾರದವರೇ ಸಂಪೂರ್ಣ ಸ್ವಾತಂತ್ರ್ಯದಿಂದ ಆಯಾ ರಸ್ತೆಗಳ ಯೋಗ್ಯತೆಯ ಮೇಲೆ ಅದನ್ನು ನಿರ್ಧರಿಸುವ ಅವಕಾಶವನ್ನಿಟ್ಟುಕೊಳ್ಳಬೇಕೆಂದು ಹೇಳಿ ನನಗೆ ಇಷ್ಟು ಮಾತುಗಳನ್ನಾಡಲು ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ನಾನು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಮಾನ್ಯ ಅಧ್ಯಕ್ಷರೇ, ಈ ದಿವಸ ಸರ್ಕಾರದವರು ನಮ್ಮ ಮುಂದೆ ತಂದಿರತಕ್ಕ ಈ ಹೆಚ್ಚುವರಿ ಬೇಡಿಕೆಗಳ ಬಗ್ಗೆ ಹಣ ಕೇಳುತ್ತಿರುವುದನ್ನು ನೋಡಿದರೆ ನಮ್ಮ ಹಣಕಾಸಿನ ಮಂತ್ರಿಗಳು ಈ ಬೇಡಿಕೆಗಳನ್ನು ಯಾವ ಉದ್ದೇಶದಿಂದ ತಂದಿದ್ದಾರೆ. ಈ ಬೇಡಿಕೆಗಳನ್ನು ಅವರು ಯಾವ ಒಂದು ಕಾನೂನನ್ನನುಸರಿಸಿ ಒಂದು ತಾತ್ತ್ವಿಕ ದೃಷ್ಟಿಯಿಂದ ಈ ಅಂದಾಜುಗಳನ್ನು ತಯಾರಿಸುತ್ತಾರೆ ಎನ್ನುವುದನ್ನು ತಿಳಿದುಕೊಳ್ಳುವುದೇ ನನಗೆ ಬಹಳ ಕಷ್ಟವಾಗಿದೆ. ನಾವು ಯಾವ ದೃಷ್ಟಿಯಿಂದ ನೋಡಿದರೂ ಈ ಹೆಚ್ಚುವರಿ ಅಂದಾಜುಗಳನ್ನು ಈ ರೀತಿ ಸಭೆಯ ಮುಂದೆ ಇಡಲೇ ಬಾರದೆಂದು ಹೇಳುತ್ತೇನೆ. ಒಂದಾವರ್ತಿ ಸರ್ಕಾರದವರು ವರ್ಷಕ್ಕೊಂದು ಬಡ್ಜೆಟನ್ನು ತಯಾರಿಸಿದ ಮೇಲೆ, ಅದಕ್ಕೆ ಈ ಸಭೆಯ ಅನುಮತಿಯನ್ನು ಪಡೆದುಕೊಂಡ ಮೇಲೆ, ಆ ಬಡ್ಜೆಟ್ಟಿನಲ್ಲಿ ಸೂಚಿಸಿರುವ ಪ್ರಕಾರ ಯಾವ ಯಾವ ಭಾಗಕ್ಕೆ ಎಷ್ಟೆಷ್ಟು ಹಣವನ್ನು ಯಾವ ಯಾವ ಬಾಬಿನಲ್ಲಿ ಖರ್ಚು ಮಾಡಬೇಕೆಂದು ತೀರ್ಮಾನವಾಗಿರುತ್ತದೆಯೋ ಆಯಾ ಬಾಬುಗಳಿಗೆ ಮತ್ತು ಆಯಾ ಬಾಬುಗಳಲ್ಲಿ ಅಷ್ಟಷ್ಟು ಹಣ ಖರ್ಚಾಗಲೇ ಬೇಕು. ಅದಕ್ಕೆ ನಾವೆಲ್ಲರೂ ಒಪ್ಪಿಗೆಯನ್ನು ಕೊಟ್ಟಿರುತ್ತೇವೆ. ಆದರೆ ಪರಿಸ್ಥಿತಿ ಹಾಗಿರುವಾಗ ಈ ದಿವಸ ಸರ್ಕಾರದವರು ಏನೋ ಒಂದು ಉದ್ದೇಶವನ್ನಿಟ್ಟುಕೊಂಡು ಆ ಉದ್ದೇಶಕ್ಕಾಗಿ ಈಗ ಹೆಚ್ಚಿಗೆ ಹಣ ಬೇಕಾಗಿದೆ, ಅದಕ್ಕೆ ಸಭೆಯವರು ಅನುಮತಿ ಕೊಡಬೇಕೆಂದು ಕೇಳುತ್ತಿರುವುದು ಒಂದು ಅಪಾರ್ಥಕ್ಕೆ ಕಾರಣವಾಗಿರುತ್ತದೆ. ಈ ಹಿಂದೆ ಕಾನೂನಿನ ಪ್ರಕಾರವಾಗಿ ಈ ಸಭೆಯವರು ಯಾವುದಾದರೊಂದು ಕೆಲಸಕ್ಕೆ ಒಂದು ವರ್ಷದೊಳಗೆ ಖರ್ಚು ವೆಚ್ಚಗಳಿಗಾಗಿ ಕೊಟ್ಟಿರತಕ್ಕ ಹಣವೇನಾದರೂ ಹಾಗೊಂದು ವೇಳೆ ಸಾಲದೆ ಕೊರತೆ ಬಿದ್ದಿದ್ದರೆ ಅಂಥ ಸಂದರ್ಭಗಳಲ್ಲಿ ಈ ಹೆಚ್ಚುವರಿ ಬೇಡಿಕೆಗಳಿಗೆ ಈ ಸಭೆಯವರು ಅನುಮತಿ ಕೊಡಬಹುದೆಂಬ ಒಂದು ನಿಯಮವಿದೆ. ಹಾಗೆ ಈ ದಿವಸ ನಾವು ಹಿಂದೆ ಹಣ ಒದಗಿಸಿದ್ದ ಬಾಬುಗಳಿಗೇನಾದರೂ ಹಣದ ಕೊರತೆ ಬಂದಿದ್ದರೆ ಆಗಬಹುದಾಗಿತ್ತು. ಆದರೆ ನಾವು ಈ ಹಿಂದೆ ಆಯಾ ಬಾಬುಗಳ ಆವಶ್ಯಕತೆಗೆ ತಕ್ಕಷ್ಟು ಹಣ ಒದಗಿಸಿದ್ದೇವೆ. ಸರ್ಕಾರದವರು ಮೊದಲೇ ಇಂತಿಂತಹ ಕೆಲಸಗಳಿಗೆ ಈ ವರ್ಷ ಇಷ್ಟಿಷ್ಟು ಹಣ ಖರ್ಚಾಗಬೇಕಾಗಿದೆ, ನಾವು ಸಮತಾವಾದ ಸಮಾಜ ರಚನೆ ಮಾಡಲು ಹೊರಟಿದ್ದೇವೆ ಎಂದು ಒಂದೇ ಸಾರಿಗೆ ಏತಕ್ಕೆ ಕೇಳಲಿಲ್ಲ? ಹಾಗೊಂದು ವೇಳೆ ಅವರು ಎಲ್ಲಾ ಲೆಕ್ಕಾಚಾರ ಹಾಕಿಕೊಂಡು ಹಣ ಕೇಳಿದ್ದರೆ ಈಗ ಅದೇಕೆ ಹೀಗೆ ಸಾಲದೆ ಬಂತು, ಅದಕ್ಕೆ ಅಂಥ ಕಾರಣಗಳೇನಿದ್ದುವು, ಅಥವಾ ಹಾಗೆ ಹೆಚ್ಚು ಕಡಮೆ ಆಗದ ರೀತಿಯಲ್ಲಿ ಎಸ್ಟಿಮೇಟ್ ಮಾಡಿ ಹಣ ಕೊಡುವಂಥ ಒಂದು ದಕ್ಷತೆಯೇನಾದರೂ ಸರಕಾರಕ್ಕೆ ಕಡಮೆಯಾಗಿತ್ತೇ? ಏನು ಎನ್ನತಕ್ಕ ವಿಚಾರಗಳೊಂದೂ ಈಗ ಕಂಡು ಬರುತ್ತಿಲ್ಲ. ಆದರೆ ಈ ದಿವಸ ಸರ್ಕಾರದವರು ಈ ಹಿಂದೆ ಯಾವ ಕೆಲಸಗಳನ್ನು ಕೈಗೊಂಡಿದ್ದಾರೋ ಅಂಥ ಕೆಲಸಗಳಿಗೀಗ ಹಣ ಕಡಮೆ ಬಿದ್ದಿದೆಯೋ ಎಂಬುದನ್ನು ನೋಡಿದರೆ ಇಲ್ಲಿ ಕಾಣತಕ್ಕ ಪರಿಸ್ಥಿತಿ ಹಾಗಿಲ್ಲ. ಹಿಂದೆ ಪ್ರಾರಂಭಿಸಿರುವ ಕೆಲಸಗಳು ಮುಂದುವರಿಯದೆ ಅವು ಹಾಗೆಯೇ ನಿಂತಿದ್ದರೂ ಈಗ ಸರ್ಕಾರದವರು ಬೇರೆ ಯಾವ ಯಾವುದೋ ಐಟಂಗಳಿಗೆ ಹಣಬೇಕೆಂದು ಆ ಹಣವನ್ನು ಈಗ ಸಪ್ಲಿಮೆಂಟರಿ ಗ್ರಾಂಟಿನ ರೂಪದಲ್ಲಿ ಖರ್ಚು ಮಾಡಲು ಅನುಮತಿ ಕೊಡಿ ಎಂದು ಕೇಳುತ್ತಿದ್ದಾರೆ. ಕೆಲವು ಕೆಲವು ರಸ್ತೆ ಐಟಂಗಳಿಗೆ ಈ ಹಿಂದೆ ನಾವೇನು ಅವುಗಳಿಗೆ ಹಣವನ್ನೊದಗಿಸಿದ್ದೇವೆಯೋ ಆ ಬಾಬುಗಳಿಗೆ ಆ ಹಣವನ್ನು ಖರ್ಚು ಮಾಡದೆ ಈಗ ಆ ಹಣವೆಲ್ಲ ಹಾಗೆಯೇ ಉಳಿದು ಹೋಗಿದೆ. ಆ ಹಣವನ್ನು ಬೇರೆ ಯಾವುದೋ ಒಂದು ಹೊಸ ರಸ್ತೆಗೆ ಖರ್ಚು ಮಾಡುತ್ತೇವೆಂದು ನಮ್ಮ ಒಪ್ಪಿಗೆ ಕೇಳುತ್ತಿರುವುದನ್ನು ನೋಡಿದರೆ ಇದು ಸರ್ಕಾರದವರಲ್ಲಿರತಕ್ಕ ಒಂದು ದಕ್ಷತೆಯ ಶೂನ್ಯತೆಯನ್ನು ತೋರಿಸುತ್ತದೆ. ಮೈನರ್ ಇರಿಗೇಷನ್ ಬಾಬಿಗೋಸ್ಕರವಾಗಿ ಮೀಸಲಾಗಿಟ್ಟಿದ್ದ ಹಣವನ್ನು ಈ ದಿವಸ ಬೇರೆ ಬಾಬಿಗೆ ಖರ್ಚುಮಾಡಲು ಹೊರಟಿರುವುದನ್ನು ನೋಡಿದರೆ ಇದು ನಿಜವಾಗಿಯೂ ಸರ್ಕಾರದಲ್ಲಿರತಕ್ಕ ದಕ್ಷತೆ ಶೂನ್ಯವಾಗಿದೆಯೆಂಬುದನ್ನು ಎತ್ತಿ ತೋರಿಸುತ್ತದೆ. ರಾಯಚೂರು ಜಿಲ್ಲೆಯಲ್ಲಿ ಮೇಜರ್ ಹೆಡ್ಡಿನಲ್ಲಿ ತೆಗೆದಿಟ್ಟಿದ್ದ ಹಣ ಉಳಿಯುತ್ತದೆ, ಅದನ್ನು ಬೇರೆ ಯಾವುದೋ ಒಂದು ರಸ್ತೆಗಾಗಿ ಖರ್ಚುಮಾಡಲು ಹೊರಟ್ಟಿದ್ದೇವೆಂಬುದು ಸರ್ಕಾರದವರ ಒಂದು ವಕ್ರದೃಷ್ಟಿಯನ್ನು ತೋರಿಸುತ್ತದೆ. ಹಣಕಾಸಿನ ವ್ಯವಸ್ಥೆಯಲ್ಲಿ ಇಂಥ ವಕ್ರದೃಷ್ಟಿಯಿರಬಾರದೆಂದು ಹೇಳುತ್ತೇನೆ. ಈ ಹಣಕಾಸನ್ನು ಗಳಿಸುವ ಮತ್ತು ವೆಚ್ಚ ಮಾಡಲು ವ್ಯವಸ್ಥೆಯ ಸಂಪೂರ್ಣ ಜವಾಬ್ದಾರಿ ಈ ಸಭೆಗೆ ಸೇರಿದ್ದಾಗಿದೆ. ಸರ್ಕಾರದವರು ಹೀಗೆಲ್ಲಾ ಮಾಡುತ್ತಿರುವುದಕ್ಕೆ ನಾವೇನಾದರೂ ಅನುಮತಿ ಕೊಟ್ಟದ್ದೇ ಆದರೆ ಇದರಿಂದ ನಮ್ಮಗಳ ಸ್ಥಾನ ಮರ್ಯಾದೆಯೂ ಹೋಗಬೇಕಾದ ಪ್ರಸಂಗ ಬರುತ್ತದೆ.

ಈ ಹಿಂದೆ ಸರ್ಕಾರದವರು ಮೈಸೂರು ಸಂಸ್ಥಾನದ ಯಾವ ಯಾವ ಭಾಗಗಳಲ್ಲಿ ಎಷ್ಟೆಷ್ಟು ಇರಿಗೇಷನ್ ಕಾಂಗಾರಿಗಳನ್ನು ಮೈನರ್ ಹೆಡ್ಡಿನಲ್ಲೂ ಮೇಜರ್ ಹೆಡ್ಡಿನಲ್ಲೂ ತೆಗೆದುಕೊಳ್ಳಬೇಕು, ಅವುಗಳಿಗೆ ಪ್ರತಿಯೊಂದಕ್ಕೂ ಎಷ್ಟೆಷ್ಟು ಹಣವನ್ನು ಖರ್ಚು ಮಾಡಬೇಕು, ಆಯಾ ಬಾಬುಗಳಿಗೆ ತೆಗೆದಿಟ್ಟಿದ್ದ ಹಣ ಸರಿಯಾಗಿ, ನ್ಯಾಯವಾದ ರೀತಿಯಲ್ಲಿ ಆಯಾ ಬಾಬುಗಳಿಗೇ ವೆಚ್ಚವಾಗಿರುತ್ತದೆಯೇ ಎನ್ನತಕ್ಕದ್ದೊಂದನ್ನೂ ಗಮನಿಸದೆ, ಅಲ್ಲೊಂದು ಬಾಬು, ಇಲ್ಲೊಂದು ಬಾಬನ್ನು ಪ್ರಾರಂಭಿಸಿ, ಯಾವುದಕ್ಕೊ ಕೊಟ್ಟಿದ್ದ ಹಣವನ್ನು ಇನ್ನಾವುದಕ್ಕೋ ಹಾಕಿ ಆ ಬಾಬಿಗೆ ಆ ಹಣ ಸಾಲದೆ ಬಂದಾಗ ಅಂಥ ಕಾಂಮಗಾರಿಗಳ ಪರವಾಗಿ ಒಂದು ಟೋಕನ್ ಗ್ರಾಂಟ್ ಎಂದು ಹೇಳಿ ಹೀಗೆಲ್ಲಾ ಪದೇ ಪದೇ ಡಿಮ್ಯಾಂಡಗಳನ್ನು ಸರ್ಕಾರಡವರು ತರುತ್ತಿರುವುದರ ಉದ್ದೇಶ ನಮಗೂ ಗೊತ್ತಾಗುತ್ತದೆ. ಈ ರೀತಿ ನೆಪಗಳನ್ನೊಡ್ಡಿ ಹೆಚ್ಚುವರಿ ಗ್ರಾಂಟ್‌ಗಳನ್ನು ಕೇಳುವುದು ಸರ್ವಥಾ ನ್ಯಾಯವಾದುದಲ್ಲ. ಈ ಹಣಕಾಸಿನ ಆಡಳಿತದ ಮೇಲೆ ಹತೋಟಿ ಇಟ್ಟುಕೊಂಡಿರ ಬೇಕಾದ ಜನರು ಯಾರಿರಬೇಕೆಂಬುದನ್ನು ಈಗಾಗಲೇ ನಿರ್ಧರಿಸಿ ಅದಕ್ಕಾಗಿ ಒಂದು ಹಣಕಾಸಿನ ವ್ಯವಸ್ಥಾ ಸಮಿತಿಯೆಂದು ರಚನೆಯಾಗಿದೆ. ಯಾವ ಯಾವ ಕೆಲಸ

(ಶ್ರೀ ಕೆ. ಕೆಂಚಪ್ಪ)

ಕಾರ್ಯಗಳಿಗೆ ಈವರೆಗೆ ಎಷ್ಟೆಷ್ಟು ದುಡ್ಡನ್ನು ಕೊಡಲಾಗಿದೆ, ಯಾವಯಾವ ಕೆಲಸಗಳು ಎಷ್ಟೆಷ್ಟು ಮುಂದುವರೆದಿವೆ, ಯಾವಯಾವ ಬಾಬುಗಳಿಗೆ ಎಷ್ಟೆಷ್ಟು ದುಡ್ಡು ಖರ್ಚಾಗಿದೆ, ಆ ಹಣವನ್ನು ಸರ್ಕಾರದವರು ವಿಚಕ್ಷಣೆಯಿಂದ ಖರ್ಚು ಮಾಡಿದ್ದಾರೆಯೇ ಎನ್ನತಕ್ಕದ್ದನ್ನೆಲ್ಲಾ ವಿಮರ್ಶೆಮಾಡತಕ್ಕದ್ದು, ಆ ಹಣ ಕಾಸಿನ ವ್ಯವಸ್ಥಾಪನಸಮಿತಿಗೆ ಸೇರಿರುತ್ತದೆ. ಆ ಸಮಿತಿಯವರು ಪರಿಶೀಲನೆ ಮಾಡಿ ಯಾವಯಾವ ಬಾಬುಗಳಿಗೆ ಎಷ್ಟೆಷ್ಟು ಹಣಕೊರತೆ ಬಿದ್ದಿದೆ ಎಂದು ತಿಳಿಸಿರುತ್ತಾರೆಂಬುದನ್ನೀಗ ನಾವು ಪರಿಶೀಲನೆ ಮಾಡಬೇಕಾಗಿದೆ.

ನಾನು ನಿದರ್ಶನವಾಗಿ ಒಂದೆರಡು ಐಟಂಗಳನ್ನು ತೆಗೆದುಕೊಂಡು ಅದರ ಮೇಲೆ ನನ್ನ ಅಭಿಪ್ರಾಯವನ್ನು ಹೇಳಿ ನನ್ನಮಾತನ್ನು ಮುಗಿಸುತ್ತೇನೆ. ಪುಟ 14 ರಲ್ಲಿ ಹೇಳಿರುವುದು ಹೇಗಿದೆ ಎಂದರೆ Particular service for the current year is found to be insufficient. ಈ ವರ್ಷದಲ್ಲಿ ಈ ಬಾಬುಗಳಿಗೆ ಕೊಟ್ಟಿರುವ ಹಣ ಕಡಮೆಯಾಗಿದೆಯೆಂದು ನಾನೀಗ ಹೇಳಬಹುದು. ಬೇರೆ ಬೇರೆ ಕೆಲಸಗಳಿಗೆ ಒದಗಿಸಿದ್ದ ಹಣವನ್ನು ಇದಕ್ಕೆ ಹಾಕಿ ಅವಕ್ಕೆ ಕಡಮೆ ಮಾಡಿದೆ ಅಂಥಾದ್ದನ್ನು ಇಲ್ಲಿ ಸಪ್ಲಿಮೆಂಟರಿ ಗ್ರಾಂಟು ಎಂದು ಹೇಳಿದ್ದಾರೆ. ಇದರಲ್ಲಿ ಮಾನ್ಯ ಸದಸ್ಯರ ಕಣ್ಣಿಗೆ ಮಣ್ಣು ಎರಚುವ ಕೆಲಸ ನಡೆದಿದೆ ಎಂದು ನಾನು ಎಂದುಕೊಂಡಿದ್ದೇನೆ. ಹಿಂದೆ ಅನಿರೀಕ್ಷಿತವಾಗಿ ಆಗತಕ್ಕ ಕೆಲಸ ಕಾರ್ಯಗಳಿಗೆ ಹಣವನ್ನೊದಗಿಸಿ ಅಂಥಾದಕ್ಕೆ ಸಪ್ಲಿಮೆಂಟರಿ ಗ್ರಾಂಟು ಅವಶ್ಯಕವೆಂದು ಕೇಳುತ್ತಿದ್ದರು. ಈಗ ಅನಿರೀಕ್ಷಿತವಲ್ಲದ ಕೆಲಸ ಕಾರ್ಯಗಳಿಗೂ ಸಪ್ಲಿಮೆಂಟರಿ ಗ್ರಾಂಟು ಬೇಕೆಂದು ಕೇಳುವುದು ಸರಿಯಲ್ಲ. ನದಿಯ ನೀರನ್ನು ಅನಿರೀಕ್ಷಿತವಾಗಿ ಬೇಸಿಗೆ ಕಾಲದಲ್ಲಿ ಉಪಯೋಗಿಸಿ ಕೊಳ್ಳತಕ್ಕ ಕೆಲಸ ಕಾರ್ಯಗಳಿಗೂ, ಏನೋ ಒಂದು ಕಾರಣದಿಂದ ವಿದ್ಯಾರ್ಥಿಗಳು ಉದ್ರೇಕರಾಗಿ ಸರ್ಕಾರಕ್ಕೆ ನಷ್ಟವನ್ನುಂಟುಮಾಡಿರಬಹುದು—ಅಂಥಹ ಸಂದರ್ಭಗಳಲ್ಲಿ ಅನಿರೀಕ್ಷಿತವಾಗಿ ಸರ್ಕಾರಕ್ಕೆ ತೊಂದರೆ ಯಾದರೆ, ಅಂಥಾದಕ್ಕೆ ಸಪ್ಲಿಮೆಂಟರಿ ಗ್ರಾಂಟು ಕೇಳುವುದು ನ್ಯಾಯ. ಅದನ್ನು ಬಿಟ್ಟು ತಾವು ಈ ರೀತಿ ಖರ್ಚು ಮಾಡುವುದನ್ನು ನಾನು ಒಪ್ಪುವುದಿಲ್ಲ. ಈಗ ಡಿಮ್ಯಾಂಡ್ 51 ರಲ್ಲಿ ಐಟಂ. 1 ರಲ್ಲಿ 2 ಲಕ್ಷ 34 ಸಾವಿರ ರೂಪಾಯಿಗಳನ್ನು ಬಿಜಾಪುರದಲ್ಲಿ ಮೆಟಲಿಂಗ್ ಮತ್ತು ಕ್ರಾಸ್ ಡ್ರೈನೇಜ್ ವರ್ಕ್ಸ್‌ಗಾಗಿ ಮೀಸಲಾಗಿಟ್ಟಿದ್ದೀರಿ. ಇನ್ನು ಒಂದು ಮಾತನ್ನು ಹೇಳಿದ್ದೀರಿ. 'As it was necessary to take up the work immediately, a sum of Rs. 25,000 was advanced from the Contingency Fund. The expenditure can however be met from out of the Savings under the major head' ಎಂದು ಅದರಲ್ಲಿ ಉಳಿಸಿ ಕೊಂಡಿದ್ದೀರಿ. ಆದರೆ ಒಂದರಲ್ಲಿ ಖೋತಾ ಆಗುತ್ತದೆ. ಮೇಜರ್ ಹೆಡ್‌ನಲ್ಲಿ ಕೊಟ್ಟಿರುವ ದುಡ್ಡನ್ನು ಮೈನರ್ ಹೆಡ್‌ನಲ್ಲಿ ಖೋತಾ ಮಾಡಿ ಇದರಲ್ಲಿ ಉಪಯೋಗಿಸುವುದು ಸರಿಯಲ್ಲ. ನಾವು ಉಪ್ಪು, ಕಾರ, ತಿನ್ನುವ ಜನ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನೀವು ತಿನ್ನುವುದಿಲ್ಲವೆಂದು ತಿಳಿದಿದ್ದೇವೆ.

